Registered with the Registrar of Newspapers in India Under No. 50622/86
'Prasada' Bi-Monthly, Vol. 33 Issue No. 6, November-December 2018




ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯಲ್ಲಿ 'ಶಿಕ್ಷಣ ಸಂಭ್ರಮ' ಕಾರ್ಯಕ್ರಮ. ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಚಿತ್ರದಲ್ಲಿ ಡಾ. ಎಸ್. ರಮಾನಂದ ಶೆಟ್ಟಿ, ಡಾ. ವೈ.ಎಸ್. ರಾಜನ್, ಡಾ. ಎಸ್. ಚಂದ್ರಶೇಖರ ಶೆಟ್ಟಿ ಡಾ. ಎಸ್.ಎನ್. ಹೆಗ್ಡೆ, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಎಚ್.ಎಸ್. ಬಲ್ಲಾಳ್, ಶ್ರೀ ಎಸ್. ಸತ್ಯಂ, ಶ್ರೀ ಎನ್. ಪಾರ್ಥಸಾರಥಿ ಶ್ರೀ ಸಿ.ಎಚ್. ವಿಜಯಶಂಕರ್ ಮತ್ತು ಶ್ರೀ ಎಚ್.ಕೆ. ಶಿವಾನಂದ (11.10.2018)

ಬಿಡಿ ಪ್ರತಿ: ರೂ. 10
e-mail: jsspublications@gmail.com * www.jssonline.org

# ಪ್ರಸಾದ

## ದ್ವೈಮಾಸಿಕ

ಸಂಪುಟ 33 ಸಂಚಿಕೆ 6 ನವೆಂಬರ್–ಡಿಸೆಂಬರ್ 2018




ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು



ಕನಕಪುರ ಶ್ರೀ ದೇಗುಲಮಠದಲ್ಲಿ ನಡೆದ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ನೂತನ ಶ್ರೀಗಳಾದ ಶ್ರೀ ಚನ್ನಬಸವಸ್ವಾಮಿಗಳವರನ್ನು ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು. ಚಿತ್ರದಲ್ಲಿ ಡಾ. ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳು, ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಮರಳೇಗವಿ ಮಠದ ಡಾ. ಶ್ರೀ ಮುಮ್ಮಡಿ ಶಿವರುದ್ರಸ್ವಾಮಿಗಳು ಹಾಗೂ ಮತ್ತಿತರರು (18.11.2018)




ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ 9ನೇ ಘಟಿಕೋತ್ಸವ. ಚಿತ್ರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸುಧಾ ಮೂರ್ತಿಯವರು ಘಟಿಕೋತ್ಸವ ಭಾಷಣ ಮಾಡುತ್ತಿರುವುದು. ಕುಲಪತಿ ಡಾ. ಬಿ. ಸುರೇಶ್, ಪರಮಪೂಜ್ಯ ಜಗದ್ಗುರುಗಳು, ಡಾ. ಸಿ.ಜಿ. ಬೆಟಸೂರಮಠ, ಡಾ. ಚಂದ್ರಶೇಖರಯ್ಯ ಹಾಗೂ ಇತರರು (17.10.2018)




ಮೈಸೂರಿನ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಪರಮಪೂಜ್ಯ ಶ್ರೀಗಳವರ ಸಾನ್ನಿಧ್ಯದಲ್ಲಿ ನೆರವೇರಿತು. ಮಾಜಿ ಶಾಸಕರಾದ ಶ್ರೀ ವಾಸು, ಉನ್ನತ ಶಿಕ್ಷಣ ಸಚಿವರಾದ ಶ್ರೀ ಜಿ.ಟಿ. ದೇವೇಗೌಡ, ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಸಂಸದರಾದ ಡಾ. ಎಂ. ವೀರಪ್ಪ ಮೊಯ್ಲಿ, ಡಾ. ಹೆಚ್.ಡಿ. ಚೌಡಯ್ಯ ಹಾಗೂ ಶ್ರೀ ಕವೀಶ್‌ಗೌಡ (28.11.2018)




ಸುತ್ತೂರು ಶ್ರೀಕ್ಷೇತ್ರದಲ್ಲಿ ರಾಜ್ಯಮಟ್ಟದ ಕದಳಿ ಮಹಿಳಾ ಸಮಾವೇಶವನ್ನು ಡಿ.ಜಿ. ಮತ್ತು ಐಜಿಪಿ ಶ್ರೀಮತಿ ನೀಲಮಣಿ ಎನ್. ರಾಜು ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀಮತಿ ಗೀತಾ ರಾಜಶೇಖರ್, ಶ್ರೀಮತಿ ಜಯಾಗೌಡ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಡಾ. ಲೀಲಾದೇವಿ ಆರ್. ಪ್ರಸಾದ್, ಶ್ರೀಮತಿ ರಾಣಿ ಸತೀಶ್, ಪರಮಪೂಜ್ಯ ಜಗದ್ಗುರುಗಳು, ಡಾ. ಬಸವರಾಜ ಸಾದರ, ಡಾ. ವಿಜಯಶ್ರೀ ಸಬರದ ಮತ್ತು ಶ್ರೀಮತಿ ವಾಗ್ದೇವಿ (14.10.2018)

# ಪ್ರಸಾದ

**ಸಂಪುಟ 33 : ಸಂಚಿಕೆ 6** **ನವೆಂಬರ್-ಡಿಸೆಂಬರ್ 2018**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

**ಮುಖಪುಟ ಚಿತ್ರ**

ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಸುತ್ತೂರು ಮಠದ ಅತಿಥಿಗೃಹ ಉದ್ಘಾಟನೆಯನ್ನು ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ನೆರವೇರಿಸಿದರು. ಚಿತ್ರದಲ್ಲಿ ಶಾಸಕರಾದ ಶ್ರೀ ಆರ್. ನರೇಂದ್ರ, ಸಚಿವರಾದ ಶ್ರೀ ಸಾ.ರಾ. ಮಹೇಶ್, ಸಂಸದರಾದ ಶ್ರೀ ಆರ್. ಧ್ರುವನಾರಾಯಣ, ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಿ. ಪುಟ್ಟರಂಗ ಶೆಟ್ಟಿ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಶ್ರೀ ಸಿ.ಎಸ್. ನಿರಂಜನಕುಮಾರ್, ಪರಮಪೂಜ್ಯ ಜಗದ್ಗುರುಗಳು, ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀ ಗುರುಸ್ವಾಮಿಗಳು, ಡಾ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶಾಸಕರಾದ ಶ್ರೀ ಎನ್. ಮಹೇಶ್‌ರವರುಗಳಿದ್ದಾರೆ (30.11.2018)

## ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 9 |
| ಲೋಕಜೀವನದ ವೈದ್ಯ : ಸಂತಕವಿ ಸರ್ವಜ್ಞ<br>**ಡಾ. ಆರ್.ಬಿ. ಚಿಲುಮಿ** | 11 |
| ಮೈಸೂರು ನಗರದ ಅರಮನೆ ಪಂಚಗವಿಮಠದ ಇತಿಹಾಸ<br>**ಡಾ. ಬಿ. ನಂಜುಂಡಸ್ವಾಮಿ** | 24 |
| ಚೇಳಿಂಗೆ ಬಸುರಾಯಿತ್ತೆ ಕಡೆ....?<br>**ಎಚ್.ಸಿ. ರಜತ್** | 35 |
| 'ಮಹಿಷಾಸುರನ ದಸರಾ' – ಒಂದು ವಿವೇಚನೆ<br>**ಹೊರೆಯಾಲ ದೊರೆಸ್ವಾಮಿ** | 43 |
| ವಾರ್ತಾವಿಹಾರ | 51 |
| ಕೃತಿ-ಸ್ವೀಕೃತಿ | 64 |

ಎನ್ನ ಪಾದ–
ಷಟ್‌ಸ್ಥಲಕ್ಕೆ ಒಪ್ಪವಿಟ್ಟಲ್ಲದೆ ಅಡಿಯಿಡದು,
ಎನ್ನ ಹಸ್ತ–
ಷಟ್‌ಸ್ಥಲಪತಿಯನಲ್ಲದೆ ಪೂಜೆಯ ಮಾಡದು,
ಎನ್ನ ಘ್ರಾಣ ಮೊದಲು ಶ್ರೋತ್ರ ಕಡೆಯಾದ ಪಂಚೇಂದ್ರಿಯಂಗಳು–
ಷಟ್‌ಸ್ಥಲವನಲ್ಲದೆ ಆಚರಿಸವು,
ಎನ್ನ ಮನ–
ಷಟ್ಸ್ಥಲದ ಷಡ್ವಿಧ ಲಿಂಗಂಗಳ ಮೇಲಲ್ಲದೆ
ಹರುಷಂಗೊಂಡು ಹರಿದಾಡದು,
ಎನ್ನ ಪ್ರಾಣ–
ಷಟ್‌ಸ್ಥಲಕ್ಕೆ ಸಲೆ ಸಂದ
ಅಕ್ಕಮಹಾದೇವಿಯವರು ಹೋದ
ಬಟ್ಟೆಯಲ್ಲಿ ನಡೆವುದಲ್ಲದೆ–
ಕಿರುಬಟ್ಟೆಯಲ್ಲಿ ನಡೆಯದು!

ಇಂತಿವೆಲ್ಲವೂ –
ಷಟ್‌ಸ್ಥಲವನಪ್ಪಿ ಅನುಗ್ರಹಿಸಿದ
ನೀಲಾಂಬಿಕೆಯಮ್ಮನವರ ಗರ್ಭದಲ್ಲಿ ಉದಯವಾದ
ಮೋಹದ ಕಂದನಾದ ಕಾರಣ –
ಎನಗೆ ಷಟ್‌ಸ್ಥಲಮಾರ್ಗದ
ವಿರತಿ ನೆಲೆಗೊಂಡು ನಿಂದಿತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

- ಘನಲಿಂಗದೇವರು

**'ಪ್ರಸಾದ' ಚಂದಾ ವಿವರ**

ವಾರ್ಷಿಕ ರೂ. 100 * ದಶವಾರ್ಷಿಕ ರೂ. 500

# ಸಂಪಾದಕೀಯ

ಭಾರತೀಯರಿಗೆ 'ಶಬರಿಮಲೆ' ಎನ್ನುವ ಹೆಸರು ಪರಿಚಿತವಾಗಿರುವುದು ರಾಮಾಯಣದಲ್ಲಿ ಬರುವ ರಾಮಭಕ್ತಳಾದ 'ಶಬರಿ'ಯಿಂದ.

ಮುಂದೆ ಅದು ಹರಿಹರ ಪುತ್ರನಾದ ಅಯ್ಯಪ್ಪಸ್ವಾಮಿಯ ದೇಗುಲದ ಕಾರಣಕ್ಕೆ ಪ್ರಸಿದ್ಧಿಗೆ ಬಂತು. ಭರತಖಂಡದ ಅನಂತ ಕ್ಷೇತ್ರಗಳಲ್ಲಿ ಒಂದಾಗಿ ಪರಿಗಣಿತವಾಗಿದ್ದ ಈ ಕ್ಷೇತ್ರವು ಕೆಲವು ದಶಕಗಳಿಂದ ಈಚೆಗೆ ಬಹು ದೊಡ್ಡ ಪ್ರಚಾರವನ್ನು ಪಡೆದುಕೊಂಡಿತು. ನಮ್ಮಲ್ಲಿ ಕಾಶಿ, ಹರಿದ್ವಾರ, ಋಷಿಕೇಶ, ತಿರುಪತಿ, ಧರ್ಮಸ್ಥಳ, ಮಲೆಯ ಮಹದೇಶ್ವರ ಕ್ಷೇತ್ರ, ಇತ್ಯಾದಿ ಕೆಲವು ಕ್ಷೇತ್ರಗಳಿಗೆ ಶತಮಾನಗಳ ಚರಿತ್ರೆಯಿದ್ದು, ಸಮುದಾಯ ಸಮಷ್ಟಿ ಅವುಗಳಿಗೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಇಲ್ಲಿ ಜಾತಿ, ಧರ್ಮ, ಲಿಂಗ ಸಂಬಂಧವಾದ ಯಾವುದೇ ವಿಧವಾದ ವಿಧಿನಿಷೇಧಗಳು ಇಲ್ಲ. ಕೆಲವು ಧಾರ್ಮಿಕ ಕೇಂದ್ರಗಳು ಪುರಾಣಕಾಲದಿಂದಲೂ ಅಸ್ತಿತ್ವದಲ್ಲಿದ್ದರೂ ಯಾವುದೋ ಕಾಲಘಟ್ಟದಲ್ಲಿ, ಬೇರೆ ಬೇರೆ ಕಾರಣಗಳಿಗಾಗಿ ಇದ್ದಕ್ಕಿದ್ದ ಹಾಗೆ (ಜನ ಮರುಳೋ ಜಾತ್ರೆ ಮರುಳೋ ಎನ್ನುವ ನಾಣ್ನುಡಿಯಂತೆ) ಜನಮಾನಸದಲ್ಲಿ ತನ್ನ ಪ್ರಭಾವದ ಮುದ್ರೆಯೊತ್ತುತ್ತವೆ. ಅಂತಹ ಅನೇಕ ಕ್ಷೇತ್ರಗಳಲ್ಲಿ ಶಬರಿಮಲೆಯೂ ಸಹ ಒಂದಾಗಿದೆ. ಕೇರಳದಲ್ಲಿ ಬಹಳ ಪ್ರಭಾವಿ ಕೇಂದ್ರ ಎನಿಸಿಕೊಂಡು ಭಕ್ತರನ್ನು ತನ್ನೆಡೆಗೆ ಆಕರ್ಷಿಸಿರುವ ಇದು 4–5 ದಶಕಗಳಿಂದ ಈಚೆಗೆ ಇಡೀ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಪ್ರಚಾರಕ್ಕೆ ಬಂದಿದೆ. ಪ್ರಾಯಃ ಕೇರಳದ ಉತ್ಸಾಹಿಜನ ಜೀವನ ನಿರ್ವಹಣೆಗಾಗಿ ವ್ಯಾಪಾರ ವಹಿವಾಟಿಗಾಗಿ ಅಕ್ಕಪಕ್ಕದ ರಾಜ್ಯಗಳಿಗೆ ಬಂದು ನೆಲೆಸಿದ ನಂತರ, ತಮ್ಮಂತೆಯೆ ತಮ್ಮ ದೇವರನ್ನೂ ಮಾನಸಿಕವಾಗಿಯಷ್ಟೆ ಅಲ್ಲ, ಭೌತಿಕವಾಗಿಯೂ ತಾವು ಹೋದ ಕಡೆ ಕರೆದುಕೊಂಡು ಬಂದರು. ದಕ್ಷಿಣ ಭಾರತದ ರಾಜ್ಯಗಳಲ್ಲಿ ಇರುವ ಅಯ್ಯಪ್ಪಸ್ವಾಮಿಯ ದೇವಸ್ಥಾನಗಳನ್ನು ನೋಡಿದವರಿಗೆಲ್ಲ ಇದು ಸುಲಭವಾಗಿ ಅರ್ಥವಾಗುತ್ತದೆ. ಇರಲಿ, ಇದು ಧರ್ಮಸಂಬಂಧಿ ವಿಷಯದಲ್ಲಿ ಸಹಜವಾಗಿ ನಡೆಯುವಂತಹದೆ. ಇದಕ್ಕೆ ಪೂರಕವಾಗಿ ಇತ್ತೀಚಿನ ವರ್ಷಗಳಲ್ಲಿ ಶ್ರೀ ಶಿರಡಿ ಸಾಯಿಬಾಬಾರವರನ್ನು ಆರಾಧಿಸುವವರ ಸಂಖ್ಯೆ ಹೆಚ್ಚುತ್ತಿರುವುದನ್ನೂ

ನೋಡಬಹುದು; ಹಾಗೆಯೇ ಅವರ ದೇಗುಲಗಳು ಸಹ ನಿರ್ಮಾಣಗೊಳ್ಳುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಅವರವರದೇ ವೈಯಕ್ತಿಕ ಹಾಗೂ ಸಾಮೂಹಿಕವಾದ ಕಾರಣಗಳು ಇರುತ್ತವೆ. ಇಂತಹ ಕೇಂದ್ರಗಳಲ್ಲಿ ಅವರದ್ದೇ ಆದ ಕೆಲವು ಆಚರಣೆಗಳೂ ರೂಢಿಗೆ ಬರುತ್ತವೆ.

ನನ್ನ ಮುಂದಿನ ಮಾತುಗಳಿಗೆ ಪೀಠಿಕೆಯಾಗಿ ಈ ಕೆಲವು ಮಾತುಗಳನ್ನು ಬರೆಯಬೇಕಾಯಿತು, ಏಕೆಂದರೆ, 2018ನೇ ಇಸವಿಯ ಕೊನೆಯ ದಿನಮಾನಗಳಲ್ಲಿ ಧಾರ್ಮಿಕ ವಲಯದ ಸಂಪ್ರದಾಯಸ್ಥರಲ್ಲಿ ಒಂದು ಸಂಚಲನವನ್ನು ಉಂಟುಮಾಡಿದ ವಿಷಯವೆಂದರೆ ಮಹಿಳೆಯರ ಶ್ರೀ ಅಯ್ಯಪ್ಪಸ್ವಾಮಿಯ ದರ್ಶನಕ್ಕೆ ಸಂಬಂಧಪಟ್ಟದ್ದು. ಹರಿಹರ ಪುತ್ರನಾದ ಅಯ್ಯಪ್ಪಸ್ವಾಮಿಯನ್ನು (ಇಲ್ಲಿ ಈತನ ತಂದೆ ಮತ್ತು ತಾಯಿ ಇಬ್ಬರೂ ಪುರುಷರು ಎನ್ನುವುದನ್ನು ಗಮನಿಸಬೇಕು. ಇದನ್ನು ರೂಪಕದ ಭಾಷೆಯಲ್ಲಿ ಮಾತನಾಡುವವರು 'ಸ್ಥಿತಿ ಮತ್ತು ಲಯ'ಗಳು ಒಂದರೊಳಗೊಂದು ಇರುವುದರ ಸಂಕೇತ ಎಂದು ವ್ಯಾಖ್ಯಾನಿಸುತ್ತಾರೆ. ಧಾರ್ಮಿಕ ಕಕ್ಷೆಯ ಅನೇಕ ವಿಷಯಗಳು ಹೀಗೆ ರೂಪಕಾತ್ಮಕ, ಪ್ರತಿಮಾತ್ಮಕವಾಗಿಯೇ ಇರುತ್ತವೆ ಎನ್ನುವುದೂ ನಿಜವೇ!) ಋತುಚಕ್ರಗಳು ನಡೆಯುವ ವಯೋಮಾನದ ಮಹಿಳೆಯರು ದರ್ಶನ ಮಾಡುವ ಹಾಗಿಲ್ಲ ಎನ್ನುವುದರ ವಿರುದ್ಧ ಆಸಕ್ತ ಭಕ್ತ ಮಹಿಳೆಯು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರು. ಅರ್ಜಿಯ ವಿಲೇವಾರಿ ಮಾಡಿದ ನ್ಯಾಯಾಲಯ ಎಲ್ಲ ವಯೋಮಾನದ ಮಹಿಳೆಯರಿಗೂ ದೇವಸ್ಥಾನ ಪ್ರದೇಶದ ಹಕ್ಕು ಇದೆ ಎಂದು ತೀರ್ಪು ನೀಡಿದ್ದು ಕೇರಳದಲ್ಲಿ ಬಹುದೊಡ್ಡ ಕೋಲಾಹಲಕ್ಕೆ ನಾಂದಿಯಾಯಿತು. ಕೆಲವು ರಾಜಕೀಯ ಪಕ್ಷಗಳು ಸಹ ನ್ಯಾಯಾಲಯದ ಆದೇಶದ ವಿರುದ್ಧವಾಗಿ ನಿಂತು ನ್ಯಾಯಾಲಯದ ತೀರ್ಮಾನಕ್ಕಿಂತ ನಮ್ಮ 'ನಂಬಿಕೆ'ಯೇ ದೊಡ್ಡದು ಎನ್ನುವುದನ್ನು ಪ್ರತಿಪಾದಿಸಿ ಅಸಂವಿಧಾನಾತ್ಮಕವಾಗಿ ನಡೆದುಕೊಂಡದ್ದೂ ನಡೆಯಿತು.

ಭರತಖಂಡದಂತಹ ಬಹು ಸಂಸ್ಕೃತಿ, ಸಂಪ್ರದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿ ಭೂಪ್ರದೇಶದ, ಪ್ರತಿ ಸಮುದಾಯದ, ಜಾತಿ ಉಪಜಾತಿಗಳ, ಭಾಷಿಕ ವಲಯದ ಜನತೆಯ ನಂಬಿಕೆ ನಡಾವಳಿಗಳು ಅವರವರ ಭಾವಕ್ಕೆ ತಕ್ಕಂತೆ ಇರುವುದು ವಾಸ್ತವ ಸತ್ಯ. ಈ ನಂಬಿಕೆ ನಡಾವಳಿಗಳಿಗೆ ವೈಚಾರಿಕ ಹಿನ್ನೆಲೆಯಿಲ್ಲ; ಅವು ಕೇವಲ ಮೌಢ್ಯ, ಶೋಷಣೆಯ ಮತ್ತೊಂದು ರೂಪ, ಜಾತಿ ಧರ್ಮಗಳ ಶ್ರೇಣೀಕರಣದ ಧಾರ್ಮಿಕ ಮುಖ ಇತ್ಯಾದಿಯಾಗಿ ಆಡುವ ಟೀಕೆಯ ಮಾತುಗಳು ಕೇವಲ ಸರಳ ರೇಖಾತ್ಮಕ ಸ್ವರೂಪದ್ದಾಗಿರುತ್ತವೆಯೇ

ಹೊರತು, ವಾಸ್ತವದ ಒಳಸುಳಿಗಳನ್ನು ಅರ್ಥೈಸುವ ಮಾತುಗಳಾಗಿರುವುದಿಲ್ಲ. 'ಬಹುಮುಖಿ ಸಂಸ್ಕೃತಿ' ಎನ್ನುವುದನ್ನು ನಾವು ಒಪ್ಪಿಕೊಳ್ಳುವುದಾದರೆ, ಈ ಎಲ್ಲವನ್ನು–ವೈಯಕ್ತಿಕವಾದ ನಮ್ಮ ಸಿದ್ಧಾಂತಗಳು ಏನೇ ಇರಲಿ – ಒಪ್ಪಿಕೊಂಡೇ ನಮ್ಮ ಚಿಂತನೆಗಳನ್ನು ಶೋಧಿಸಿಕೊಳ್ಳಬೇಕು. ಇಲ್ಲಿ ನಾನು ಎಲ್ಲ ಮಹಿಳೆಯರಿಗೂ ಪ್ರವೇಶಕೊಡಲೇಬೇಕು ಎನ್ನುವುದರ ಪರ ಅಥವಾ ವಿರೋಧವಾಗಿ ಏನೂ ಹೇಳುತ್ತಿಲ್ಲ ಎನ್ನುವುದನ್ನು ಮೊದಲೇ ಸ್ಪಷ್ಟಪಡಿಸುತ್ತೇನೆ. (ತಾಳವಾಡಿ ಫಿರ್ಕಾದ ಕೊಂಗಳ್ಳಿ ಮಲ್ಲಪ್ಪರ ಗದ್ದುಗೆಗೆ ಇಂದಿಗೂ ಮಹಿಳೆಯರು ಹೋಗುವುದಿಲ್ಲ; ಹಾಗೆಯೇ ಭಾರತದ ಅನೇಕ ದೇವಸ್ಥಾನಗಳಲ್ಲಿ ಪುರುಷರಿಗೂ ಪ್ರವೇಶವಿಲ್ಲ. ಇವುಗಳ ಕಾರಣಗಳ ಚರ್ಚೆಯನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಬೇರೆ ಯಾಗಿಯೇ ಮಾಡಬೇಕು.)

ನ್ಯಾಯಾಲಯದ ಆದೇಶ, ಸಂಪ್ರದಾಯವಾದಿಗಳು ಹಾಗೂ ಆಧುನಿಕರ ನಡುವೆ ಸೃಷ್ಟಿಸಿದ ಪ್ರತಿಕ್ರಿಯೆಯ ಸ್ವರೂಪದ ಬಗ್ಗೆ ಪ್ರಜ್ಞಾವಂತರನ್ನು ಚಿಂತೆಗೀಡುಮಾಡಿದೆ. ಯಾವುದೇ ಕಾಲಘಟ್ಟದ ಒತ್ತಡದ ಅನಿವಾರ್ಯತೆ ಯಿಂದ ಸಮಾಜ ಸೃಷ್ಟಿಸಿಕೊಂಡ ಕೆಲವು ನಡಾವಳಿಗಳು, ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಸಂರಚನೆಯ ಸ್ವರೂಪ, ಹೊಸ ಹೊಸ ಜ್ಞಾನಶಾಖೆಗಳಿಗೆ ಸಾಮಾಜಿಕರು ತೆರೆದುಕೊಂಡ ಪರಿ – ಇಂತಹ ಅನೇಕ ಅಂಶಗಳ ಹಿನ್ನೆಲೆಯಲ್ಲಿ ಮರುವ್ಯಾಖ್ಯಾನಕ್ಕೆ ಮರುವಿಮರ್ಶೆಗೆ ಒಳಗಾಗಬೇಕಾಗುವುದು ಅನಿವಾರ್ಯ ಮತ್ತು ಅವಶ್ಯಕ. ಇಂತಹ ವಿಮರ್ಶೆಯ 'ಫಲಿತ'ಗಳು ಸಾಧುವಾದದ್ದು ಎನಿಸಿದಾಗ ಮಾತ್ರ ಅದರ ಅನುಸರಿಕೆಗೆ ಸಮಾಜ ಮುಂದಡಿಯಿಡುತ್ತದೆ. ಅದಕ್ಕೆ ಅವಕಾಶ ಸಿಗದೇ ಇದ್ದಾಗ ಅವಕಾಶವಂಚಿತರು ಕಾನೂನುರೀತ್ಯ "ಹಕ್ಕೊತ್ತಾಯ"ಕ್ಕೆ ಇಳಿಯುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಂಘರ್ಷ ಉಂಟಾದಾಗ ನ್ಯಾಯಾಲಯದ ಪಾತ್ರ ಅನಿವಾರ್ಯವಾಗುತ್ತದೆ. ಆಗ ಯಾರ ಪರವಾಗಿಯಾದರೂ ನ್ಯಾಯಾಂಗ ವ್ಯವಸ್ಥೆಯಲ್ಲಿ ಒಂದು ತೀರ್ಪು ಬರಲೇಬೇಕು; ಅದು ಬರುತ್ತದೆ. ನಮ್ಮ ಮುಂದಿನ ಪ್ರಶ್ನೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು 'ಸಂವಿಧಾನದ' ಚೌಕಟ್ಟನ್ನು ರೂಪಿಸಿಕೊಂಡು, ಒಪ್ಪಿಕೊಂಡು ಬಂದಿರುವ ನಾವು, ಅದರ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿ, ನಮ್ಮ ಸಾಂಪ್ರದಾಯಿಕ ನಂಬಿಕೆಗಳನ್ನು ಮಾತ್ರ ಗೌರವಿಸಿ 'ನ್ಯಾಯಾಂಗ'ದ ಆಶಯಕ್ಕೆ ವಿರುದ್ಧವಾಗಿ ವರ್ತಿಸಬಹುದೇ? ನಮ್ಮದು 'ಧರ್ಮಾಧಾರಿತ ಸಂವಿಧಾನ' ವಾಗಿದ್ದರೆ ಆ ಪ್ರಶ್ನೆ ಬೇರೆ. (ಕೆಲವು ದೇಶಗಳಲ್ಲಿ ಅದು ಇದೆ). ಆದರೆ ನಮ್ಮದು ಧರ್ಮ ನಿರಪೇಕ್ಷ ವ್ಯವಸ್ಥೆಯಾಗಿದ್ದು ಯಾರು ಯಾವುದರಿಂದಲೂ ವಂಚಿತರಾಗಬಾರದು

ಎನ್ನುವುದು ಇದರ ಮೂಲಸ್ವರೂಪವಾಗಿರುವುದರಿಂದ ನ್ಯಾಯಾಲಯದ ಆದೇಶವನ್ನು ನಾವು ಗೌರವಿಸಬೇಕು. ಹಾಗೊಂದು ಪಕ್ಷ ಈ ತೆರನ ನಿಯಮಗಳಿಗೆ ವಿಧಿ ನಿಷೇಧಗಳಿಗೆ ಕಾರಣಗಳೇನು ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ನಮ್ಮ ಪರವಾದ ತೀರ್ಪು ಪಡೆದು ಮತ್ತೆ ಹಿಂದಿನ ಪರಂಪರೆಯನ್ನೇ ಮುಂದುವರಿಸುವುದನ್ನು ಯಾರೂ ತಪ್ಪು ಎನ್ನುವುದಿಲ್ಲ. ವಾದಿಗೆ ಇರುವಂತಹ ಅವಕಾಶ ಪ್ರತಿವಾದಿಗೂ ಇರಬೇಕಾದ್ದೂ ಸರಿ. ಆದರೆ ನ್ಯಾಯಾಲಯದ ಆದೇಶವನ್ನೇ ಧಿಕ್ಕರಿಸುವ ನಮ್ಮ ದಾಷ್ಟ್ಯ ಹೀಗೆಯೇ ಮುಂದುವರಿದರೆ, ಇದೊಂದು ಸಾಂಕ್ರಾಮಿಕ ರೋಗವಾಗಿ ಬೇರೆ ಬೇರೆ ಕ್ಷೇತ್ರಗಳಿಗೂ ಹಬ್ಬಿ, ಬೇರೆ ಬೇರೆ ಆಯಾಮವನ್ನು ಪಡೆದು ಸಮಾಜ ವ್ಯವಸ್ಥೆಯ ಅಧೋಗತಿಗೆ ಕಾರಣವಾಗುವುದಲ್ಲವೆ? ಹಾಗಿದ್ದ ಮೇಲೆ ಮುಂದೆ ನಮ್ಮಲ್ಲಿ ಇರಬೇಕಾದುದು ಯಾವುದು? 'ಸಮುದಾಯಗಳ ನಂಬಿಕೆಗಳನ್ನು ಮಾತ್ರ ಗೌರವಿಸುವ ಸಮಾಜವೋ' ಅಥವಾ 'ಸಂವಿಧಾನವನ್ನು ಗೌರವಿಸಬೇಕಾದ ಸಮಾಜವೋ?' ಅಥವಾ ನಮ್ಮ ಧಾರ್ಮಿಕ ನಂಬಿಕೆ ನಡಾವಳಿಗಳನ್ನು ಖಾಸಗೀ ವಲಯಕ್ಕೆ ಸೀಮಿತಗೊಳಿಸಿಕೊಂಡು ಸಾರ್ವಜನಿಕ ಬದುಕಿನಲ್ಲಿ ಸಂವಿಧಾನಕ್ಕೆ ಪರಮೋಚ್ಚ ಸ್ಥಾನವನ್ನು ಕೊಡಬೇಕಲ್ಲವೆ? ಇಲ್ಲಿ ಎಡ, ಬಲ ಪಂಥ ಎನ್ನುವ ಹಣೆ ಪಟ್ಟಿಯಾಗಲಿ, ಸಂಪ್ರದಾಯವಾದಿ, ವಿಚಾರವಂತ ಎನ್ನುವ 'ಕ್ಲೀಷೆ'ಯ ಮಾತುಗಳು ಜನರನ್ನು ಗೊಂದಲಕ್ಕೆ ಸಿಕ್ಕಿಸಿದಂತಾಗುತ್ತದೆ. ವಿಷಾದಕರ ಸಂಗತಿಯೆಂದರೆ ಕೇರಳದಲ್ಲಿ ಸ್ತ್ರೀಯರ ಪ್ರವೇಶದ ಹಕ್ಕನ್ನು ಸ್ತ್ರೀಯರೇ ಸಾಂಘಿಕವಾಗಿ ವಿರೋಧಿಸಿದ್ದು! ಅದಕ್ಕಿಂತ ಹೆಚ್ಚಾಗಿ ಐಪಿಎಸ್ ದರ್ಜೆಯ ಪೊಲೀಸ್ ಅಧಿಕಾರಿಯೋರ್ವರು, ಅಲ್ಲಿನ ಸರ್ಕಾರದ ಆದೇಶವನ್ನು ಪಾಲಿಸಿ, ತಾನು ಸಂಪ್ರದಾಯ ವಿರೋಧಿ ಕೆಲಸವನ್ನು ಮಾಡಿದೆ ಎನ್ನುವ ಪಾಪಪ್ರಜ್ಞೆಯಿಂದ ದೇವರಲ್ಲಿ ಕ್ಷಮಾಪಣೆ ಕೇಳಿದ್ದು!!

ಇಂತಹ ಸೂಕ್ಷ್ಮ ಸಮಸ್ಯೆಗಳನ್ನು ನೋಡುವಾಗ ನಮ್ಮದು 'ಪೂರ್ಣದೃಷ್ಟಿ' ರಹಿತವಾದ ತೀರ್ಮಾನಗಳಾದರೆ ನಮ್ಮಲ್ಲಿನ ಗೊಂದಲಗಳು ಬೇರೆ ಬೇರೆ ರೂಪಸ್ವರೂಪಗಳನ್ನು ಪಡೆದು ನಮ್ಮ ಬದುಕನ್ನು ನಾಶಗೈಯುತ್ತವೆ. ಭಕ್ತರು ಕೇವಲ ಮನುಷ್ಯರಾಗಿ, ಅಯ್ಯಪ್ಪಸ್ವಾಮಿ (ಇಂತಹ ಅನೇಕ ದೇವರುಗಳು) ಕೇವಲ ಶಿಲಾವಿಗ್ರಹ ಮಾತ್ರವಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಿರುತ್ತದೆ. ಇಂತಹ ಅನೇಕ ಸಾಂಪ್ರದಾಯಿಕ ಸಮಸ್ಯೆಗಳಿಗೆ ಇರುವ ಏಕೈಕ ಪರಿಹಾರವೆಂದರೆ, ನೂರು ದೇವರುಗಳನ್ನೆಲ್ಲಾ ಆಚೆ ನೂಕಿ ನಮ್ಮ ದೇಹವನ್ನೇ ದೇವಾಲಯವನ್ನಾಗಿಸಿಕೊಳ್ಳುವುದು ಮಾತ್ರ.

**ಮಲೆಯೂರು ಗುರುಸ್ವಾಮಿ**

ಸಂಪಾದಕ

# ಗುರುವಾಣಿ

ಪ್ರಸ್ತುತ ದಿನಮಾನಗಳಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಕೌಟುಂಬಿಕ ಸಾಮರಸ್ಯಗಳ ಬಗ್ಗೆ ಎಲ್ಲೆಂದರಲ್ಲಿ ಚರ್ಚೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಸಾಮರಸ್ಯವನ್ನು ಕಾಪಾಡುವುದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೂ ನಡೆದಿದೆ. ಇವುಗಳ ಬಗ್ಗೆಯೇ ವಿಶೇಷವಾಗಿ ಅಧ್ಯಯನ ಮಾಡುತ್ತಿರುವ ವಿದ್ವಾಂಸರು ಅನೇಕ ಕಾರ್ಯಸೂಚಿಗಳನ್ನು, ಕ್ರಿಯಾಯೋಜನೆಗಳನ್ನು ಆಚರಣೆಗೆ ತರಲು ಪ್ರಯತ್ನಿಸುತ್ತಿದ್ದಾರೆ. ಈ ಸಾಮರಸ್ಯದ ನೆಲೆಗಳು ಎಲ್ಲಿವೆ ಎನ್ನುವುದೇ ಒಂದು ದೊಡ್ಡ ಸಂಶೋಧನೆಯ ವಿಷಯವಾಗಿದೆ. ಅನೇಕ ಕಾರಣಗಳಿಗಾಗಿ ತಾಳ-ತುದಿಗಳು ಸಿಗದೆ ಇಡೀ ವ್ಯವಸ್ಥೆ ಗೊಂದಲಮಯವಾಗಿದೆ ಎನ್ನುವ ಮಾತೂ ಕೇಳಿಬರುತ್ತಿದೆ. ಇದನ್ನು ಪರಿಹರಿಸುವ ಸಿದ್ಧೌಷಧ ಏನಾದರೂ ಇದೆಯೇ, ಉತ್ತರ ಸ್ಪಷ್ಟವಿಲ್ಲ. ಸಮಸ್ಯೆಯ ಮೂಲವೆನ್ನುವುದು ವ್ಯಕ್ತಿಯ ಸ್ವಭಾವದಲ್ಲಿದೆಯೆ ಅಥವಾ ಸಾಮಾಜಿಕ ವ್ಯವಸ್ಥೆಯಲ್ಲಿದೆಯೆ ಎನ್ನುವುದು ಪ್ರಮುಖವಾಗಿ ಚಿಂತಿಸಬೇಕಾದ ಅಂಶವಾಗಿದೆ.

ಲಂಡನ್ನಿನ ಚರ್ಚೊಂದರ ಪ್ರತಿಷ್ಠಿತರ ಸಮಾಧಿಗಳ ನಡುವೆ ಇರುವ ಪಾದ್ರಿಯೊಬ್ಬರ ಸಮಾಧಿಯ ಮೇಲಿನ ಬರಹ ಹೀಗಿದೆಯಂತೆ : "ನಾನು ಬಾಲಕನಾಗಿದ್ದಾಗ ಇಡೀ ವಿಶ್ವವನ್ನೇ ಬದಲಾಯಿಸಬೇಕೆಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ; ಯುವಕನಾಗಿದ್ದಾಗ ಇಡೀ ದೇಶವನ್ನೇ ಬದಲಾಯಿಸಬೇಕೆಂದಿದ್ದೆ; ಅದು ಸಾಧ್ಯವಾಗಲಿಲ್ಲ. ಮಧ್ಯವಯಸ್ಕನಾದಾಗ ಇಡೀ ನಗರವನ್ನೇ ಬದಲಾಯಿಸಬೇಕೆಂದಿದ್ದೆ; ಆದರೆ ನನ್ನ ಮಾತನ್ನು ಯಾರೂ ಕೇಳಲಿಲ್ಲ. ಈಗ ನಾನು ಮರಣಶಯ್ಯೆಯಲ್ಲಿದ್ದೇನೆ; ನಾನು ತದ್ವಿರುದ್ಧವಾದ ದಿಕ್ಕಿನಲ್ಲಿ ಪ್ರಯತ್ನಿಸಬೇಕಿತ್ತು ಎಂದು ನನಗೀಗ ಅನ್ನಿಸುತ್ತಿದೆ. ನಾನು ಮೊತ್ತಮೊದಲು ನನ್ನನ್ನು ಪರಿವರ್ತನೆ ಮಾಡಿಕೊಳ್ಳಬೇಕಿತ್ತು. ಆಗ ನನ್ನನ್ನು ನೋಡಿ ನನ್ನ ಮನೆಯವರೆಲ್ಲಾ ಬದಲಾಗುತ್ತಿದ್ದರು. ಅದರಿಂದಾಗಿ ಇಡೀ ನಗರವೇ ಬದಲಾಗುತ್ತಿತ್ತು. ಬಳಿಕ ಇಡೀ ದೇಶವೇ ಬದಲಾಗುತ್ತಿತ್ತು. ಅಂತಹ ದೇಶವನ್ನು ನೋಡಿ ಇಡೀ ವಿಶ್ವವೇ ಬದಲಾಗುತ್ತಿತ್ತು".

ಈ ಮಾತುಗಳಿಗೆ ಅರ್ಥವನ್ನು ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಜಗತ್ತಿನಲ್ಲಿ ಒಳಿತನ್ನು ಬಯಸುವ ಪ್ರತಿಯೊಬ್ಬನೂ ಮೊದಲು ತಾನು ಒಳ್ಳೆಯವನಾಗಬೇಕು. ಪ್ರತಿಯೊಬ್ಬನ ನಡೆನುಡಿಯೂ ಅವರವರ ಆತ್ಮಸಾಕ್ಷಿಯ ಪ್ರಕ್ರಿಯೆಯಲ್ಲಿ ಶೋಧಿತ

ವಾದ ಸತ್ಯಗಳಾಗಿರಬೇಕು. ತನಗೆ ಅಹಿತವೆನ್ನಿಸುವುದನ್ನು ಬೇರೆಯವರಿಗೂ ಮಾಡಬಾರದು. ಬಹಿರಂಗದಲ್ಲಿ ದೊಡ್ಡವರಂತೆ, ವಿಶ್ವಕುಟುಂಬಿಯಂತೆ, ಅಹಿಂಸಾವಾದಿಯಂತೆ ಬೂಟಕತನ ಮಾಡಬಾರದು. ಜನಹಿತಕ್ಕೆ ಬೇಕಾದದ್ದು ಪಾಂಡಿತ್ಯವಲ್ಲ, ತರ್ಕವಲ್ಲ, ಕಾನೂನು-ಕಟ್ಟಳೆಗಳಲ್ಲ, ಕೇವಲ ಅಂತರಂಗದ ಆತ್ಮನಿರೀಕ್ಷಣೆ ಮಾತ್ರ.

ಬಸವಣ್ಣನವರ ಭೂಮ ವ್ಯಕ್ತಿತ್ವವನ್ನು ಕುರಿತು ಅಂದಿನ ಎಲ್ಲ ಶರಣರೂ ಮನದುಂಬಿ ಹಾಡಿರುವುದು ಸರ್ವವೇದ್ಯ. ಅವರನ್ನು 'ಭಕ್ತಿಭಂಡಾರಿ' ಎಂದರು; 'ಜಗಜ್ಯೋತಿ' ಎಂದರು; 'ಯುಗದ ಉತ್ಸಾಹ' ಎಂದರು; 'ಬಸವಣ್ಣ ಎನಗೆಯೂ ಗುರು ನಿನಗೆಯೂ ಗುರು' ಎಂದರು ಅಲ್ಲಮರು. ಆದರೆ ಬಸವಣ್ಣನವರ ಒಳದನಿ ಸದಾ ಹೀಗೆ ಹೇಳುತ್ತಿತ್ತು:

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ.

ಈ ಮಾತು ಅವರ ಆತ್ಮಸಾಕ್ಷಿಯ ಅತ್ಯುಚ್ಚಮಟ್ಟದ ನಿವೇದನೆಯಾಗಿದೆ. ಏಕೆಂದರೆ ಪ್ರತಿಯೊಬ್ಬರ ಒಳಗಿನ 'ಹುರುಳು' ಮತ್ತು 'ಹುಸಿ' ಅವರವರಿಗೆ ಮಾತ್ರ ತಿಳಿಯುವಂತಹುದು. ಹುಸಿಯನ್ನು ಹೊರಹಾಕಿ, ಇರುವ ಹುರುಳನ್ನು ಮತ್ತಷ್ಟು ಹರಳುಗಟ್ಟಿಸಿಕೊಂಡು ತನ್ನನ್ನು ಲೋಕವ್ಯವಹಾರದೊಡನೆ ಸಂಲಗ್ನಗೊಳಿಸಿಕೊಂಡಾಗ ಮಾತ್ರ ಬದುಕಿನಲ್ಲಿ 'ಸಮರಸ' ಸಾಧ್ಯ. ಒಳಗೆ ಅತ್ತಿಯ ಹಣ್ಣಾಗಿದ್ದು, ಹೊರಗೆ ಅಂಜೂರದಂತೆ ವಿಜೃಂಭಿಸಲು ತೊಡಗಿದರೆ ಸಹಜವಾಗಿಯೇ ಎಲ್ಲ ವ್ಯವಹಾರಗಳೂ ಪ್ರಕ್ಷುಬ್ಧ ಸುನಾಮಿಯಂತೆ ಸರ್ವನಾಶಕ್ಕೆ ಕಾರಣವಾಗುತ್ತವೆ. ಆದ್ದರಿಂದ ಪ್ರಸ್ತುತ ಸಮಾಜದ ಸಾಮರಸ್ಯಕ್ಕೆ ಇಂದು ಬೇಕಾಗಿರುವುದು ಮೊದಲು ವ್ಯಕ್ತಿ ತನ್ನನ್ನು ತಾನು ಶುದ್ಧೀಕರಿಸಿಕೊಳ್ಳುವುದು; ಆ ಮೂಲಕ ಸಮಾಜಮುಖಿಯಾಗುವುದು. ಇದು ತಿರುಗುಮುರುಗಾದರೆ ಹಿಂದೆ ಹೇಳಿದ ಸಮಾಧಿಯ ಮೇಲಣ ಬರಹದಂತೆ ಕೇವಲ ಪಶ್ಚಾತ್ತಾಪಕ್ಕೆ ಬರೆದ ವ್ಯಾಖ್ಯಾನವಾಗುತ್ತದೆ; ಸುವ್ಯವಸ್ಥೆಯ ಕನಸು ಕನಸಾಗಿಯೇ ಉಳಿಯುತ್ತದೆ. ಈ ಒಳ ಎಚ್ಚರ ಸದಾ ಜಾಗೃತವಾಗಿರಬೇಕಾದುದು ಇಂದಿನ ಅಗತ್ಯವಾಗಿದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಲೋಕಜೀವನದ ವೈದ್ಯ: ಸಂತಕವಿ ಸರ್ವಜ್ಞ

**ಡಾ. ಆರ್.ಬಿ. ಚಿಲುಮಿ**

**ಜ**ನಪದಸಾಹಿತ್ಯ ಮತ್ತು ವಚನಸಾಹಿತ್ಯಗಳೆರಡರ ಪ್ರಭಾವ ಮತ್ತು ಪ್ರೇರಣೆಯಿಂದ ಸರ್ವವನ್ನು ಬಲ್ಲವನಾದ ಸರ್ವಜ್ಞನು ಈ ಲೋಕದ ಸಂತನಾದ, ಶರಣನಾದ. ಈ ಲೋಕದೊಳಗಿದ್ದೂ ಇಲ್ಲದಂತಿರಬೇಕು. ಏನಾದರೂ ಸಾಧನೆ ಮಾಡಿದ್ದೇನೆಂಬ ಹಮ್ಮು-ಬಿಮ್ಮುಗಳು ಮನುಷ್ಯನ ತಲೆಯಲ್ಲಿ ಇರಬಾರದು ಎನ್ನುತ್ತಾನೆ. ಆಧುನಿಕ ಯುಗದ ಸಂತ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ನಿಮ್ಮ ನಿಮ್ಮ ಬಾಳಿನಲ್ಲಿ ಇದ್ದೂ ಇಲ್ಲದಂತಿರಬೇಕೆಂದು ಯಾವತ್ತೂ ಹೇಳುತ್ತ ಬಂದಿರುವುದನ್ನು ಗಮನಿಸಿದರೆ ಸರ್ವಜ್ಞನ ಹೇಳಿಕೆಗಳು ಬೇರೆಯಲ್ಲ, ಶ್ರೀಗಳವರ ಹೇಳಿಕೆಗಳು ಬೇರೆಯಲ್ಲವೆಂಬುದನ್ನು ಅರ್ಥೈಸಿಕೊಳ್ಳಬೇಕು. ಹೆಸರಿಲ್ಲದ ಹೆಸರೊಲ್ಲದ ಜನಪದರ ಮಧ್ಯದಲ್ಲಿಯೇ ಬಾಳಿದ ಜನಪದರು ಹೇಳುವಂತೆ:

> ಲೋಕದಾಗಿರುತನಕ ಬೇಕಾಗಿ ಇರಬೇಕು
> ಸಾಕಾಗಿ ಶಿವನ ಸದರೀಗಿ-ಹೋಗುವಾಗ
> ಎಲ್ಲಾರು ಬರುತಾರು ಕಳಿಸಾಕ

ಈ ಲೋಕಜೀವನವೆಂಬುದೊಂದು ಸಂಸ್ಥೆ, ಸಂತೆ. ಇಲ್ಲಿ ಎಲ್ಲ ತರಹದ ಜನರಿರುತ್ತಾರೆ. ಅವರೊಂದಿಗೆ ಬೆರೆತು ಬಾಳುವುದೇ ಚಂದ. ಏಕಾಂಗಿಯಾಗಿ ಬದುಕಲಿಕ್ಕೆ ಸಾಧ್ಯವಿಲ್ಲ. ಈ ಲೋಕ ತ್ಯಜಿಸುವವರೆಗೂ ಹೊಂದಿಕೊಂಡು ಹೋಗುವುದೇ ಮನುಷ್ಯನಾದವನ ಪರಮಧ್ಯೇಯವಾಗಬೇಕೆಂಬುದಾಗಿ ಮೇಲಿನ ಹಾಡಿನಲ್ಲಿ ಜನಪದರು ಹೇಳಿದ್ದು ಅದೆಷ್ಟು ಸತ್ಯ ನೋಡಿ! ಇಂತಹ ಗಾದೆ-ಜನಪದರ ಹಾಡುಗಳನ್ನು ಮತ್ತು ಬಸವಾದಿ ಶಿವಶರಣರ ವಚನಗಳನ್ನು ಇನ್ನಿತರ ಶಾಸ್ತ್ರಗಳನ್ನು ಅಧ್ಯಯನ ಮಾಡಿದ ಸರ್ವಜ್ಞ ಕವಿಯು, ಲೋಕಜೀವನದಲ್ಲಿ ಇದ್ದೂ ಇಲ್ಲದಂತೆ ಬಾಳಿ ಬದುಕಿ ನಮಗೆ ನೀತಿಯ ಬೋಧನೆಯನ್ನು ತನ್ನ ಅನುಭವದ

---

**ಡಾ. ಆರ್.ಬಿ. ಚಿಲುಮಿ,** "ಹೊಂಬೆಳಕು", ನಂ. 3, ಓಂ ಸ್ಕೂಲ್ ಹತ್ತಿರ, ಜಲದರ್ಶಿನಿ ನಗರ, ಧಾರವಾಡ - 580 003

ಮೂಸೆಯಿಂದ ನೀಡಿದ ವಚನಗಳೇ ನಮ್ಮ ಬದುಕಿಗೆ ದಾರಿದೀಪಗಳಾಗಿವೆ. ಅಂತಹ ನೀತಿಯ ಮಾತುಗಳಿಂದೊಡಗೂಡಿದ ಸಂತ ಕವಿಯ ವಚನಗಳು ತ್ರಿಪದಿಯ ಬಂಧದಲ್ಲಿ ಏಳು ಲಕ್ಷ ಎಪ್ಪತ್ತೇಳು ಸಾವಿರದ ಎಪ್ಪತ್ತು ವಚನಗಳನ್ನು ರಚಿಸಿದ್ದೇನೆಂದು ತಮ್ಮದೇ ಆದ ವಚನವೊಂದರಲ್ಲಿ ಹೇಳಿರುವನು. ಆದರೆ ನಮಗೆ ದೊರೆತಿರುವ ವಚನಗಳ ಸಂಖ್ಯೆ ಕೇವಲ ಎರಡು ಸಾವಿರದ ಒಂದುನೂರು ಮಾತ್ರ! ಅದೂ ಉತ್ತಂಗಿ ಚೆನ್ನಪ್ಪನವರ ಪ್ರಯತ್ನದ ಫಲದಿಂದ.

ಕನ್ನಡದ ದೇಸೀ ಕಾವ್ಯಪದ್ಧತಿಯು ಜನಸಾಮಾನ್ಯರಿಗೂ ಸಾಹಿತ್ಯದ ಸವಿಯನ್ನು ಸುಲಭಸಾಧ್ಯಗೊಳಿಸಿದೆ. ಜನಜೀವನಕ್ಕೆ ಹೊಂದಿದ ಜೀವಂತ ಭಾವ ಭಾಷೆಗಳ ರೂಪದಲ್ಲಿ ಈ ಸರಳ ಕಾವ್ಯಶೈಲಿಯು ಬಹು ಆಕರ್ಷಕವಾಗಿದೆ. ಈ ಜನಪದ ಸಾಹಿತ್ಯ ಗಂಗೆ ತ್ರಿಪದಿಗಳ ರೂಪದಲ್ಲಿ ಬಗೆಬಗೆಯಾಗಿ ತಿಳಿಯಾಗಿ ಹರಿದು ಜನರ ಜೀವನವನ್ನು ಪಾವನಗೊಳಿಸಿದೆ, ಅವರ ಮನವನ್ನು ತಣಿಸಿದೆ. ಇಂತಹ ಸಾಹಿತ್ಯವನ್ನು ಹೆಣೆದು ಜನತೆಯ ನಾಲಗೆಯ ಮೇಲೆ ಅದು ಚಿರಕಾಲ ಉಳಿಯುವಂತೆ ಹಾಡಿದ ವರಕವಿಗಳ ಪಂಕ್ತಿಯಲ್ಲಿ ಸರ್ವಜ್ಞನಿಗೆ ಅಗ್ರಪಟ್ಟ ಸಲ್ಲಬೇಕು. ಈತನು ಬಳಸಿರುವ ತ್ರಿಪದಿಯು ಬಹು ಸರಳವಾದ ಜಾನಪದ ಛಂದಸ್ಸು.

ಸರ್ವಜ್ಞನಂತಹ ಕವಿ ಕನ್ನಡದಲ್ಲಿ ಸರ್ವಜ್ಞನೊಬ್ಬನೇ. ಅವನಿಗೆ ಅವನೇ ಸರಿಸಾಟಿ. ಜಾನಪದ ಕವಿ ಚಕ್ರವರ್ತಿ ಎಂದು ಕರೆದರೂ ಸೂಕ್ತ! ತಿರುವಳ್ಳುವರ್, ವೇಮನ, ಸರ್ವಜ್ಞ, ಬಸವಣ್ಣ, ಕಬೀರ, ಪುರಂದರ, ಕನಕದಾಸರು ಇನ್ನೂ ಮುಂತಾದವರು ನೈತಿಕ ಸಾಹಿತ್ಯದ ರೂವಾರಿಯೆನಿಸಿದ್ದಾರೆ. ಇವರಲ್ಲಿ ಸರ್ವಜ್ಞನೇ ಸರ್ವಶ್ರೇಷ್ಠ ಸಂತನೆನಿಸಿಕೊಳ್ಳುತ್ತಾನೆ. ಏಕೆಂದರೆ ಸರ್ವರೊಳಗೊಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದವನವನು. ನೈತಿಕ ತಳಹದಿಯ ಮೇಲೆ ಅಂದಿನ ಸಮಾಜವನ್ನು ಸುಧಾರಿಸುವ ದೃಷ್ಟಿ ಕವಿ ಸರ್ವಜ್ಞನಲ್ಲಿ ತೀವ್ರವಾಗಿತ್ತು. ಅವನು ಈ ದಿಸೆಯಲ್ಲಿ 'ಹಿಂಡನಗಲಿದ ಗಜ'ದಂತಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಪ್ರತ್ಯೇಕ ಸ್ಥಾನವನ್ನು ಪಡೆದುಕೊಂಡಿದ್ದಾನೆ. ತ್ರಿಪದಿಯ ಮಾತ್ರಾಗಣದ ವಾರಸುದಾರ ನಾಗಿ ಸರ್ವಜ್ಞನು ಕಾಣುತ್ತಾನೆ. ಮೂಲದಲ್ಲಿರುವ ಜನಪದರ ತ್ರಿಪದಿಗಳು ಅಂಶಗಣಾ ನ್ವಿತವಾಗಿದ್ದವು ಎಂದು ಬೇರೆ ಹೇಳಬೇಕಾದುದಿಲ್ಲ. ಒಟ್ಟು 11 ಗಣಗಳ ಸಂಯೋಜನೆಯಲ್ಲಿರುವ ತ್ರಿಪದಿಯು ಒಟ್ಟು 53 ಮಾತ್ರೆಗಳ ಲೆಕ್ಕಾಚಾರದಲ್ಲಿ ಈತನಿಂದ ರಚಿಸಲ್ಪಟ್ಟಿವೆಯೆಂಬುದು ವಿದ್ವಾಂಸರ ಅಭಿಪ್ರಾಯ. ಈತನ ರಚನೆಗಳನ್ನು ವಚನ ಗಳೆಂದು ಕರೆಯುವುದು ರೂಢಿಯಾಗಿದೆ. ಆದರೂ ಅವುಗಳು ಮೂಲತಃ ವಾಸ್ತವವಾಗಿ ತ್ರಿಪದಿಗಳೇ! ಈಗಾಗಲೇ ಹೇಳಿದಂತೆ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು ಅಸ್ತವ್ಯಸ್ಥಗೊಂಡಿದ್ದ ಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಅಣಿಗೊಳಿಸಿ ಸರ್ವಜ್ಞನ ವಾಣಿಯನ್ನು ಮನೆಮನೆಗೆ ತಲುಪಿಸುವ

ಮೂಲಕ ಅವನ ಸಮಗ್ರ ದರ್ಶನವನ್ನು ಮಾಡಿಸಿದರು. "ಸರ್ವಜ್ಞನ ವಚನ"ಗಳು ಎಂಬ ಶೀರ್ಷಿಕೆಯಡಿಯಲ್ಲಿ ಸಂಪಾದಿಸಿ ಮುದ್ರಿಸಿದ್ದುದು ಸ್ಮರಣೀಯ. ಚೆನ್ನಪ್ಪನವರಿಗೆ ಇದು ಶಾಶ್ವತವಾದ ಕೀರ್ತಿ ತಂದುಕೊಟ್ಟ ಕೃತಿಯೂ ಹೌದು.

ವಿಜಯನಗರದ ಕಾಲದ ಜನಸಮ್ಮುಖವಾದ ಸಾಹಿತ್ಯದಲ್ಲಿ ಶರಣರು, ದಾಸರು ಹಾಗೂ ಇತರ ಕವಿಗಳು ನೀತಿಧರ್ಮ ಬೋಧನೆಗೈದವರು. ಇಂತಹ ವೈಭವದ ರಾಜವಂಶದ ಪತನಕಾಲದ ಸಂದರ್ಭದಲ್ಲಿ ಸರ್ವಜ್ಞ ಹುಟ್ಟಿ ಸಮಾಜವನ್ನು, ಜನಜೀವನವನ್ನೆಲ್ಲ ಚಿಕಿತ್ಸಕ ದೃಷ್ಟಿಯಿಂದ ವೀಕ್ಷಿಸಿದ ಕವಿ ಸರ್ವಜ್ಞ. ಈತನು 15–16ನೆಯ ಶತಮಾನದ ಪ್ರಸಿದ್ಧ ಹಾಗೂ ಜನಪ್ರಿಯ ವಚನಕಾರನಾಗಿದ್ದಾನೆ. ಈತನ ಒಂದೊಂದು ವಚನವೂ ಅಥವಾ ತ್ರಿಪದಿಯೂ ಸರ್ವಜ್ಞ ಸ್ವಯಂಪೂರ್ಣವಾದ ಮುಕ್ತಕ. ಅಥವಾ ಸುಭಾಷಿತ. ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ರಚಿಸಲಾರದ ವಿಷಯಗಳೇ ಉಳಿದಿಲ್ಲ ಎಂಬಂತೆ ಈತನ ತ್ರಿಪದಿಗಳಲ್ಲಿ ಪ್ರಸ್ತಾಪವಾಗ ದಿರುವ ವಿಷಯಗಳೇ ಇಲ್ಲ. ಇವನ ತ್ರಿಪದಿಗಳಲ್ಲಿ ನೀತಿ, ತತ್ವ, ವಿವೇಕ, ಮಿತ್ರಸಮ್ಮಿತ, ಕಾಂತಾಸಮ್ಮಿತ, ಅನುಭವ, ವಿಡಂಬನೆ, ಅಮೃತ ರಸಾಯನವಿದೆ. ಒಟ್ಟಿನಲ್ಲಿ ಎ.ಆರ್. ಕೃಷ್ಣಶಾಸ್ತ್ರಿಯವರು ಹೇಳುವಂತೆ: 'ಸರ್ವಜ್ಞ ಎಂಬುದು ಎಲ್ಲವನ್ನು ತಿಳಿದ, ಜ್ಞಾನಸ್ವರೂಪವಾದ ಭಗವಂತನನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಯೋಗಿಸುವ ಅಂಕಿತವಾಗಿ ಕಾಣುತ್ತದೆಯೆಂದಿದ್ದಾರೆ'. ಕವಿಯೇ ತಿಳಿಸಿರುವಂತೆ ಸರ್ವಜ್ಞ ಕರ್ತನು ಒಬ್ಬನೇ ಜಗಕ್ಕೆಲ್ಲ ದೈವ ಒಬ್ಬನೇ ಎಂದಿರುವುದು ಅವನ ವ್ಯಕ್ತಿತ್ವ ಗುರುತ್ವದ ಬಿರುದು ಕೂಡ ಆಗಿರಬಹುದು. ಆತ ಹೇಳಿದ ತ್ರಿಪದಿಯಲ್ಲಿ ಹೀಗಿದೆ:

> ಒಬ್ಬನಲ್ಲದೆ ಜಗಕೆ ಇಬ್ಬರುಂಟೆ?
> ಒಬ್ಬ ಸರ್ವಜ್ಞಕರ್ತನು ಜಗಕೆಲ್ಲ
> ಒಬ್ಬನೇ ದೈವ ಸರ್ವಜ್ಞ

ಅಂದರೆ 'ಸರ್ವಜ್ಞ' ಎಂಬ ಅಂಕಿತವು ತನ್ನ ಗುರುವಿನ ಇಲ್ಲವೇ ಇಷ್ಟದೇವನ ಅಂಕಿತವಾಗಿರಬೇಕೆಂದೂ, ಸಂಕೇತವಾಗಿರಬೇಕೆಂದೂ ತೋರುತ್ತದೆ.

ಈತನ ತ್ರಿಪದಿಗಳಲ್ಲಿ ಗಟ್ಟಿತನವಿದೆ. ಎಲ್ಲವೂ ಸರಸವಾಗಿ ದೇಸೀಯ ನುಡಿಗಟ್ಟು ಗಳಲ್ಲಿ ನಿರೂಪಿತವಾಗಿವೆ. ಈತನು ಸರಳವಾದ ಸುಲಭ ಶೈಲಿಯಲ್ಲಿ ಉಪಮಾನ–ದೃಷ್ಟಾಂತಗಳ ಮೂಲಕ ಜನಸಾಮಾನ್ಯರ ಮನಕ್ಕೆ ನಾಟುವಂತೆ ಹೇಳುತ್ತಾನೆ. ಇವನ ತ್ರಿಪದಿಗಳು ಗಾದೆಗಳಂತೆ, ಮುಕ್ತಕಗಳಂತೆ ನಾಡಿನ ಎಲ್ಲ ಜನತೆಯ ಮನೆ ಮಾತಾಗಿವೆ. ತಮಿಳಿನ ತಿರುವಳ್ಳುವರ್, ತೆಲುಗಿನ ವೇಮನರಂತ ಜನತೆಯ ಕವಿಯಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದಾನೆ.

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದವನ ಬರಿಮಾತು ಕಿವಿಯೊಳು
ಕೂರ್ದಸಿಯ ಬಡಿದಂತೆ ಸರ್ವಜ್ಞ !

ಪ್ರತಿಯೊಬ್ಬನಲ್ಲಿಯೂ ರಸಿಕತೆಯೆಂಬುದು ತುಂಬಿ ತುಳುಕುತ್ತಿದ್ದರೆ ಉತ್ಸಾಹಿಯಾಗಿರುತ್ತಾನೆಂದು ಹೇಳಿದ ಕವಿಯ ಈ ಮಾತು ಯಾರಿಗಾದರೂ ಮನಮುಟ್ಟುವಂತಿದೆ. ಸರ್ವಜ್ಞನ ಜನಜೀವನವನ್ನು ಚೆನ್ನಾಗಿ ನಿರೀಕ್ಷಿಸಿ ಬದುಕಿನ ವಿವಿಧ ರೂಪಗಳ ವಿಶೇಷಗಳನ್ನು ಮನನ ಮಾಡಿ ಜೀವನವನ್ನು ಕುರಿತ ತನ್ನ ವಿಮರ್ಶೆಯನ್ನು ಸೂತ್ರರೂಪವಾದ ತ್ರಿಪದಿಗಳ ತ್ರಿಭಂಗಿಯ ವಿಲಾಸದಲ್ಲಿ ನಿಲ್ಲಿಸಿದ್ದಾನೆ. 'Literature is the criticism of life' – ಎಂದು ಹೇಳಿದ ಅರ್ನಾಲ್ಡನ ಈ ಮಾತು ಸರ್ವಜ್ಞನ ಸಾಹಿತ್ಯಕ್ಕೆ ಚೆನ್ನಾಗಿ ಹೊಂದುತ್ತದೆ. ಸಂಚಾರಿ ಕವಿಯಾದ ಸರ್ವಜ್ಞನು ಪ್ರತ್ಯಕ್ಷವಾಗಿ ಕಂಡ ದೃಶ್ಯಗಳಿಂದ ಜೀವನದ ಮೌಲ್ಯಗಳ ಕುರಿತು ಸಾಕಷ್ಟು ಅನುಭವಗಳನ್ನು ವಚನಗಳಲ್ಲಿ ಬಿತ್ತರಿಸಿದ್ದಾನೆ. ಈತನು ಸಮಾಜದ ಲೋಪ–ದೋಷಗಳು, ಮೇಲು–ಕೀಳು, ಬಡವ–ಬಲ್ಲಿದ, ಉಚ್ಚ–ನೀಚ ಎಂಬ ಭೇದಭಾವವನ್ನು, ಸಂಪ್ರದಾಯ, ರೂಢಿ, ಪರಂಪರೆ, ಆರಾಧನೆ, ಆಚರಣೆ, ಮೋಸ, ವಂಚನೆ, ಕಳ್ಳತನ, ಸುಳ್ಳುತನ ಇತ್ಯಾದಿ ಮನುಷ್ಯನ ಬಹುಮುಖವಾದ ವ್ಯಕ್ತಿತ್ವದ ವಿಷಮತೆಯನ್ನೆಲ್ಲ ತನ್ನ ವಚನಗಳಲ್ಲಿ ಟೀಕಿಸಿ, ವಿಮರ್ಶಿಸಿ, ವೈಚಾರಿಕ, ವಸ್ತುನಿಷ್ಠಮಾದರಿಯ ಹಾದಿಯನ್ನು ತೋರಿದ ಮಹಾದ್ರಷ್ಟಾರ. ಅಲ್ಲದೇ ಜೀವನ ಮಾರ್ಗದರ್ಶನದ ನೇತಾರನಾಗಿದ್ದಾನೆ. ಮೇಲೆ ಹೇಳಿದ ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ ಎನ್ನುವಲ್ಲಿ ಕಂಡಿದ್ದನ್ನು ಕಂಡೊಡನೆಯೇ ಪದ್ಯರೂಪದಲ್ಲಿ ಕಟ್ಟಿನಿಲ್ಲಿಸುವ, ಕೌಶಲ್ಯವಿರುವ ತ್ರಿಕಾಲಜ್ಞಾನಿಯಾದವನಿಗೆ ಮಾತ್ರವಿರುತ್ತದೆ. ಸರ್ವಜ್ಞನದು ಮನಸ್ಸನ್ನು ರಂಜಿಸುವ ಅಥವಾ ಅರ್ಥರಮ್ಯತೆಯನ್ನು ವ್ಯಂಜಿಸುವ ಉಕ್ತಿವಿಧಾನವಲ್ಲ. ಮನಸ್ಸನ್ನು ಕೆದಕುವ, ಚಾಟಿಯೇಟಿನಿಂದ ಹೊಡೆದೆಬ್ಬಿಸುವ ಉಕ್ತಿವಿಧಾನ.

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ, ಆ ಜಾತಿ, ಈ ಜಾತಿ, ಯಾವ ಜಾತಿ, ಶಿವನನ್ನೊಲಿದಾತನೇ ಜಾತ, ಅನ್ನದೇವರ ಮುಂದೆ ಇನ್ನು ದೇವರುಂಟೆ? ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಆ ದೇವ ಈ ದೇವ ಮಾದೇವನೆನಬೇಡ, ಹೆಣ್ಣಿನಿಂದಲೆ ಇಹವು–ಹೆಣ್ಣಿನಿಂದಲೆ ಪರವು, ಉತ್ತಮರಾ ನಡೆಯೂ–ನುಡಿಯೂ ತೀರ್ಥ – ಇತ್ಯಾದಿ ನುಡಿಮುತ್ತುಗಳಲ್ಲಿ ಜಾತಿ, ಮತ, ಪಂಥ, ದೇವರು, ಧರ್ಮಗಳ ಅಂಧಶ್ರದ್ಧೆ, ಗೊಡ್ಡು–ಮೌಢ್ಯತೆಯನ್ನು, ಭಕ್ತಿಯ ಡಾಂಭಿಕತೆ, ಆಷಾಢಭೂತಿತನವನ್ನು ಅರ್ಥವಿಲ್ಲದ ವ್ಯರ್ಥ ಪ್ರಯತ್ನದ ಸಾಕ್ಷಾತ್ಕಾರವನ್ನು ನೀಡಿದವನಾಗಿದ್ದಾನೆ. ಆತನ ಮಾತಿನಲ್ಲಿ ನೇರ, ಸರಳತೆ, ಚತುರ ಜೋಡಣೆ,

ತಿಳಿಯಾದ ಹಾಸ್ಯ ನಗೆ, ಅದೇ ಮಧುರಭಾವದ ರಸಿಕ ಮನೋಧರ್ಮಗಳ ಚಿತ್ರಣವನ್ನು ಕಾಣಬಹುದು.

ಅಂಗನೆಯರೊಲಿಯುವುದು ಬಂಗಾರ ದೊರೆಯುವುದು
ಸಂಗ್ರಾಮದೊಳಗೆ ಗೆಲುವುದು–ಇವು ಮೂರು
ಸಂಗಯ್ಯನೊಲುಮೆ ಸರ್ವಜ್ಞ

ಅಂಗನೆಯರೊಲುಮೆಯನ್ನು–ಸಂಗಯ್ಯನೊಲುಮೆಯನ್ನು ಕೂಡಿಸಿ ಹೇಳಿರುವುದು ಮಾರ್ಮಿಕವಾಗಿದೆ. ಹರನ ಕರುಣೆಯು ಮುಖ್ಯವಾಗಿ ಬೇಕೆಂದು ಸಾರಿದ್ದಾನೆ.

ದಂಡಿಸದೆ ದೇಹವನು ಖಂಡಿಸದೆ ಕರಣವನು
ಉಂಡುಂಡು ಸ್ವರ್ಗವೇರಲಿಕೆ–ಅದನೇನು
ರಂಡೆಯಾಳುವಳೆ ಸರ್ವಜ್ಞ

ಉಣ್ಣದೊಡವೆಯ ಗಳಿಸಿ ಮಣ್ಣಿನೊಳು ಮುಚ್ಚಿಟ್ಟು
ಚೆನ್ನಾಗಿ ನೆಲವ ಸಾರಿಸಿದವನ–ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ

ಎಂಬಂಥ ತ್ರಿಪದಿಗಳನ್ನು ಗಮನಿಸಿದರೆ, ಈ ಎರಡೂ ಬದುಕಿನ ಎರಡು ಧೋರಣೆಗಳನ್ನು ಕುರಿತು ವಿಮರ್ಶೆಯಾಗಿದೆ. ಪರರ ಮೇಲೆ ಕಣ್ಣಿಟ್ಟು ಸೋಮಾರಿ ಸಾಧಕ ಮತ್ತು ಜಿಪುಣನ ಧೋರಣೆಗಳನ್ನು ವಿಡಂಬಿಸಲಾಗಿದೆ. ಸರ್ವಜ್ಞನ ಉಕ್ತಿಗಳಲ್ಲಿ ನೆನಪಿನ ನಾಲಿಗೆಯ ಮೇಲೆ ರಸವೂರಿಸುವ ಎಷ್ಟೋ ಪಂಕ್ತಿಗಳು ದೊರಕುತ್ತವೆ. ಊರಿಂಗೆ ದಾರಿಯನು ಯಾರು ತೋರಿದರೇನು? ಚಿತ್ತವಿಲ್ಲದ ಗುಡಿಯ ಸುತ್ತಿದರೆ ಫಲವೇನು? ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ಇಂತಹ ಎಷ್ಟೊಂದು ಹೇಳಿಕೆಗಳು ಸರ್ವಜ್ಞನ ತ್ರಿಪದಿಗಳಲ್ಲಿ ದಂಡಿದಂಡಿಯಾಗಿ ಬಂದು ಮಿನುಗುತ್ತಿವೆ. ನಿಜವಾಗಿಯೂ ಹೇಳಬೇಕೆಂದರೆ ಸರ್ವಜ್ಞನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವದಿಂದ ಸ್ಥಾನ ಪಡೆದುಕೊಂಡು ಜನಮನ ಗೆದ್ದಿದ್ದಾನೆ. ಆತನ ಒಂದೊಂದು ಮಾತೂ, ತ್ರಿಪದಿಯೂ, ವಚನವೂ ವೇದವಾಕ್ಯಗಳಂತಿವೆ. ಸರ್ವಜ್ಞನ ಸುಪ್ರಸಿದ್ಧ ವಚನ ಹೀಗಿದೆ:

ಕಣ್ಣು, ನಾಲಿಗೆ, ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ–ಇವು ಮೂರು
ನಿನ್ನ ಕೊಂದವು ಸರ್ವಜ್ಞ

ಕಣ್ಣು, ನಾಲಿಗೆ, ಮನಸ್ಸನ್ನು ಅವು ನನ್ನವು–ಎಂದು ಅಭಿಮಾನಪಡಬೇಡವೆಂದು ಮನುಕುಲಕ್ಕೆ ಎಚ್ಚರಿಕೆ ಕೊಟ್ಟಿದ್ದಾನೆ. ತ್ರಿವಳಿಗಳ ತ್ರಿವಿಕ್ರಮ ಎಂಬುದೂ ಆತನ ಅನ್ವರ್ಥಕನಾಮ, ಸಮಾಜದಲ್ಲಿನ ಎಲ್ಲ ಪಟ್ಟಭದ್ರಹಿತಾಸಕ್ತಿಗಳ ಗುಟ್ಟನ್ನು ರಟ್ಟು ಮಾಡಿದವನು ಸರ್ವಜ್ಞ!

ಕೊಡುವಾತನೇ ಹರನು–ಪಡೆವಾತನೇ ನರನು! ಹಾಗಾದರೆ ಕೊಟ್ಟ ಹರನನ್ನು ನಾವು ಸ್ಮರಿಸುವುದು ಬೇಡವೆ? ಎನ್ನುತ್ತಾನೆ ಕವಿ ಸರ್ವಜ್ಞ,

ಆ ದೇವ ಈ ದೇವ ಮಾದೇವನೆನಬೇಡ
ಆ ದೇವರದೇವ ಭುವನದ ಪ್ರಾಣಿಗಳಿ
ಗಾದವನೇ ದೇವ ಸರ್ವಜ್ಞ

ಎಂದು ಲೋಕದ ಸಕಲ ಜೀವಾತ್ಮರಿಗೆ ಲೇಸನೇ ಬಯಸುವವನ ಮಹತ್ವವನ್ನು ಅತಿ ಶ್ರೇಷ್ಠವಾಗಿ ಹೇಳಿದ್ದಾನೆ. ದಯೆಯುಳ್ಳಾತನೇ ದೇವ, ಭುವನದ ಪ್ರಾಣಿಗಳಿ ಗಾದವನೇ ದೇವ. ಜೀವಹಿಂಸೆಯನ್ನು ದೇವಪೂಜೆಗೆ ಬಳಸುವ ಯಜ್ಞ–ಯಾಗಾದಿಗಳಿಂದ ದೇವ ಒಲಿಯಲಾರನೆಂದು ಖಂಡಿಸಿದ್ದಾನೆ. ಹಿಂಸೆಯಲ್ಲಿ ಹೊಲೆತನವಿದೆಯೇ ಹೊರತು ಹುಟ್ಟಿನಲ್ಲಿಲ್ಲ. ಜಾತಿಹೀನನ ಮನೆಯ ಜ್ಯೋತಿ ಹೀನವಲ್ಲ. ದೇವನೊಲಿದಾತನೇ ಜಾತ ಎಂದು ಸಮಾಜದಲ್ಲಿ ನೀತಿಯ ಜ್ಯೋತಿಯನ್ನು ಹೊತ್ತಿಸಿದ್ದಾನೆ ಕವಿ ಸರ್ವಜ್ಞ. ಪ್ರಾಣಿಬಲಿ ಮಾಡುವವರಿಗೆ ಕವಿ ಹೇಳಿದ್ದು ಹೀಗೆ:

ಕೊಲ್ಲದಿಪ್ಪಾ ಧರ್ಮವೆಲ್ಲರಿಗೆ ಸಮ್ಮತವು
ಅಲ್ಲದನು ಮೀರಿ ಕೊಲುವವನು–ನರಕಕ್ಕೆ
ನಿಲ್ಲದೇ ಹೋಹ ಸರ್ವಜ್ಞ

ಇದು ಬಸವಣ್ಣನವರ ದಯವಿಲ್ಲದ ಧರ್ಮವದೇವುದಯ್ಯ? ಎಂಬ ವಚನ ದಂತಿದೆ. ಸಕಲ ಜೀವರಾಶಿಗೆ ಲೇಸನೇ ಬಯಸಬೇಕೆಂಬುದು ಇಬ್ಬರೂ ಮಹಾನುಭಾವರ ಆಶಯವಾಗಿದೆ. ಯಜ್ಞ–ಯಾಗಾದಿಗಳಿಗೆಂದು ಅನೇಕ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಅಂದೂ ಇತ್ತು, ಇಂದೂ ನಡೆದಿದೆ. ವಾಮಾಚಾರದಂತಹ ಕರ್ಮಠ ಕಾರ್ಯಗಳು ಈಗಲೂ ಚಾಲ್ತಿಯಲ್ಲಿರುವುದನ್ನು ಕಾಣುತ್ತೇವೆ. ನರಬಲಿಗಳೂ ನಡೆದದ್ದುಂಟು. ಅದಕ್ಕಾಗಿ ಸರ್ವಜ್ಞನು ಖಂಡಿಸಿದ ಬಗೆಯಿಂತಿದೆ:

ಯಾಗದ ನೆಪದಿಂದ ಕೂಗಿ ತಿಂಬರು ಆಡ
ಯಾಗದಲಿ ಒಂದು ದಿಟವಿರಲು ಹೋತುಗಳ
ನಗಲಿಸುವರೇ ಸರ್ವಜ್ಞ ?

ಬಾಡ ತಿಂಬಾತಂಗೆ ಆಡೇನು? ಆವೇನು?
ಕೋಡಗವೇನು? ನರಿಯೇನು? ಮನೆಯಲಿದ್ದೆಡೆ
ನಾಯಿಯೇನು? ಸರ್ವಜ್ಞ

ಜಪವ ಮಾಡುವ ಜಿಹ್ವೆ ಉಪ ಜಿಹ್ವೆಯಾದಂತೆ
ಜಪ ಬೇರೆ, ಹಿಂಸೆಯದು ಬೇರೆ–ಅಂತ್ಯದಿ
ಜಪವೆತ್ತ ಹೋಯ್ತು? ಸರ್ವಜ್ಞ

ಆಡು ತಿಂಬರ್ತಿಯಲಿ ಮಾಡುವರು ಯಜನವನು
ತೀಡಿರಿದು ಹೊಲೆಯರೆನಿಸಪ್ಪ–ಹಾರುವರ
ಕಾಡಲಿಕ್ಕೆಂದ ಸರ್ವಜ್ಞ!

ಒಂದಾಡ ತಿಂಬಾತ ಹೊಂದಿದಡೆ ಸ್ವರ್ಗವನು
ಎಂದೆಂದು ಅಜನ ಕಡಿತಿಂಬ ಕಟಿಗ ತಾ
ನಿಂದ್ರನೇಕಾಗ? ಸರ್ವಜ್ಞ

ಕೊಂದು ತಿನ್ನುವ ಹೊಲೆಯನೆಂದು ನೀನೆನಬೇಡ
ನೊಂದ ಜೀವವನು ತಾನರಿವ ಹಾರುವನು
ಕೊಂದಾದ ಹೊಲೆಯ ಸರ್ವಜ್ಞ

ಆವಾವ ಜೀವವನು ಹೇವವಿಲ್ಲದೆ ಕೊಂದು
ಸಾವಾಗ ಶಿವನ ನೆನೆದಿಹರೆ ಆವ ಬಂದು
ಕಾವನೇ ಹೇಳು? ಸರ್ವಜ್ಞ

ಅಂದು ನಡೆಯುವ ಹಿಂಸಾರೂಪ, ಬಲಿಕೊಡುವ ಪದ್ಧತಿ ಇಂದೂ ಕೂಡ ಯಥೇಚ್ಛವಾಗಿ ನಡೆದೇಯಿದೆ. ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದರೂ ನಡೆದೇಯಿದೆ. ಸರ್ವಜ್ಞನೇ ಹೇಳಿರುವಂತೆ ಜೀವ–ಜೀವಿಯ ಕೊಂದು ಜೀವಿಪುದು ಜಗವೆಲ್ಲ ಎಂಬುದು ನಿತ್ಯವೂ ನಡೆದೇಯಿದೆ. ಇಂದು ಶೀಲವಂತರೆನ್ನುವವರ ಓಣಿಯಲ್ಲಿಯೇ ಕೋಳಿ, ಕುರಿ, ಆಡು ಮಾಯವಾಗುತ್ತಲಿವೆ. ಮಾಂಸಸೇವನೆಯೇ ಭಕ್ಷ್ಯ ಭೋಜನ, ನಿತ್ಯ ಭೋಜನವಾಗಿರುವಾಗ ಸರ್ವಜ್ಞನ ಈ ಮಾತುಗಳನ್ನು ಯಾರು ಪಾಲಿಸಿಯಾರು? ನೀವೇ ಹೇಳಿ! ಪ್ರಾಣಿಗಳ ಮಾರಣಹೋಮ ನಡೆದೇಯಿದೆ. ಹಿಂದಿನದಕ್ಕಿಂತಲೂ ಇಂದು ಮಾಂಸಭಕ್ಷಕರ ಸಂಖ್ಯೆ ಎಲ್ಲಾ ಜಾತಿಯ ಜನಸಮುದಾಯದವರಲ್ಲಿ ನಡೆದಿದೆ. ಹೀಗೆ ಯಾವುದಾವುದೋ ಜೀವವನ್ನು ಯಾವ ಹೇವ, ಹೆದರಿಕೆಯಿಲ್ಲದೇ ಕೊಂದು ತಿನ್ನುತ್ತಿರುವಾಗ ಶಿವನನ್ನು ನೆನೆದದ್ದೇಯಾದರೆ ಬಂದು ರಕ್ಷಿಸುವನೆ? ಇಂಥವರ ಮೇಲೆ ಕರುಣೆ ತೋರುವನೆ? ಮಾಡಿದ, ಮಾಡುವ ಪಾಪಕ್ಕೆ ನರಕವೇ ಗತಿಯಲ್ಲವೆ? ಹೀಗೆ ಮಾಡುವವರು ಯಾವ ಕುಲದವರು? ಇಂಥವರ ಕುಲದ ನೆಲೆಯನೇನಾದರೂ ಬಲ್ಲಿರಾ? ಎಂದು ಪ್ರಶ್ನಿಸುತ್ತಾನೆ ಕವಿ ಸರ್ವಜ್ಞ!

ಕುಲ ಖಂಡನ: ಕವಿಯು ಕೆಲವು ವಚನಗಳಲ್ಲಿ ಕುಲದ, ಕುಲಾಚಾರದ ಬಗೆಗೆ ಹೀಗೆ ಖಂಡಿಸಿದ್ದಾನೆ:

ಸತ್ತುದನು ತಿಂಬಾತ ಎತ್ತಣದ ಹೊಲೆಯನು?
ಒತ್ತೊತ್ತಿ ಜೀವಿಯ ಕೊರಳ್ಹರಿದು ತಿಂಬಾತ
ಉತ್ತಮದ ಹೊಲೆಯ ಸರ್ವಜ್ಞ

ಹೊಲೆಯ ಮಾದಿಗರುಂಡು ತೊಲಗಿಟ್ಟ ತೊಗಲು ಸಲೆ
ಕುಲಜರೆಂಬವರಿಗೆ ಉಣಲಾಯ್ತು–ಹೊಲೆಯರ
ಕುಲವಾವುದಯ್ಯ ಸರ್ವಜ್ಞ!

ಕೊಂದು ತಿನ್ನುವ ಹೊಲೆಯನೆಂದು ನೀನೆನಬೇಡ
ನೊಂದ ಜೀವವನು ತಾನರಿವ–ಹಾರುವನು
ಕೊಂದಾದ ಹೊಲೆಯ ಸರ್ವಜ್ಞ

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೇ ಇರುತಿರಲು–ಕುಲಗೋತ್ರ
ನಡುವೆ ಎತ್ತಣದು? ಸರ್ವಜ್ಞ

ಸರ್ವಜ್ಞನ ಬತ್ತಳಿಕೆಯಲ್ಲಿ ಕುಲ ಮಾಡುವವರ, ಜಾತಿ–ವಿಜಾತಿ, ಭೇದ–ಭಾವ ಮಾಡುವವರ ಕುರಿತು ಬರೆದ ವಚನಗಳು ಅನೇಕ ಇವೆ.

ಕುಡಿವ ನೀರನು ತಂದು ಅಡಿಗೆ ಮಾಡಿದ ಮೇಲೆ
ಒಡನುಣ್ಣಲಾಗದಿಂತೆಂಬ ಮನುಜರ
ಒಡನಾಟವೇಕೆ ಸರ್ವಜ್ಞ?

ಎಂಜಲು ಎಂಜಲು (ಮಡಿ) ಎಂದು ಅಂಜುವರು ಹಾರುವರು
ಎಂಜಲಿಂದಾದ ತನುವಿರಲು–ಅದನರಿದು
ಅಂಜುತಿಹರೇಕೆ? ಸರ್ವಜ್ಞ

ಮುಟ್ಟಾದ ಹೊಲೆಯೊಳಗೆ ಹುಟ್ಟಿಹುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ ಹಾರುವನು
ಹುಟ್ಟಿದನು ಎಲ್ಲಿ? ಸರ್ವಜ್ಞ!

ಆದುದರಿಂದ ಜಾತಿ–ವಿಜಾತಿ ಮಾಡಬೇಡಿರಿ! ಎಲ್ಲರೂ ಬಂದದ್ದು ಹೊಲೆಯೊಳಗೆ ಮತ್ತೇಕೆ ಜಾತಿಯ ಬಗೆಗೆ ತರತಮ ಭಾವ ಮೂಡುವುದು? ಎಂದು ಪ್ರಶ್ನಿಸಿದ್ದಾನೆ ಸರ್ವಜ್ಞ, ಅಂಥವರಿಗೆ ಪ್ರತ್ಯುತ್ತರವಾಗಿ ಕವಿ ಹೇಳಿದ್ದು ಹೀಗಿದೆ:

ಕುಲವಿಲ್ಲ ಯೋಗಿಗೆ ಛಲವಿಲ್ಲ ಜ್ಞಾನಿಗೆ
ತೊಲೆ ಕಂಬವಿಲ್ಲ ಗಗನಕ್ಕೆ, ಸ್ವರ್ಗದಲಿ
ಹೊಲಗೇರಿಯಿಲ್ಲ ಸರ್ವಜ್ಞ

ಎಲುವಿಲ್ಲ ನಾಲಗೆಗೆ ಬಲವಿಲ್ಲ ಬಡವಂಗೆ
ತೊಲೆ ಕಂಬವಿಲ್ಲ ಗಗನಕ್ಕೆ, ದೇವರಲಿ
ಕುಲಭೇದವಿಲ್ಲ ಸರ್ವಜ್ಞ

ಉತ್ತಮರು ಪಾಲ್ಗಡಲೊಳೆತ್ತಿಹರೆ ಜನ್ಮವನು?
ಉತ್ತಮರು ಅಧಮರೆನಬೇಡ ಹೊಲೆಯಿಲ್ಲ
ದುತ್ತಮರು ಎಲ್ಲಿ? ಸರ್ವಜ್ಞ

ಹಸಿವು, ತೃಷೆ, ನಿದ್ರೆಗಳು ವಿಷಯ ಮೈಥುನ ಬಯಕೆ
ಪಶು, ಪಕ್ಷಿ, ನರಗೆ ಸಮನಿರಲು, ಕುಲವೆಂಬ
ಘಸಣೆ ಎತ್ತಣದು ಸರ್ವಜ್ಞ ?

ಕೂಳಿಂದ ಕುಲ ಬೆಳೆದು–ಬಾಳಿಂದ ಬಲ ಬೆಳೆದು
ಕೂಳು ನೀರುಗಳು ನೀಗಿದರೆ ಕುಲಗಳನು
ಕೇಳಬೇಡೆಂದ ಸರ್ವಜ್ಞ ?

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ?
ಜಾತಿ–ವಿಜಾತಿಯೆನಬೇಡ–ದೇವನೊಲಿ
ದಾತನೇ ಜಾತ ಸರ್ವಜ್ಞ

ಯಾತರದ ಹೂವೇನು? ನಾತರದು ಸಾಲದೇ?
ಜಾತಿ–ವಿಜಾತಿಯೆನಬೇಡ–ದೇವನೊಲಿ
ದಾತನೇ ಜಾತ ಸರ್ವಜ್ಞ !

ಭೂತೇಶಗೆರಗುವನು ಜಾತಿ ಮಾದಿಗನಲ್ಲ
ಜಾತಿಯಲಿ ಹುಟ್ಟಿ ಶಿವನಿಗೆ ಶರಣೆನ್ನ
ದಾತ ಮಾದಿಗನೇ ಸರ್ವಜ್ಞ?

ಉತ್ತಮದ ವರ್ಣಿಗಳೇ ಉತ್ತಮರು ಎನಬೇಡ
ಮತ್ತೆ ತನ್ನಂತೆ ಬಗೆದೆಲ್ಲರನು
ಉತ್ತಮರೆನು ಸರ್ವಜ್ಞ

ಜಾತಿ–ವಿಜಾತಿ–ಕುಲಭೇದ ಮಾಡುವವರ ಕುರಿತು ನೂರಾರು ವಚನಗಳಿವೆ. ಬ್ರಾಹ್ಮಣ, ಕ್ಷತ್ರಿಯ, ವೈದ್ಯ, ಶೂದ್ರ ಎಂಬುದಾಗಿ ವಿಂಗಡಣೆಯನ್ನು ನಾವು ಮಾಡಿಕೊಂಡದ್ದು. ಎಲ್ಲರೂ ಹುಟ್ಟು ಪಡೆದುದು ಒಂದೇ ಮೂಲದಿಂದಲ್ಲವೆ? ನಾವು ವಾಸಿಸುವ ಮತ್ತು ಸೇವಿಸುವ ಅನ್ನ ಬೆಳೆಯುವ ಭೂಮಿ ಒಂದೇ ಅಲ್ಲವೆ? ನೀರು, ಗಾಳಿ, ಅಗ್ನಿ ಮತ್ತಿತರ ಪಂಚಭೂತಗಳನ್ನು ಮನುಷ್ಯ ಸೃಷ್ಟಿಸಿಕೊಂಡನೇನು? ಇಂಥವುಗಳನ್ನು ಕರುಣಿಸಿದವನು ಪರಮಾತ್ಮನೇ ಎಂದಾದಾಗ ಮತ್ತೇಕೆ ಕುಲ–ಜಾತಿ ಮಾಡುವಿರಿ. ಪರಮಾತ್ಮನ ಎದುರಿಗೆ

ಯಾರೂ ಮೇಲಲ್ಲ-ಕೀಳಲ್ಲ. ಹಾಗೆಯೇ ಈ ಸಮಾಜದಲ್ಲಿ ಎಲ್ಲರೂ ಕೂಡಿ ಬಾಳಿದರೆ ಸ್ವರ್ಗಸುಖ ಪ್ರಾಪ್ತವಾಗುತ್ತದೆ ಎಂದು ಹೇಳಿದ ಸರ್ವಜ್ಞನ ವಚನಗಳು ನಮಗೆ ಇಂದು-ಎಂದೆಂದಿಗೂ ಮಾರ್ಗದರ್ಶಿಕೆಗಳಾಗಿವೆ. ನೆಲ, ಜಲ, ಜ್ಯೋತಿ, ಭೂಮಿ, ಭಾನು ಎಲ್ಲವೂ ಎಲ್ಲರಿಗೂ ಒಂದೇ ಆಗಿರುವಾಗ ಮತ್ತೇಕೆ ಪ್ರತ್ಯೇಕತಾವಾದ? ಇದನ್ನರಿತು ನಡೆಯುವುದೊಂದೆ ನಮ್ಮ ಕರ್ತವ್ಯವಾಗಬೇಕು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಮೊದಲಾದವರ ನೊಳಗೊಂಡು ಎಲ್ಲರೂ ಒಂದಾಗಿ ಕೂಡಿ ಬಾಳುವುದೇ ಸ್ವರ್ಗಸುಖವೆಂದು ಹೇಳಿದ ಬಸವಾದಿ ಪ್ರಮಥರ ಮಾದರಿಯನ್ನೇ ಮೂರು ಸಾಲುಗಳಲ್ಲಿಯೇ ಸರ್ವಜ್ಞ ಕವಿಯು ಅದೆಷ್ಟು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾ ನೆಂಬುದು ಮೇಲಿನ ವಚನಗಳಿಂದ ತಿಳಿದುಬರುತ್ತದೆ. ಸಮಾಜದಲ್ಲಿ ಮಾನವನು ಅನುಸರಿಸಬೇಕಾದ ನೀತಿ, ಧರ್ಮ ನೀತಿ, ಅನ್ಯಾಯ ನೀತಿ, ಗುರು-ಹಿರಿಯರ ಪ್ರೀತಿ, ರಾಷ್ಟ್ರಭಕ್ತಿ, ನಾಡಪ್ರೇಮ ಹೇಗಿರಬೇಕು ಎಂಬುದಕ್ಕೆ ಕೆಲವು ವಚನಗಳು ಇಂತಿವೆ.

ಪಾಪ ಪುಣ್ಯಗಳೆಂಬ ಎಂಬ ತಿಣ್ಣ ಭೇದಗಳಿಂದ
ತಣ್ಣಗೀ ಜಗವು ನಡೆದಿಹುದು ಅಲ್ಲದಡೆ
ನುಣ್ಣನಾಗಿಹುದು ಸರ್ವಜ್ಞ

ಪಾಪ-ಪುಣ್ಯ, ಸ್ವರ್ಗ-ನರಕ, ನಾವು ಮಾಡುವ ಕೃತ್ಯಗಳಲ್ಲಿವೆ. ಒಳಿತು ಮಾಡಿದರೆ ಪುಣ್ಯದ ರಾಶಿ; ಕೆಡುಕು ಮಾಡಿದರೆ ನರಕ ಬಿಕನಾಶಿ ಎಂದು ಕವಿ ಕುವೆಂಪು ಅವರೆಂದಂತೆಯೇ ಆಗಿದೆ. ಪಾಪ-ಪುಣ್ಯಗಳೆಂಬಿವು ಬೇರಿಲ್ಲ ಕಾಣಿರೊ ನಾವು ನಿಂತ ನೆಲದಲ್ಲಿಯೇ ಅವು ಇವೆ. ಆದರೆ ಆಚರಣೆಯ ಭಾಗ ನಿಮಗೆ ಬಿಟ್ಟುಕೊಟ್ಟ ವಿಷಯವಾಗಿದೆ. ಸರ್ವಜ್ಞ ಹೇಳಿರುವಂತೆ:

ಮುನ್ನ ಮಾಡಿದ ಪಾಪ ಹೊನ್ನಿಂದ ಹೋಪುದೆ?
ಹೊನ್ನಿನ ಪುಣ್ಯವದು ಬೇರೆ, ಪಾಪ ತಾ
ಮುನ್ನಿನಂತಿಹುದು ಸರ್ವಜ್ಞ

ಮಾಡಿದ ಪಾಪ ಕರ್ಮದ ಫಲ ತಾ ಉಣ್ಣಲೇಬೇಕಲ್ಲವೆ? ಎಂಬಂತೆ, ಸಮಾಜದ ಬಾಳ್ವೆಯಲ್ಲಿ ಪಾಪಕೃತ್ಯವೆಸಗದೇ ಪರೋಪಕಾರಜೀವಿಯಾಗಿ ಬದುಕಬೇಕೆಂದು ಹಿತ ನುಡಿದಿದ್ದಾನೆ. ಪಾಪ-ಪುಣ್ಯಗಳ ಫಲಾಫಲ ಮಾಡುವ ಕ್ರಿಯೆಯಲ್ಲಿರುತ್ತದೆ. ಅರಿತು ಆಚರಿಸಬೇಕಷ್ಟೇ!

ಕಿರಿಯಂದಿನಾ ಪಾಪ ನೆರೆ ಬಂದು ಹೋದೀತೆ?
ಅರಿವಿಂಗೆ ಹಿರಿದು ಕಿರಿದಿಲ್ಲ-ಇದನು ನೀ
ನರಿದು ನೋಡೆಂದ? ಸರ್ವಜ್ಞ

ನಿನ್ನ ಅರಿವೇ ನಿನಗೆ ಗುರುವಿದ್ದಂತೆ. ಸಣ್ಣ ಪಾಪ ಮಹಾಪಾಪವೆಂದು ಭೇದವಿಲ್ಲ. ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೆಂಬ ನೀತಿಯೇ ಮದ್ದು ಎಂಬುದನ್ನು ಅರಿತುಕೊಂಡು ನಡೆಯೆಂದ ಸರ್ವಜ್ಞ, ಅರಿವಿಗೆ ಹಿರಿದು–ಕಿರಿಯದೆಂಬ ಭೇದ–ಭಾವವಿಲ್ಲ.

ಹಿಂದೆ ಪಾಪವ ಮಾಡಿ ಮುಂದೆ ಪುಣ್ಯವು ಹೇಗೆ?
ಹಿಂದೆ–ಮುಂದನರಿದು ನಡೆಯದಿರೆ ನರಕದಲಿ
ಬೆಂದು ಸಾಯುವುದು ಸರ್ವಜ್ಞ

ಹರೆಯಲ್ಲಿನಾ ಪಾಪ ಕೆರೆಯಲ್ಲಿ ಪೋಪುದೆ?
ಒರೆಗಲ್ಲಿನಂತೆ ವಿಧಿಯಿರಲು, ನೀತಿಯ
ಇರವು ಬೇಕೆಂದ ಸರ್ವಜ್ಞ

ಪಾಪಕೃತ್ಯ ಮಾಡಿದವನು ನರಕದಲ್ಲಿಯೇ ಬೆಂದು ಸಾಯುವನು–ಆದರೆ ಅರಿತುಕೊಂಡ ಮೇಲಾದರೂ ಪಾಪಕೃತ್ಯ ಮಾಡುವುದನ್ನು ಬಿಡಬೇಕು. ದೇವನಾಮಸ್ಮರಣೆಯಲ್ಲಿ ತೊಡಗಬೇಕೆಂದು ಹಿತ ನುಡಿದಿದ್ದಾನೆ ಸರ್ವಜ್ಞ! ನೀತಿಯುತ ಬದುಕೇ ಜೀವನವನ್ನು ಪಾರುಗಾಣಿಸುವುದೆಂದಿದ್ದಾನೆ. ಸರ್ವಜ್ಞನ ಮಾತುಗಳಲ್ಲಿಯೇ ಕೇಳಿ:

ಅರಿಯದೆಸಗಿದ ಪಾಪ ಅರಿತರದು ತನಗೊಳಿತು
ಅರಿತರಿತು ಮಾಡಿ ಮರೆತರದು ನಯನವನು
ಇರಿದುಕೊಂಡಂತೆ ಸರ್ವಜ್ಞ

ಅರಿತು ಮಾಡಿದ ಪಾಪ ಮರೆತರದು ಪೋಪುದೇ ?
ಮರೆತರೆ ಮರವ ಬಿಡಿಸುವುದು, ಕೊರತೆಯದು
ಅರಿತು ನೋಡೆಂದ ಸರ್ವಜ್ಞ

ನರಜನ್ಮಕ್ಕೆ ಬಂದ ಮೇಲೆ ಅರಿವು–ಆಚರಣೆ ಮುಖ್ಯ! ಮರೆವು, ಆಲಸ್ಯ ಗುಣಗಳಿರಕೂಡದು. ಅಂತರಂಗದೊಳಗೆ ಅರಿತು ನೋಡಿಕೊಂಡು ನಡೆಯ ಬೇಕೆಂದು ಹಿತನುಡಿದ ಬಗೆಯಿದೆ. ಪುಣ್ಯ ಪಡೆಯುವುದಕ್ಕಾಗಿಯೇ ಮನುಷ್ಯನ ಹಂಬಲವಿರಬೇಕೆಂಬುದು ಕವಿಯ ಹೇಳಿಕೆಯಾಗಿದೆ.

ಪುಣ್ಯತನಗುಳ್ಳನಕ ಮನ್ನಣೆಯು ಪಿರಿದಕ್ಕು
ಹಣ್ಣಿದ ಕಾರ್ಯ ಫಲವಕ್ಕು–ಮುಟ್ಟಿದ
ಮಣ್ಣು ಹೊನ್ನಕ್ಕು ಸರ್ವಜ್ಞ

ತೋಡಿರ್ದ ಬಾವಿಂಗೆ ಕೂಡಿರ್ದ ಜಲ ಸಾಕ್ಷಿ
ಮಾಡಿರ್ದಕೆಲ್ಲ ಮನ ಸಾಕ್ಷಿ–ಸರ್ವಕೂ
ಮೃಡನೇ ತಾ ಸಾಕ್ಷಿ ಸರ್ವಜ್ಞ !

ಪಾಪ ಮಾಡಿಯೂ ಮಾಡಿಲ್ಲ ತಾನೆಂದರೆ ನಡೆಯದು. ಅವರವರ ಮನವೇ ಸಾಕ್ಷಿ! ಮಾಡಿದ ಕಾರ್ಯಕ್ಕೆ ಪ್ರತಿಫಲವುಂಟು ಇದು ದಿಟದ ಮಾತು. ಇದನ್ನು ನೋಡಿಕೊಳ್ಳುವವನು ಯಾರೆಂದರೆ ಆ ಪರಮಾತ್ಮನೇ ಸಾಕ್ಷಿ ಎಂಬುದಾಗಿ ಕವಿ ನಿರೂಪ ನೀಡಿದ್ದಾನೆ.

ಸತ್ಯ ನುಡಿದತ್ತರೂ ಸುತನೊಬ್ಬ ಸತ್ತರೂ
ಸತ್ಯವನು ಬಿಡದ ಹರಿಶ್ಚಂದ್ರ ಜಗದೊಳಗೆ
ಸ್ತುತ್ಯನಾಗಿಹನು ಸರ್ವಜ್ಞ

ಸತ್ಯವೆಂಬುದು ತಾನು ನಿತ್ಯದಲಿ ಮರೆದಿಹುದು
ಮಿಥ್ಯ ಸತ್ಯವನು ಬೆರೆದರೂ ಇಹಪರದಿ
ಸತ್ಯಕೆ ಜಯವು ಸರ್ವಜ್ಞ

ಹುಸಿವನಿಂದ ಐನೂರು ಪಶುವ ಕೊಂದವ ಲೇಸು
ಶಿಶುವಧೆಯ ಮಾಡಿದವ ಲೇಸು, ಮರೆಯಲಿ
ದ್ದೆಸೆದರೂ ಲೇಸು ಸರ್ವಜ್ಞ

ಹುಸಿಯ ಪೇಳುವುದರಿಂದ ಹಸಿದು ಸಾವುದು ಲೇಸು
ಹುಸಿದು ಮೆರೆಯುವನ ಬದುಕಿಂದ ಹಂದಿಯ
ಇಸಿಯು ಲೇಸೆಂದ ಸರ್ವಜ್ಞ

ದಿಟವೇ ಪುಣ್ಯದ ಪುಂಜ–ಸಟೆಯೇ ಪಾಪದ ಬೀಜ
ಕುಟಿಲ ವಂಚನೆಗೆ ಪೋಗದಿರು–ನಿಜದಿ ಪಿಡಿ
ಘಟವನೆಚ್ಚರದಿ ಸರ್ವಜ್ಞ !

ಸುಳ್ಳು, ವಂಚನೆ, ಮೋಸದ ಜೀವನ ಯಾವಾಗಲೂ ದಡವ ಮುಟ್ಟಿಸದು, ಪಾರುಮಾಡಲಾರದು ಎಂಬುದಕ್ಕೆ ಮೇಲಿನ ಮೂರು ವಚನಗಳಲ್ಲಿ ಸುಳ್ಳು ನಡೆಯದು ಸತ್ಯ ಶಾಶ್ವತವಾದುದು ಎಂಬುದನ್ನು ಸರ್ವಜ್ಞನು ಅರ್ಥವತ್ತಾಗಿ ಸಾಮಾನ್ಯನಿಗೆ ಮನಂಬುಗುವಂತೆ ಪ್ರತಿಪಾದಿಸಿದ್ದಾನೆ.

ಬತ್ತಿ ಎಣ್ಣೆಗಳೆರಡು–ಹೊತ್ತಿ ಬೆಳಗುವ ತೆರದಿ
ಸತ್ಯ ನೀತಿಗಳು ಬೆಳಗಿಹವು–ಜೋಡಗಲೆ
ಕತ್ತಲೀ ಜಗವು ಸರ್ವಜ್ಞ !

ಸತ್ಯರಿಗೆ ಧರೆಯೆಲ್ಲ ಮಸ್ತಕವನೆರಗುವುದು
ಹೆತ್ತ ತಾಯ್ ಮಗನ ಕರೆವಂತೆ–ಶಿವನವರ
ನೆತ್ತಿಕೊಂಬುವನು ಸರ್ವಜ್ಞ

ಕುಂದನಳಿದವ ದೈವ–ಬಂಧ ಕಳೆದವ ದೈವ
ನೊಂದು ತಾ ನೋಯಿಸದವ ದೈವ–ಹುಸಿಯದನು
ಇಂದುಧರನೆಂದ ಸರ್ವಜ್ಞ !

ಸತ್ಯವನ್ನು ನಿತ್ಯ ಪ್ರಾಮಾಣಿಕತೆಯಿಂದ ಅನುಸರಿಸಿಕೊಂಡು ಬಂದ ಸತ್ಯ ಹರಿಶ್ಚಂದ್ರ ಮಹಾರಾಜನ ಚರಿತ್ರೆಯನ್ನು ತಾಯಿಯಿಂದ ಕೇಳಿಸಿಕೊಂಡ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹಾಗೆಯೇ ನಡೆದುಕೊಂಡದ್ದರಿಂದಲೇ ಸ್ವಾತಂತ್ರ್ಯಸಂಗ್ರಾಮದಲ್ಲಿ ಯಶಸ್ಸು ಹೊಂದಲಿಲ್ಲವೆ? ಸತ್ಯವ್ರತವೆಂಬ ಕೂರಲಗು ಎಂಬ ಅಸ್ತ್ರದಿಂದ ಬ್ರಿಟಿಷರನ್ನು ನಮ್ಮ ದೇಶದಿಂದ ತೊಲಗಿಸಿದುದಲ್ಲವೆ? ಆದುದರಿಂದ ಸತ್ಯ ಯಾವತ್ತೂ ಪ್ರಕಾಶಮಾನವಾದುದು, ಶಾಶ್ವತವಾದುದು. ಸತ್ಯವಂತರಿಗೆ ಧರೆಯೆಲ್ಲವೂ ನತ–ಮಸ್ತಕವಾಗುವುದು. ಸತ್ಯವಂತರನ್ನು ಶಿವನು ಯಾವತ್ತೂ ಎತ್ತಿಕೊಂಡು ಮುದ್ದಾಡುತ್ತಾನೆ. ಇವೆಲ್ಲವೂ ಜಾತಿಯ ಭೇದ ಮಾಡುವವರಿಗೆ, ಸುಳ್ಳರಿಗೆ, ಕಳ್ಳರಿಗೆ, ವಂಚಕರಿಗೆ, ಎಚ್ಚರಿಕೆಯ ಗಂಟೆಗಳಾಗಿವೆಯೆಂಬುದರ ಅರಿಕೆ ಇಂದಿನವರಲ್ಲಿದ್ದರೆ ಸಾಕು! ಅದು ಕಾರಣ ಸರ್ವಜ್ಞನ ವಚನಗಳನ್ನು ಮತ್ತೆ ಮತ್ತೆ ಓದಬೇಕು, ಅರ್ಥೈಸಿಕೊಂಡು ಆಚರಣೆಯಲ್ಲಿ ತರಬೇಕೆಂಬುದಾಗಿ ನನ್ನದು ಕಳಕಳಿಯ ವಿನಂತಿ.

□

ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು.
ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಕಡಿಕಡಿದು
ಅರೆದರೆದು ಅನು ಮಾಡಿದ ಕಾರಣ ಎನ್ನ ಮನ ಶುದ್ಧವಾಯಿತ್ತು.
ಎನ್ನ ಸರ್ವಭೋಗಾದಿಭೋಗಂಗಳೆಲ್ಲ ನಿಮ್ಮ ಶರಣರಿಗರ್ಪಿತವಾಗಿ
ಎನ್ನ ಪ್ರಾಣ ಶುದ್ಧವಾಯಿತ್ತು.
ಎನ್ನ ಸರ್ವೇಂದ್ರಿಯಂಗಳೆಲ್ಲವು ನಿಮ್ಮ ಶರಣರ ಪ್ರಸಾದವ ಕೊಂಡ ಕಾರಣ
ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ
ನಿಮ್ಮ ಶರಣರಿಂತು ಎನ್ನನಾಗುಮಾಡಿದ ಕಾರಣ
ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣರಿಗೆ ತೊಡಿಗೆಯಾದೆನಯ್ಯಾ ಪ್ರಭುವೆ !

**- ಅಕ್ಕಮಹಾದೇವಿ**

# ಮೈಸೂರು ನಗರದ ಅರಮನೆ ಪಂಚಗವಿಮಠದ ಇತಿಹಾಸ

**ಡಾ. ಬಿ. ನಂಜುಂಡಸ್ವಾಮಿ**

**ಪ್ರ**ಪಂಚದ ಧಾರ್ಮಿಕ ಇತಿಹಾಸದಲ್ಲಿ ಭಾರತ ದೇಶದ ಧರ್ಮಗಳಿಗೆ ವಿಶೇಷವಾದ ಸ್ಥಾನ. ಈ ಮಣ್ಣಿನಲ್ಲಿ ಶಕ್ತಿವಿಶಿಷ್ಟಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಾಕ್ತ, ಗಾಣಪತ್ಯ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಧರ್ಮದ ಸಾಹಿತ್ಯ ಹುಲುಸಾಗಿ ಬೆಳೆದಿದೆ. ಈ ಹಿಂದೆ ತತ್ತ್ವಸಿದ್ಧಾಂತ ಅಧ್ಯಯನಕ್ಕೆ ನಮ್ಮ ಮಠಗಳು ಅಪಾರವಾದ ಶ್ರಮವನ್ನು ಹಾಕುತ್ತಾ ಇದ್ದವು. ಒಂದೊಂದು ಮಠಗಳ ಇತಿಹಾಸ ಬಹಳ ರೋಚಕವಾದದ್ದು. ಈ ನಿಟ್ಟಿನಲ್ಲಿ ಯುವ ವಿದ್ವಾಂಸರು, ಕ್ಷೇತ್ರಕಾರ್ಯ ಮಾಡಿ, ಲಭ್ಯ ದಾಖಲೆಗಳನ್ನು ಅಧ್ಯಯನ ಮಾಡಿ ಪ್ರಕಟಿತ ಸಾಹಿತ್ಯವನ್ನು ಗಮನಿಸಿ ಸಂಶೋಧನಾತ್ಮಕ ಲೇಖನಗಳನ್ನು ಬರೆಯಬೇಕು.

ಮೈಸೂರು ನಗರದ ಶಾಸನೋಕ್ತ ಅರಮನೆ ಪಂಚಗವಿಮಠದ ಶಿವಬಸವ ಸ್ವಾಮಿಗಳನ್ನು ಕುರಿತು ಲಿಂ॥ ಎಸ್. ಶಿವಣ್ಣನವರು "ಮೈಸೂರು ಅರಮನೆ ಪಂಚಗವಿಮಠದ ಶಿವಬಸವಸ್ವಾಮಿಗಳು: ಒಂದು ಟಿಪ್ಪಣಿ" ಎಂಬ ಸಂಶೋಧನಾತ್ಮಕ ಲೇಖನ ಬರೆದಿದ್ದರು. ಆ ಲೇಖನದ ಸಹಾಯದಿಂದ ನನ್ನ ಲೇಖನ ರೂಪುಗೊಂಡಿದೆ. ನನ್ನ ಈ ಲೇಖನದಲ್ಲಿ ಅರಮನೆ ಪಂಚಗವಿಮಠದ ಪರಂಪರೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದೇನೆ. ಮೈಸೂರು ಅರಮನೆ ಪತ್ರಗಳ ಸಂಗ್ರಹ, ಚಿತ್ರದುರ್ಗ ಬೃಹನ್‌ಮಠದ ಪತ್ರಗಳ ಸಂಗ್ರಹದ ಅಧ್ಯಯನ ನಂತರ ಇನ್ನಷ್ಟು ಹೊಸ ಮಾಹಿತಿ ಖಂಡಿತ ದೊರೆಯುತ್ತದೆ. ಈ ಪತ್ರಗಳ ಅಧ್ಯಯನವನ್ನು ಯುವ ವಿದ್ವಾಂಸರು ಮಾಡಬೇಕು ಎಂಬುದೇ ನನ್ನ ಅಪೇಕ್ಷೆ.

ಮೈಸೂರು ನಗರದಲ್ಲಿ ಹಲವು ಮಠಗಳು ಇದ್ದು ಅವುಗಳ ಪಟ್ಟಿಯನ್ನು ಈ ಹಿಂದೆ ನಾನೇ ಬರೆದ "ಮೈಸೂರಿನ ಶಾಸನೋಕ್ತ ಮಹತ್ತಿನಮಠ" ಲೇಖನದಲ್ಲಿ ನೀಡಿದ್ದೆ. ಮೈಸೂರಿನಲ್ಲಿ ಇರುವ ವೀರಶೈವ ಮಠಗಳು 1) ಕುದೇರು

---

**ಡಾ. ಬಿ. ನಂಜುಂಡಸ್ವಾಮಿ,** ಪಂಡಿತ ತಾರಾನಾಥ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಶಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು–2

ಮಠ 2) ಚೌಕಿಮಠ 3) ಸಾಂಬಪ್ಪನ ಮಠ 4) ಕಡಲೇ ಮಠ 5) ಹಳೇ ಮಠ 6) ಚಲ್ಯದ ಮಠ 7) ಮಹಲಿಂಗೇಶ್ವರ ಮಠ 8) ಹೊಸ ಮಠ 9) ಹುಲ್ಲಿನಬೀದಿ ಮಠ 10) ಮಡಿವಾಳಸ್ವಾಮಿ ಮಠ 11) ಶಿವಾಯ ಮಠ 12) ನಮಃಶಿವಾಯ ಮಠ 13) ಅನ್ನದಾನೀಶ್ವರ ಮಠ 14) ಕುಂದೂರು ಮಠ 15) ನೀಲಕಂಠಸ್ವಾಮಿ ಮಠ 16) ಅರಮನೆ ಜಪದಕಟ್ಟೆ ಮಠ 17) ಚಮಲ್ ಮಠ 18) ಅರಮನೆ ಪಂಚಗವಿ ಮಠ 19) ಭಿಕ್ಷದ ಮಠ 20) ಕೊಡಗಿನ ಮಠ 21) ಕೆಸರೆ ಮಠ 22) ಮಲ್ಲಿಕಾರ್ಜುನಸ್ವಾಮಿ ಮಠ 23) ಮಖಾರಿ ಮಠ 24) ಸುತ್ತೂರು ಶಾಖಾ ಮಠ 25) ಕೊಲ್ಲಿಪಾಕಿ ಮಠ (ಶಿವರಾಂಪೇಟೆ) 26) ಜಂಗಮವಾಡಿ ಮಠ (ಬೆಂಗಳೂರು ರಸ್ತೆ) 27) ಹಳೇ ಮಠ (ಈ ಹೆಸರಿನ ಎರಡು ಮಠ ಇವೆ) 28) ಮೈಸೂರಿನ ಶಾಸನೋಕ್ತ ಮಹಂತಿನ ಮಠ (ಈಗ ಈ ಮಠ ಕಾಲಗರ್ಭದಲ್ಲಿ ಅಡಗಿಹೋಗಿದೆ.)

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಇರುವ ಪಂಚಗವಿಗಳಿಂದ ಕೂಡಿರುವ ಬಹಳ ಅಪರೂಪದ ಮಠ. ಈಗ ಮಠ ಮೊದಲಿದ್ದ ಸ್ಥಿತಿಯಲ್ಲಿ ಇಲ್ಲ. ಮಹಾದ್ವಾರದಲ್ಲಿ ಲಿಂಗಮುದ್ರೆ ಇಕ್ಕೆಡೆ ಆನೆಗಳ ಕೆತ್ತನೆ ಇದೆ. ಗರ್ಭಗುಡಿಯಲ್ಲಿ ಮಠದ ಕರ್ತೃ ಗದ್ದುಗೆ ಇದ್ದು ಇಕ್ಕೆಡೆ ಆ ನಂತರ ಬಂದ ಮಠದ ಸ್ವಾಮಿಗಳ ಗದ್ದುಗೆ ಇದೆ. ನವರಂಗದಲ್ಲಿ ಮೈಸೂರು ಶೈಲಿಯ ಸುಂದರವಾದ "ಮಾರ್ಕಂಡೇಯನ ಶಿವಪೂಜಾ ವೈಭವ"ದ ತೈಲಚಿತ್ರವಿದೆ.

ಅರಮನೆ ಪಂಚಗವಿ ಮಠದಲ್ಲಿ ಧರ್ಮಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರ ಶಿಲಾಶಾಸನವಿದ್ದು ಶಾಸನದ ಶಿರೋಭಾಗದಲ್ಲಿ ಶ್ರೀಕೃಷ್ಣ ಹೆಸರಿನ ಕೆತ್ತನೆ ಕೆಳಗೆ ಸೂರ್ಯ, ಲಿಂಗಮುದ್ರೆ (ಲಿಂಗು–ಬಸವ) ಚಂದ್ರನ ಕೆತ್ತನೆ ಕೆಳಗೆ ಶಾಸನ ಪಾಠವನ್ನು ಕೊಡಲಾಗಿದೆ. ಶಾಸನದ ಕಡೆ ಸಾಲಿನಲ್ಲಿ ಧರ್ಮಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರವರ ಸಹಿಯನ್ನು ಕೆತ್ತಲಾಗಿದೆ.

E.C.V ಮೈಸೂರು 163 (III ಮೇ 24)

ಚಾಮುಂಡಿ ಬೆಟ್ಟಕ್ಕೆ, ಪಶ್ಚಿಮದಲ್ಲಿ ಬೆಟ್ಟದ ಬುಡದಲ್ಲಿರುವ
ಗವೀಮಠದ ಒಳಬಾಗಿಲಿಗೆ ಪೂರ್ವದ ಕಡೆ ಇರುವ ಕಲ್ಲು

ಶ್ರೀಕೃಷ್ಣ

೧ ಗವೀಮಠದ ಶಿವಬಸಪ್ಪ ಸ್ವಾಮಿಗಳವರ
೨ ಸಂನಿಧಿಗೆ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾ
೩ ಲೀವಾಹನ ಶಕವರ್ಷಗಳು ೧೭೬೮ ಸಂದ ವ
೪ ರ್ತಮಾನ ಪರಾಭವ ಸಂವತ್ಸರದ ಮಾಘ

೫ ಶುದ್ಧ ೧೫ ಭಾನುವಾರದಲೂ ಮಹಿಸೂ
೬ ರಸಂಸ್ಥಾನದ ಚಾಮರಾಜವಡೆಯರವ
೭ ರ ಪುತ್ರರಾದ ಕೃಷ್ಣರಾಜವಡೆಯರವ
೮ ರು ಮಠಾ ಕಟ್ಟಿಶಿ ವಪ್ಪಿಶಿದ ಸೇವೆ ॥

ರುಜು ಶ್ರೀಕೃಷ್ಣ

The inscription states that the matha was got constructed and granted to 'shivabasavaswami of Gavi-math by krishnaraja-vodeya III on saka 1768, parabhava, Magha SU 15, Sunday, corresponding to 1846 A.D., January 31.

ಈ ಮೇಲಿನ ಶಾಸನ ಅಧ್ಯಯನದಿಂದ ಚಾಮುಂಡಿ ಬೆಟ್ಟದ ಬುಡದಲ್ಲಿ ಇರುವ ಗವಿಮಠವನ್ನು ಸ್ವಾಮಿಗಳು ವಾಸಿಸುವಂತೆ ಯೋಗ್ಯವಾಗಿ ಸಿದ್ಧಮಾಡಿ ಕೊಟ್ಟವರು ಮುಮ್ಮಡಿ ಕೃಷ್ಣರಾಜ ಒಡೆಯರವರು. ಗವಿಮಠದಲ್ಲಿ ಐದು ಪ್ರಾಚೀನ ಗವಿಗಳಿದ್ದು ವಿರಕ್ತಮೂರ್ತಿಗಳಿಗೆ ಜಪ–ತಪ–ಅನುಷ್ಠಾನಕ್ಕೆ, ಶಿವ ಪೂಜಾದಿಗಳಿಗೆ ಬಹಳ ಅನುಕೂಲವಿದ್ದರಿಂದ ಜನ ಅರಮನೆ ಪಂಚಗವೀಮಠ ಎಂದು ಕರೆದರು. ಈ ಮಠದ ಮೂಲಕರ್ತೃಗಳು ಶಿವಬಸಪ್ಪಸ್ವಾಮಿಗಳು. ಇವರು ಮೈಸೂರು ನಗರಕ್ಕೆ ಸುಮಾರು ೧೮೧೦ರ ಕಾಲಮಾನಕ್ಕೆ ಬಂದು ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ವೀರಶೈವ ಧರ್ಮದ ಅಧ್ಯಯನ ಅಧ್ಯಾಪನಗಳಿಗೆ ವ್ಯವಸ್ಥೆ ಮಾಡಿ ಹಲವು ಜನ ಶಿಷ್ಯರನ್ನು ಸಂಪಾದನೆ ಮಾಡಿ ತಮ್ಮ ಮಠದಲ್ಲಿ ಒಂದು ಗುರುಕುಲವನ್ನು ಸ್ಥಾಪನೆ ಮಾಡಿರಬೇಕು. ಈ ಎಲ್ಲಾ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು ಅರಮನೆ ಪಂಚಗವೀಮಠವನ್ನು ಗುರುಗಳು, ಅನುಭಾವಿಗಳು, ಚರಮೂರ್ತಿಗಳು, ಅಧ್ಯಯನಶೀಲ ವಿದ್ಯಾರ್ಥಿಗಳು ನೆಲೆಸುವಂತೆ ವ್ಯವಸ್ಥೆ ಮಾಡಿ ಮಠದ ನಾಲ್ಕು ಮೂಲೆಗೂ ಲಿಂಗಮುದ್ರೆಕಲ್ಲು ಸ್ಥಾಪಿಸಿ ಜೊತೆಗೆ ಶಾಸನವನ್ನು ಸ್ಥಾಪಿಸಿಕೊಟ್ಟಿದ್ದು ೩೧/೧/೧೮೪೬ ಭಾನುವಾರ ಎಂದು ಈಗ ನಮಗೆಲ್ಲಾ ಶಾಸನ ಅಧ್ಯಯನದಿಂದ ತಿಳಿದಿರುವಂತಹದು. ಶಾಸನದಲ್ಲಿ ಸ್ಪಷ್ಟವಾಗಿ "ಮಠಾ ಕಟ್ಟಿಶಿ ವಪ್ಪಿಶಿದ ಸೇವೆ" ಎಂದು ಹೇಳಿರುವುದರಿಂದ ಮೈಸೂರು ಅರಮನೆ ಪಂಚಗವೀಮಠದಲ್ಲಿ ಮುಮ್ಮಡಿಯವರು ಶಾಸನ ಹಾಕಿಸಿಕೊಟ್ಟದ್ದು ೧೮೪೬ ರಲ್ಲಿ. ಆ ಕಾಲಕ್ಕೆ "ಚಾಮುಂಡಾದ್ರಿ ಪಂಚಗವಿಮಠ" ಮಠವಾಗಿ ತನ್ನ ಕಾರ್ಯಕಲಾಪಗಳನ್ನು ನಡೆಸುತ್ತಾ ಇತ್ತು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇರುವ

'ಬಸವಣ್ಣನವರ ವಚನ' ಹಸ್ತಪ್ರತಿ ಸಂಖ್ಯೆ ಕೆ. ೧೯೪೪ ಉದ್ದ ೧೭.೩'xಅಗಲ ೨.೧" ೧–೬೬ ಗರಿ ಉಳ್ಳ ಈ ಹಸ್ತಪ್ರತಿ ಆದಿಯಲ್ಲಿ ಶ್ರೀಗುರು ಬಸವಲಿಂಗಾಯ ನಮಃ । ಶ್ರೀ ವಿರಕ್ತದೇಶಿಕೇಂದ್ರಾಯ ನಮಃ । ಬಸವರಾಜದೇವರ ಷಡುಸ್ಥಲದ ವಚನ । ಪಿಂಡಸ್ಥಳ । ಉದಕದೊಳಗೆ ಬೈಚಿಟ್ಟ । ಬಯಕೆಯಕಿಚ್ಚಿನಂತೆ ಯಿದ್ದಿತ್ತು....

ಅಂತ್ಯ:... ಅಂತು ಸ್ಥಲ ೬೭ಕ್ಕಂ ಮಿಶ್ರ ೩೬ ಕ್ಕೆ ಸೇರಿದ ವಚನ ವೊಟ್ಟು ೯೬೦ ಕ್ಕಂ ಸಮಾಪ್ತ ॥ ಶ್ರೀಮಹೀಸೂರ ಚಾಮುಂಡಾದ್ರಿ ಪಂಚಗವಿಮಠಕ್ಕೆ ಕಾರಣ ಕರ್ತರಾದ ಸುಲೇಗಾವಿ ಚರಮೂರ್ತಿಗಳು ಶಿವಬಸವದೇಶಿಕೇಂದ್ರರಿಗೋಸ್ಕರ ತಯಾರಾದ ಬಸವೇಶ್ವರನ ಷಡುಸ್ಥಲದ ವಚನ ಶ್ರೀ ಶಾಲಿವಾಹನಶಕ ೧೭೬೩ರಲ್ಲಿ ಬರೆದಂತಾ ವಚನ. ಯಿದೆ ಶಾಲಿವಾಹನಶಕ ೧ನೆ ಈಶ್ವರ ಸಂವತ್ಸರದಲ್ಲಿ ಮೈಯ್ಸೂರ ಸೌಸ್ತಾನದ ಶ್ರೀಚಾಮರಾಜ ವಡೆಯರವರ ಮಹಲಿನಲ್ಲಿ ಯಿರುವ ಗು॥ ಬಸವಲಿಂಗಪ್ಪನವರ ಭಾವಮೈದ ನಂಜಪ್ಪನು ಬರದು ಯಿರುವ ಬಸವೇಶ್ವರ ವಚನ ಷಡುಸ್ಥಲದ ವಚನ ಮ.ರಾ ಶಾಂತಮಲ್ಲಪ್ಪನವರಿಗೆ ಗುರಿಕಾರ್‍ರು ಅವಸರದ ಹೋಬಳಿ ಪುಟ್ಟಣ್ಣನವರು ಯಿೊ ಸ್ವಾಮಿಗಳಿಗೆ ವಪಿಸಿದಂತ್ತಾ ವಚನ ಸಮಸ್ತ ಮಂಗಳಮಹಾ ಶ್ರೀ ಶ್ರೀ ೩

ಈ ಮೇಲಿನ ಪುಷ್ಪಿಕೆಯಿಂದ ಮಠದ ಹೆಸರು "ಚಾಮುಂಡಾದ್ರಿ ಪಂಚಗವಿ ಮಠ" ಎಂದು ಕರೆಯುತ್ತಾ ಇದ್ದರು. ಉತ್ತರ ಕರ್ನಾಟಕದ ಸುಲೇಗಾವಿ ಪ್ರದೇಶದಿಂದ ಮೈಸೂರು ನಗರಕ್ಕೆ ಶಿವಬಸವದೇಶಿಕೇಂದ್ರರು ಬಂದದ್ದು ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಶಿವಬಸವಸ್ವಾಮಿಗಳು ಅಂದಿನ ದಿನಮಾನದ ಸುಲೇಗಾವಿ ಮಠದ ಗುರುಕುಲದಿಂದ ಬಂದವರು ಇರಬೇಕು. ಕ್ರಿ.ಶ. ೧೮೪೧ ರಲ್ಲಿ ಮಠದ ಹಸ್ತಪ್ರತಿ ಭಂಡಾರಕ್ಕೆ ಬಸವಣ್ಣನವರ ಷಡುಸ್ಥಲದ ವಚನದ ಲಿಪಿಗಾರ ಗುರಿಕಾರ್ ॥ ಬಸವಲಿಂಗಪ್ಪನವರ ಭಾವಮೈದ ನಂಜಪ್ಪ ಅವರು ಬರೆದ ಸ್ಥಳ ಶ್ರೀಚಾಮರಾಜ ಒಡೆಯರ ಮಹಲ್ ಶಾಂತಮಲ್ಲಪ್ಪನವರು, ಗುರಿಕಾರ್‍ರು ಅವಸರದ ಹೋಬಳಿ ಪುಟ್ಟಣ್ಣನವರು ಸ್ವಾಮಿಗಳಿಗೆ ಒಪ್ಪಿಸಿದ್ದು ಎಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ಮೌನಪ್ಪ ಪಂಡಿತರ ವೀರಶೈವಾಚಾರ ಕೌಸ್ತುಭದ ಓಲೆ ಪ್ರತಿ ಇದ್ದು; ಅದರಲ್ಲಿ ಈ ಪುಷ್ಪಿಕೆ ಇದೆ "ಪರಾಭವ ಸಂವತ್ಸರದ ಕಾರ್ತಿಕ ಬಹುಳ ೧೦ ಭೃಗುವಾಸರ ಅನುರಾಧ ನಕ್ಷತ್ರದಲ್ಲಿ ಮಲ್ಲಪ್ಪದೇವರು ಶಿವಬಸವದೇಶಿಕೇಂದ್ರರಿಗೆ ಮೌನಪ್ಪ ಪಂಡಿತನ 'ವೀರಶೈವಾಚಾರ ಕೌಸ್ತುಭ' ಗ್ರಂಥವನ್ನು ಬರೆದು ಕೊಟ್ಟಿದ್ದಾರೆ.[೧]

ಅಖಿಲ ಭಾರತ ಮಟ್ಟದಲ್ಲಿ 'ವೀರಶೈವಾಚಾರ ಕೌಸ್ತುಭದಂತಹ' ಪುಸ್ತಕ ನನ್ನ ಕಣ್ಣಿಗೆ ಬಿದ್ದಿಲ್ಲ. ಬಹಳ ಮಹತ್ತ್ವವಾದ ಆಚಾರಕ್ಕೆ ಸಂಬಂಧಪಟ್ಟ ಪುಸ್ತಕ, ಸಂಪೂರ್ಣವಾಗಿ ಇದುವರೆಗೂ ಮುದ್ರಣವಾಗಿಲ್ಲ. ಆ ಬಗ್ಗೆ ವಿದ್ವತ್‌ವಲಯ ಸರಿಯಾದ ಪ್ರಯತ್ನ ಮಾಡಲಿಲ್ಲ. ಅರಮನೆ ಪಂಚಗವೀಮಠದ ಹಸ್ತಪ್ರತಿ ಭಂಡಾರಕ್ಕೆ ಪರಾಭವ ಸಂವತ್ಸರದ ಕಾರ್ತೀಕ ಬಹುಳ ೧೦ ಮಿ ಈ ಹಸ್ತಪ್ರತಿ ಲಿಖಿತವಾಗಿದ್ದು ಕ್ರಿ.ಶ. ೧೮೪೬ ರಲ್ಲಿ. ಈ ಹಸ್ತಪ್ರತಿಯನ್ನು ನೇರವಾಗಿ ಪರಿಶೀಲಿಸಿದರೆ ಇನ್ನೂ ಹೆಚ್ಚಿನ ಮಾಹಿತಿ ಲಭ್ಯವಾಗಬಹುದು.

"ವೀರಶೈವ ವೀರಸಿಂಹಾಸನ ಬಾಳೇಹಳ್ಳಿ" – ಗೋಡೇಕೆರೆ ಪುಸ್ತಕದ ಸಂಪಾದಕರು ಕೆ.ಆರ್. ಬಸವರಾಜು ಈ ಪುಸ್ತಕದಲ್ಲಿ ಅರಮನೆ ಪಂಚಗವಿ ಮಠಕ್ಕೆ ಸಂಬಂಧಪಟ್ಟ ಎರಡು ಪತ್ರಗಳು ಪ್ರಕಟವಾಗಿವೆ.[೪]

ಸಂಪಾದಕರು ಪತ್ರ ಬಹಳ ದೊಡ್ಡದು ಇದ್ದುದರಿಂದ ಪತ್ರದ ಸಾರಾಂಶವನ್ನು ನೀಡಿದ್ದಾರೆ.

**ಪ್ಲವಂಗ ಸಂವತ್ಸರದ ಪತ್ರ**

ಶ್ರೀ ಸುಲೇಗಾವಿ ಚರಮೂರ್ತಿಗಳವರು ಪ್ಲವಂಗ ಸಂವತ್ಸರದ
ಮಾರ್ಗಶಿರ ಬಹುಳ ೨ ದಿನದಂದು ಬಿನ್ನಹಪತ್ರ ಬರೆದದ್ದು

> ಮಾರ್ಗಶಿರ ಬಹುಳ ೧೪ರವರಗೆ ಮುನಿಷಿ ಮುರಿಗಪ್ಪನ ತಮ್ಮ ತೋಟದಪ್ಪ ಗೌಡ ಸಂಗಪ್ಪನ ಮಾರೀಪತ್ತು ಬಂದುಮುಟ್ಟಿ ಆ ವಿವರಗಳನ್ನು ಸನ್ನಿದಿಗೆ ತಂದ ವಿಚಾರ ಮತ್ತು ಚಿದ್ಘನ ಶಿವಾಚಾರ್ಯರೆಂಬ ಚರಮೂರ್ತಿಗಳನ್ನು ಮಾಡಿದ ವಿಚಾರ ಇದಕ್ಕೆ ಮೈಸೂರು ಅರಮನೆಯವರ ಸಂಬಂಧ । ಮೈಸೂರು ಶ್ರೀಮನ್ ಮಹಾರಾಜರವರು ಶ್ರೀಗಳಿಗೆ ಕಾಣಿಕೆ ಕಿಲ್ಲತ್ತು ಕಳುಹಿಸಿದ ವಿಚಾರ, ಸನ್ನಿಧಾನದವರು ಅಂಗೀಕರಿಸಿದ್ದು ಮಹಾರಾಜರಿಗೆ ಪ್ರಸಾದಾಶೀರ್ವಾದ ಕಳುಹಿಸಿದ್ದು ಮತ್ತು ಸಂಸ್ಥಾನಕ್ಕೆ ಸಂಬಂಧಿಸಿದಂತೆ ವಿನಾಯತಿ ಮತ್ತು ಗೌರವಗಳಿಗೆ ಸಂಬಂಧಿಸಿದ ರಹದಾರಿ ಅಪ್ಪಣಿ ಇತ್ಯಾದಿಗಳನ್ನು ಪಡೆಯಲು ಕಾರ್ಯ ನಿರತರಾಗಬೇಕಾದ ವಿಚಾರ ಮೇಲ್ಕಂಡ ಶ್ರೀಸುಲೇಗಾವಿ ಚರಮೂರ್ತಿಗಳವರಿಗೆ ತಿಳಿಸಿರುವ ವಿವರಗಳಿವೆ.

ಶ್ರೀ ಸೂಲೇಗಾವಿ ಚರಮೂರ್ತಿಗಳು ಪ್ಲವಂಗ ಸಂವತ್ಸರದ ಮಾರ್ಗಶಿರ ಬಹುಳ ೨ನೇ ದಿನದಂದು ಚಿತ್ರದುರ್ಗ ಜಗದ್ಗುರುಗಳಿಗೆ ಬರೆದ ಬಿನ್ನಹ ಪತ್ರ.

ಮೈಸೂರು ಅರಮನೆ ಪಂಚಗವಿ ಮಠದ ಶಿವಬಸವಸ್ವಾಮಿಗಳು ತಮ್ಮ ಉತ್ತರಾಧಿಕಾರಿಯಾಗಿ ಚಿದ್ಘನ ಶಿವಾಚಾರ್ಯರೆಂಬ ಚರಮೂರ್ತಿಗಳನ್ನು

ಮಾಡಿದ್ದು ಪತ್ರದಿಂದ ತಿಳಿದು ಬರುತ್ತದೆ. ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್‌ರವರು ಚಿತ್ರದುರ್ಗದ ಶ್ರೀಗಳಿಗೆ ಕಾಣಿಕೆ, ಕಿಲ್ಲತ್ತು ಕಳುಹಿಸಿದ ವಿಚಾರ, ಸನ್ನಿಧಾನದವರು ಅಂಗೀಕರಿಸಿದ್ದು ಮಹಾರಾಜರಿಗೆ ಚಿತ್ರದುರ್ಗ ಮಠಕ್ಕೆ ಪ್ರಸಾದಾಶೀರ್ವಾದ ಕಳುಹಿಸಿದ್ದು ಚಿತ್ರದುರ್ಗ ಬೃಹನ್‌ಮಠಕ್ಕೆ ಕೆಲವು ವಿನಾಯಿತಿ ಮತ್ತು ಗೌರವಗಳಿಗೆ ಸಂಬಂಧಿಸಿದ ರಹದಾರಿ ಇತ್ಯಾದಿಗಳನ್ನು ಪಡೆಯಲು ಕಾರ್ಯ ನಿರತರಾಗಬೇಕೆಂದು ಶ್ರೀ ಸುಲೇಗಾವಿ ಚರಮೂರ್ತಿ ಗಳವರಿಗೆ ತಿಳಿಸಿರುವ ವಿವರಗಳು ಈ ಪತ್ರದಲ್ಲಿದೆ. ಮೂಲ ಪತ್ರಗಳು ಯಥಾವತ್ತಾಗಿ ಅಚ್ಚಾಗಿದ್ದರೆ ಇನ್ನಷ್ಟು ಮಾಹಿತಿ ಲಭ್ಯವಾಗುತ್ತಿತ್ತು.

### ಕೀಲಕ ಸಂವತ್ಸರದ ಪತ್ರ

ಚಿತ್ರದುರ್ಗ ಬೃಹನ್‌ಮಠದಿಂದ ಚಾಮುಂಡಾದ್ರಿ ಪಂಚಗವಿಮಠಕ್ಕೆ

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಸ್ವಾಮಿಗಳು ಅಜ್ಞಾಪ್ರಕಾರೇಣ

ಶ್ರೀಮತ್ ಪರಮ ಪಾವನ ಚರಿತ ಚಾರುತರ ಸಮ್ಮೂಹನಾಂಗ ಮದನಮರ್ದನ ಮಾಯಾಕೋಲಾಹಲ
ನಿತ್ಯ ನಿರಂಜನ ನಿರಾಕಾರ ನಿಗಮಗೋಚರ ಸಚ್ಚಿದಾನಂತ ನಿತ್ಯಪರಿಪೂರ್ಣ ಹೃದಯೇ ಜಗದ್ವಿಸ್ತಾರ ಮೂಲಸ್ತಂಭಾಯಮಾನ
ಪರಶಿವಸ್ವರೂಪ ಶ್ರೀಮಲ್ಲಮಾಪ್ರಭು ಸ್ವಾಮ್ಯಾನ್ವಯೇ ಸಂಜನಿತಾನಾಂ
ಶ್ರೀಮದ್ವೀರಶೈವ ಸಿದ್ಧಾಂತ ಸಕಲ ಸಿಂಹಾಸನಧಿಸ ಪರಮ ಷಟ್‌ಸ್ಥಲ ಸ್ಥಾಪನಾಚಾರ್ಯ ವರ್ಯಾಣಾಂ
ಶ್ರೀ ಮುದ್ರಾಮರಾಮದೀಶ ದಾಕ್ಷಾರಾಮಕ್ಷೇತ್ರ ರಾಮನಾಥಲಿಂಗೋದ್ಭವ ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠಾಂತರಾಳ
ಪರಿಶೋಭಿತ ಸತ್ಪ್ರಭೂಮಂಡಿತೊರ್ಧ್ವ ಹೃದಯಾತ್ಮಕ ದ್ವಾರಾವತೀ ಸೂನ್ಯ ಸಿಂಹಾಸನಾಧೀಶ್ವರಣಾಂ

ಶ್ರೀಮತ್ ಮಂಜುಳ ಹುತ್ಕುಂಜ ಕಿಂಜಲ್ಕ ಪುಂಜರಂಜಿತ ರಾಜಚೂಡಾಮಣಿ ರಾಜೇಷ್ಠಲಿಂಗಪೂಜಾಲೋಲ ದೇವದೇಶಿಕಶಿಖಾಮಣಿಗಳಾದಂತಾ ಮಹಾಸನ್ನಿಧಿ ಆಜ್ಞಾರಾಧಕರಾದ ಮೈಷನೂರು ಮಹಾಸಂಸ್ಥಾನದ ಚಾಮುಂಡಾದ್ರೀ ಪಂಚಗವಿಮಠದ ಸುಲೇಗಾವಿ ಚರಮೂರ್ತಿಗಳಾದ ಶಿವವೃಷಭ ದೇಶಿಕರಿಗೆ ಮಹಾ॥ ಸನ್ನಿಧಿಯಲ್ಲಿರುವ ಖಾಸಾದ ಚರಮೂರ್ತಿಗಳಾದ ಸಂಣಬರಹಾದ ಅನ್ನದಾನಪ್ಪನವರು... ಕಂಥಾ ಬಸವಲಿಂಗಪ್ಪನವರೂ ಸಹ ಮಾಡುವ ಬಿನ್ನಾಹಾ ಅದಾಗಿ ನೃಪಶಾಲಿವಾಹನ ಶಖ ವರುಷಂಗಳು ೧೭೭೦ನೆಯ ಕೀಲಿಕ ಸಂವತ್ಸರದ ಶ್ರಾವಣ ಬಹಿವರಿಗೆ ಶ್ರೀಮತ್ ಚಿನ್ಮೂಲಾದ್ರಿ ಬ್ರುಹನ್ಮಠೇ ಭಕ್ತರ ಭಕ್ತಿ ಸುಕ್ಷೇತ್ರ ಮಧ್ಯೆ

ಚರತಿಂಥಿಣಿ ಲಿಂಗಪೂಜಾ ಜಂಗಮ ದಾಸೋಹದೊಡನೆ ಆನಂದಭರಿತರಾಗಿ ಇದೇನೆ
ನಿಂಮ್ಮ ಲಿಂಗಾನಂದ ವೈಭವಂಗಳಿಗೆ ವೇಳ ವೇಳಾಯಾದಿ ಬಿನ್ನಹಪತ್ರ
ಮಖಾಂತ್ರ ಮಹಾ ॥ ಸನ್ನಿಧಿಗೆ ಶ್ರುತಬಡಿಸುವಲ್ಲಿ ಕೇವಲ
ಗುರುಪುತ್ರರೇ ಇದ್ದೀರಿ ॥ ಸಾಂಪ್ರತಾ

ಚಿತ್ರದುರ್ಗ ಬೃಹನ್‌ಮಠದ ಮಹಾಸನ್ನಿಧಿ ಆಜ್ಞಾರಾಧಕರಾದ ಮೈಸೂರು ಸಂಸ್ಥಾನದ ಚಾಮುಂಡಾದ್ರೀ ಪಂಚಗವಿಮಠದ ಸುಲೇಗಾವಿ ಚರಮೂರ್ತಿಗಳಾದ ಶಿವವೃಷಭದೇಶಿಕರಿಗೆ = ಶಿವಬಸವಸ್ವಾಮಿಗಳಿಗೆ ಮಹಾಸನ್ನಿಧಿಯ ಖಾಸಾ ಚರಮೂರ್ತಿಗಳಾದ
ಸಣ್ಣಬರಹದ ಅನ್ನದಾನಪ್ಪನವರು ಕಂಥಾ ಬಸವಲಿಂಗಪ್ಪನವರು ಮಾಡುವ ಬಿನ್ನಹ ಶಾಲೀವಾಹನ ಶಕ ೧೭೭೦ ನೆಯ ಕೀಲಕ ಸಂವತ್ಸರದ ಶ್ರಾವಣ ಬಹುಳ ೫ರವರಿಗೆ ಶ್ರೀ ಚಿನ್ಮೂಲಾದ್ರಿ ಬೃಹನ್‌ಮಠದಲ್ಲಿ ಭಕ್ತರ ಭಕ್ತಿ ಸುಕ್ಷೇತ್ರ ಮಧ್ಯ ಚರತಿಂತಿಣಿ ಲಿಂಗಪೂಜಾ ಜಂಗಮ ದಾಸೋಹದೊಡನೆ ಆನಂದಭರಿತರಾಗಿ ಇದ್ದೇವೆ ನಿಮ್ಮ ಲಿಂಗಾನಂದ ವೈಭವಗಳಿಗೆ ಆಗಾಗ ಬಿನ್ನಹ ಪತ್ರ ಮುಖಾಂತರ ಮಹಾ ಸನ್ನಿಧಿಗೆ ಶ್ರುತಪಡಿಸುತ್ತಾ ಇರುವ ಗುರುಪುತ್ರರೇ ಇದ್ದೀರಿ ಸಾಂಪ್ರತಾ. ಎಂದು ಪತ್ರ ಅಲ್ಲಿಗೆ ನಿಂತಿದೆ.

ಈ ಪತ್ರವನ್ನು ಸಂಪಾದಿಸಿದ ಸಂಪಾದಕರಿಗೆ ಲಭ್ಯವಾದ ಪತ್ರ ಇಷ್ಟೇ ಇರಬೇಕು. ಮುಂದಿನ ಭಾಗ ನಷ್ಟವಾಗಿ ಹೋಗಿರಬೇಕು ಅಥವಾ ಓದಲು ಸಾಧ್ಯವಿಲ್ಲದಷ್ಟು ಮೋಡಿ ಇರಬೇಕು ಒಟ್ಟಿನಲ್ಲಿ ಪತ್ರದ ಸಂಪೂರ್ಣ ಪಾಠ ಲಭ್ಯವಿಲ್ಲ.

ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು (ಕ್ರಿ.ಶ. ೧೮೨೩-೧೮೫೭) ತಾವು ರಚಿಸಿದ ಸ್ವರವಚನಗಳಲ್ಲಿ ಶಿವಬಸವಸ್ವಾಮಿಗಳನ್ನು ಸ್ಮರಿಸಿದ್ದಾರೆ. ಅಲ್ಲದೆ ಅವರು ಲಿಂಗೈಕ್ಯರಾದುದರಿಂದ ದೊರೆಗೆ ಚಿಂತೆಯಾಗಿದೆ ಎಂಬ ಅಂಶವನ್ನು ಇನ್ನೊಂದು ಸ್ವರವಚನದಲ್ಲಿ ದಾಖಲಿಸಿದ್ದಾರೆ.[೫]

ನೀನೆಲ್ಲೆ ನಿನನ ದೇಶಲ್ಲಿ ಕೇಳಲೆ ರಾಜ (ವಾರ್ಧಿಕ ಷಟ್ಪದಿ)

ನೀನೆಲ್ಲೆ ನಿನ್ನ ದೇಶಲ್ಲಿ ಕೇಳಲೆ ರಾಜ
ನಾನೆಲ್ಲಿ ನಾನಿರುವ ಸುಡಗಾಡ ತಾವೆಲ್ಲಿ ।
ಏನಾಶೆಪಾಶದಲ್ಲಿ ಬಿಗಿದೆನ್ನ ಕೆಟ್ಟಿದೆಯೊ ಕಳ್ಳರನು ಕಟ್ಟು ರೂಢಿ ॥ ಪಲ್ಲವಿ ॥

ಧರೆಯೊಳಿಹ ಸಕಲ ನರಪತಿಗಳೊಳಗೆಲ್ಲ ನೀ ।
ಶರಣರಡಿಧೂಳಿಯೇ ದೊರೆಯಾದ ಕಾರಣಂ ।
ಹರಜ್ಞಾನರತ್ನ ನಿನಗಿರುತಿಹುದು ಎಲೆ ರಾಜ ಸರ್ವರಿಗೆ ದೊರಕುದುಂಟೇ ॥

ಹರಕುಮಾರಂ ಗುರುಕೃಪಾಪಾತ್ರಾನಾದೆನ್ನ
ವರ ಹೃದಯಕಮಲವೆಂಬಾಂದೊಳದೊಳಗಿರುವ ।
ಪರಮ ಗುರು ಶಿವಬಸವಮಾಖ್ಯ ಮುಖ್ಯಾಗಿರುವ ಸರ್ವ ಗಣಸ್ತೋಮವೆಲ್ಲ ॥ ೨ ॥

ದೊರೆಭಕ್ತಿಯೆಂಬ ಪುಷ್ಪದ ಗಂಧವೆನಗಿತ್ತೆ ।
ಗುರಿಕಾರಮಾದಾಖ್ಯ ಎನ್ನ ಹೃದಯಾಂದೊಳ ।
ದಿರುತಿರಹ ಶಿವಬಸವ ಗುರುಕರುಣ ಗಂಧವನು ದರೆಗೊಯ್ದು ಮುಟ್ಟಿಸುವುದು ॥

ಪರಿಮಳವನಲ್ಲಿದಿಲ್ಲಿಗೆ ತಂದು ಕೊಟ್ಟೆ ನೀ ।
ತಿರುಗಿಲ್ಲಿ ಪರಿಮಳದ ಭೋರೆಗೊಯ್ದು ಮುಟ್ಟಿಸಿ ।
ಎರಡಾತ್ಮ ಘ್ರಾಣವನು ತೃಪ್ತಿ ಪಡಿಸಿದರಾಯ್ತು ಕರಕೊಂಡು ಹೋಗುದೇನು ॥ ೬ ॥

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೂ ಶಿವಬಸವ ಸ್ವಾಮಿಗಳಿಗೂ ಇದ್ದ ಸಂಬಂಧವನ್ನು ಈ ಸ್ವರವಚನ ಧ್ವನಿಸುತ್ತದೆ. ದೂರದ ಮುಳುಗುಂದದಿಂದ ಮೈಸೂರು ನಗರಕ್ಕೆ ಬಂದಾಗ ಬಾಲಲೀಲಾ ಮಹಾಂತ ಶಿವಯೋಗಿಗಳು ಬರೆದ ಸ್ವರವಚನ

**ಮೈಸೂರಿನಿಂದ ಮುನಿಪುರಕೆ ಬಂದ ಪತ್ರಿಕೆಗೆ ಉತ್ತರವು**

ವಾರ್ಧಕ ಷಟ್ಪದಿ

ಈಶಾಜ್ಞೆ ಪಿಡಿದು ಶಿವಯೋಗೀಶ ಪೇಳಿದನು ।
ಖಾಸ ಶಿವ ಸದ್ಭಕ್ತ ಗಣವರರು ।
ಆಲಿಪುಡು ಪಾಲಿಪುದು ಗುಣ ನೋಡದೆ ॥ ಪಲ್ಲವಿ ॥

ದೊರೆಗೆ ಬಡಯೋಗಿಯಾಶೀರ್ವಾದಮಾಗಾಗ್ಗೆ ।
ಬರುತಿರೇ ಸಂತೋಷವೆಂಬುಕ್ತಿ ಸುಳ್ಳಿದು ।
ದೊರೆಗೇನು ಕಡಮೆ ಆಶೀರ್ವಾದ ಗುರುವರರು ದೊಡ್ಡ ದೊಡ್ಡವರು ಅಹರೆ॥

ಪರಮಗುರು ಶಿವಬಸವ ಲಿಂಗೈಕ್ಯರಾದುದಕೆ
ದೊರೆಗೆ ಚಿಂತೆಯು ಎಂಬ ಮಾತಿದು ಸತ್ಯವು ।
ಗುರುಪುತ್ರ ಮಹಂತನೊಳಗಡಗಿದರು ಶಿವ ಶಿವ ಬಹಿರಂಗ ಕಿಲ್ಲದಾಯ್ತು ॥ ೨ ॥

ಈ ಸ್ವರವಚನವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ಲಿಂ॥ ಎಸ್. ಶಿವಣ್ಣನವರು ಬಾಲಲೀಲಾ ಮಹಾಂತ ಸ್ವಾಮಿಗಳು ಲಿಂಗೈಕ್ಯರಾದ ಕ್ರಿ.ಶ. ೧೮೫೬ ಕ್ಕಿಂತ ಮೊದಲೇ ಶಿವಬಸವಸ್ವಾಮಿಗಳು ಲಿಂಗೈಕ್ಯರಾದದ್ದು ಸ್ಪಷ್ಟ. ಶಕ ೧೭೭೦ ಅಂದರೆ ಕ್ರಿ.ಶ. ೧೮೪೮ ರ ದಾಖಲೆಯೇ ಅವರ ಬಗೆಗೆ ತಿಳಿಸುವ ಅರ್ವಾಚೀನ ಉಲ್ಲೇಖ.

ಹೀಗಾಗಿ ಶಿವಬಸವ ದೇಶಿಕೇಂದ್ರರು ಕ್ರಿ.ಶ. ೧೮೪೦–೧೮೫೬ರ ನಡುವಣ ಅವಧಿಯಲ್ಲಿ ಲಿಂಗೈಕ್ಯರಾಗಿದ್ದಾರೆ ಎಂದಿದ್ದಾರೆ.

## ಶ್ರೀ ಸರ್ಪಭೂಷಣ ಶಿವಯೋಗಿ ಕೃತ
## ಕೈವಲ್ಯಕಲ್ಪವಲ್ಲರಿ
## ಸಂಪಾದಕರು ಪ್ರೊ ಶಿ. ಶಿ. ಬಸವನಾಳ ೧೯೪೮

'ಕೈವಲ್ಯ ಕಲ್ಪವಲ್ಲ'ರಿಯ ಈ ಕೃತಿಯಲ್ಲಿ "ಬೆಂಗಳೂರು ಶ್ರೀ ಸರ್ಪಭೂಷಣ ಶಿವಯೋಗಿಗಳ ಜೀವನ ಚರಿತ್ರೆ"[೬] ಮಲ್ಲಾಬಾದಿ ವೀರಭದ್ರಪ್ಪನವರು ಬರೆದಿದ್ದು ಅದರಲ್ಲಿ 'ತಿಪ್ಪಶೆಟ್ಟರ ಮಠ–ಗುರುಗಳು–ವಿದ್ಯಾಭ್ಯಾಸ' ಈ ಅಧ್ಯಾಯದಲ್ಲಿ ಮೈಸೂರು ಅರಮನೆ ಪಂಚಗವೀಮಠದ ಉಲ್ಲೇಖ ಬಂದಿದ್ದು ಅದನ್ನು ಯಥಾವತ್ತಾಗಿ ಕೊಡಲಾಗಿದೆ.

ಬೆಂಗಳೂರಿನ ಸುಪ್ರಸಿದ್ಧ ವ್ಯಾಪಾರಿಗಳಾದ ಗುರುಲಿಂಗ ಜಂಗಮಭಕ್ತಿ ಪರಾಯಣರಾದ ಶ್ರೀತಿಪ್ಪಶೆಟ್ಟರು ದಾಸೋಹಕ್ಕೆ ವಿದ್ಯಾಭಿವೃದ್ಧಿಗೂ ಒಂದು ಮಠವನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿಕೊಂಡು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಗವಿಮಠದಲ್ಲಿ ಲಿಂಗಪೂಜಾತಪಸ್ಸಾಮ್ರಾಜ್ಯ ವೈಭವದೊಡನೆ ಗುಪ್ತ ರೀತಿಯಲ್ಲಿ ಇರುತ್ತಿದ್ದ **ಶ್ರೀ ಮಹಾಲಿಂಗ ಸ್ವಾಮಿ**ಗಳಲ್ಲಿ ತಮ್ಮ ಸಂಕಲ್ಪವನ್ನು ಅರಿಕೆ ಮಾಡಿಕೊಳ್ಳಲು ಅದಕ್ಕೆ ಅನುಮತಿ ಇತ್ತು, ವೀರಶೈವ ವಿದ್ಯಾಪರಿಣಿತರಾದ ಚರಮೂರ್ತಿ **ಶ್ರೀ ಗುರುಸಿದ್ಧಸ್ವಾಮಿ**ಗಳನ್ನು **ತಿಪ್ಪಶೆಟ್ಟ**ರೊಡನೆ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಅವರು **ಮಹಾಲಿಂಗ ಸ್ವಾಮಿ**ಗಳವರ ಸೇವೆಯಲ್ಲಿ ನಿರತರಾಗಿದ್ದು ಅವರ ಅನುಗ್ರಹಕ್ಕೆ ಪಾತ್ರರಾಗಿ ಸಮಾಜಸೇವೆಯನ್ನು ವಿದ್ಯಾಪ್ರಸಾರದ ಮೂಲಕ ಮಾಡಲು ಹೆಚ್ಚು ಅನುವಾಯಿತೆಂದು ಭಾವಿಸಿ ನೂತನ ಮಠಾಧಿಕಾರವನ್ನು ಹೊಂದಿ ಸಮಾಜೋದ್ಧಾರ ಕಾರ್ಯದಲ್ಲಿ ತೊಡಗಿದರು.

ತಿಪ್ಪಶೆಟ್ಟಿಮಠದ ಶ್ರೀಗುರುಸಿದ್ಧಸ್ವಾಮಿಗಳ ಕಾರುಣ್ಯ ಶಿಷ್ಯನೆ ಸರ್ಪಭೂಷಣ ಶಿವಯೋಗಿಗಳು ಸೂರ್ಯ–ಚಂದ್ರರು ಇರುವವರೆಗೂ ಶಾಶ್ವತವಾದ ಅನುಭಾವ ಸಾಹಿತ್ಯವನ್ನು ನೀಡಿದ ಕೀರ್ತಿ ಸರ್ಪಭೂಷಣ ಶಿವಯೋಗಿಗಳದು. ಅವರು ರಚಿಸಿದ "ಕೈವಲ್ಯಕಲ್ಪವಲ್ಲರಿ" ನಮ್ಮ ಮುಮುಕ್ಷುಗಳಿಗೆ ದಾರಿದೀಪ ಅಂದರೆ ತಪ್ಪಾಗಲಾರದು.

ಈ ಮೇಲಿನ ದಾಖಲೆಗಳನ್ನು ಅಧ್ಯಯನ ಮಾಡಿದ್ದರಿಂದ ನಮಗೆ ತಿಳಿದುಬಂದಂತೆ ಅರಮನೆ ಪಂಚಗವೀಮಠಕ್ಕೆ ಮೊದಲು ಶಕ್ತಿ ತುಂಬಿ ಅದಕ್ಕೆ ಜೀವಕಳೆ ಕೊಟ್ಟವರು ಸೂಲೇಗಾವಿ ಚರಮೂರ್ತಿ ಶಿವಬಸವಸ್ವಾಮಿಗಳು ಅಥವಾ ಶಿವಬಸಪ್ಪಸ್ವಾಮಿಗಳು ಅಥವಾ ಶಿವವೃಷಭಸ್ವಾಮಿಗಳು. ಅವರೆ

ಚಿತ್ರದುರ್ಗ ಬೃಹನ್‌ಮಠಕ್ಕೆ ಬರೆದ ಪತ್ರದಲ್ಲಿ ಚಿದ್ಘನ ಶಿವಾಚಾರ್ಯ ಸ್ವಾಮಿಗಳನ್ನು ಅರಮನೆ ಪಂಚಗವೀಮಠಕ್ಕೆ ಚರಮೂರ್ತಿಗಳನ್ನಾಗಿ ಮಾಡಿದ್ದು ತದನಂತರ ಶ್ರೀ ಮಹಾಲಿಂಗಸ್ವಾಮಿಗಳು ಈ ಪರಂಪರೆಯನ್ನು ಮುಂದುವರೆಸಿದವರು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ವಿಶ್ವವಿಖ್ಯಾತಿಯಾದ ಲಿಂ॥ ಅರಮನೆ ಪಂಚಗವಿಮಠದ ಶ್ರೀಮನ್ ನಿರಂಜನ ಪ್ರಣವಸ್ವರೂಪಿ ಶ್ರೀ ಶ್ರೀ ಗೌರೀಶಂಕರಸ್ವಾಮಿಗಳು ಜನಿಸಿದ್ದು ೧೮೯೫ ರಲ್ಲಿ ಅವರ ಹನ್ನೆರಡನೇ ವಯಸ್ಸಿಗೆ ಪಟ್ಟವಾಯಿತು. ಸುಮಾರು ೧೯೦೭ ರಲ್ಲಿ. ಅವರಿಗೆ ಪಟ್ಟವಾಗಿದೆ. ೧೯೧೪ರಲ್ಲಿ ಕಾಶೀ ಕ್ಷೇತ್ರಕ್ಕೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೊರಟರು. ಅವರ ಜೀವನ ಸಾಧನೆ ಬಗ್ಗೆ ಬರೆಯಲು ಇಲ್ಲಿ ಅವಕಾಶವಿಲ್ಲ. ಅವರದು ವಿರಾಟ್ ಶಕ್ತಿ. ಆಸಕ್ತಿ ಉಳ್ಳವರು ಜಗದ್ಗುರು ಡಾ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟವಾಗಿರುವ "ಅರಮನೆ ಶ್ರೀಪಂಚಗವಿ ಮಠದ ಶ್ರೀ ಗೌರಿಶಂಕರ ಸ್ವಾಮಿಗಳವರ ಸಮಗ್ರ ಸಾಹಿತ್ಯ" ಪುಸ್ತಕವನ್ನು ಓದಬೇಕಾಗಿ ವಿನಂತಿ.[೭]

ಅರಮನೆ ಶ್ರೀಪಂಚಗವಿ ಮಠದ ಪರಂಪರೆ

ಶ್ರೀ ಶಿವಬಸವಸ್ವಾಮಿಗಳು ಶ್ರೀಚಿದ್ಘನ ಶಿವಾಚಾರ್ಯರು – ಶ್ರೀ ಮಹಾಲಿಂಗಸ್ವಾಮಿಗಳು ಶ್ರೀ ಗೌರಿಶಂಕರಸ್ವಾಮಿಗಳು ಇವರಿಗೆ ಪಟ್ಟ ೧೯೦೭ ಇವರು ಲಿಂಗೈಕ್ಯರಾದದ್ದು ೧೨.೮.೧೯೫೨.

ವೀರಶೈವ ತತ್ತ್ವ ಸಿದ್ಧಾಂತ, ವಚನ ಸಾಹಿತ್ಯದ ಅಧ್ಯಯನ ಅಧ್ಯಾಪನಕ್ಕೆ ಈ ಮಠಗಳು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿವೆ. ಸಲ್ಲಿಸುತ್ತಾ ಇವೆ. ಇನ್ನಷ್ಟು ಅಧ್ಯಯನದಿಂದ ಹೊಸ ಹೊಸ ವಿಚಾರಗಳು ಸ್ಪಷ್ಟವಾಗುತ್ತವೆ.

ಬಸವಾನಂದಲಹರಿಯಲ್ಲಿ ಕೊನೆಯದಾದ ೧೮೯ನೇ ವೃತ್ತದಲ್ಲಿ ಗವಿಮಠದ ಗುರುಪರಂಪರೆಯ ಸ್ಮರಣೆ

ಮನಸಿ ಚ ಲಹರೀಯಂ ಶ್ರೀ ಮಹಾಲಿಂಗದೇವಂ
ಶಿವಬಸವಯತೀಶಂ ಕುರ್ವತಾ ಶಾಂತವೀರಮ್ ।
ವಿಮಲಿನ ಗುರುಸಿದ್ಧಂ ತಂ ಶಿವೈಸ್ತಂ ಮಹಾಂತಂ
ಸಪದಿ ಸರಸಗೌರೀಶಂಕರೇಣ ಪ್ರಣೀತಾ ॥

ಈ ಲಹರಿಯು ಶ್ರೀ ಮಹಾಲಿಂಗದೇವರು, ಶ್ರೀ ಶಿವಬಸವ ಯತೀಶ್ವರರು, ಶ್ರೀ ಶಾಂತವೀರಸ್ವಾಮಿಗಳು, ಶ್ರೀ ಗುರುಸಿದ್ಧಸ್ವಾಮಿಗಳು, ಶ್ರೀ ಮಹಂತಸ್ವಾಮಿಗಳು ಇವರನ್ನು ಮನಸ್ಸಿನಲ್ಲಿ ನೆನೆದು ಶ್ರೀ ಗೌರೀಶಂಕರಸ್ವಾಮಿಗಳಿಂದ ರಚಿತವಾಗಿದೆ ಎಂದು ಧ್ವನಿಸುತ್ತದೆ.

ಅರಮನೆ ಪಂಚಗವೀಮಠದ ಪರಂಪರೆಯ ಬಗ್ಗೆ ಮಾಹಿತಿ ಇದ್ದ ಗೌರೀಶಂಕರಸ್ವಾಮಿಗಳು ಮಠದ ಕರ್ತೃ ಮಹಾಲಿಂಗದೇವ ಎಂದು ತಿಳಿಸಿದ್ದಾರೆ. ಅವರ ಬಗ್ಗೆ ನಮಗೆ ಮಾಹಿತಿ ಇಲ್ಲ. ಎರಡನೆಯ ಸ್ವಾಮಿಗಳು ಶಿವಬಸವಯತೀಶ ಸ್ವಾಮಿಗಳು ಮಹಾಲಿಂಗಸ್ವಾಮಿಗಳು ಬೇರೆ ಕಡೆ ನೆಲಸಿದ್ದು ಅವರ ಶಿಷ್ಯತ್ವ ವಹಿಸಿದ ಶಿವಬಸವಸ್ವಾಮಿಗಳ ಕಾಲದಲ್ಲಿ ಅರಮನೆ ಪಂಚಗವೀಮಠದಲ್ಲಿ ಮಠ ಪ್ರಾರಂಭವಾಯಿತೆ? ಗೊತ್ತಿಲ್ಲ ಮೂರನೇಯವರು ಶಾಂತವೀರ ಸ್ವಾಮಿಗಳು, ಅವರ ನಂತರ ಗುರುಸಿದ್ಧಸ್ವಾಮಿಗಳು, ಅವರ ನಂತರ ಮಹಾಂತ ಸ್ವಾಮಿಗಳು ಎಂದು ಅರಮನೆ ಪಂಚಗವೀಮಠದ ಪರಂಪರೆಯನ್ನು ತಿಳಿಸಿದ್ದಾರೆ.

**ಅಡಿಟಿಪ್ಪಣಿ :**

೧) ಮೈಸೂರು ಅರಮನೆ ಪಂಚಗವಿಮಠದ ಶಿವಬಸವಸ್ವಾಮಿಗಳು : ಒಂದು ಟಿಪ್ಪಣಿ ಎಸ್. ಶಿವಣ್ಣ ಬಿಡುಮುತ್ತು (ಸಂಶೋಧನ ಲೇಖನಗಳು) ಪುಟ ೪೧೬–೪೨೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೪

೨) 'ಮೈಸೂರಿನ ಶಾಸನೋಕ್ತ ಮಹತ್ತಿನ ಮಠ' ಡಾ. ಬಿ. ನಂಜುಂಡಸ್ವಾಮಿ ಚಿತ್ಕಳೆ, ಸ್ಮರಣ ಸಂಚಿಕೆ ಅಕ್ಕಮಹಾದೇವಿ ಸಮಾಜ, ಶ್ರೀ ಜಯಚಾಮ ರಾಜೇಂದ್ರ ರಸ್ತೆ, ತುಮಕೂರು ೨೦೦೩.

೩) ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಸಂಪುಟ ೭, ಪುಟ ೧೨ ಸಂಪಾದಕ ಬಿ.ಎಸ್. ಸಣ್ಣಯ್ಯ, ಮೈಸೂರು ೧೯೮೦

೪) ವೀರಶೈವ–ವೀರಸಿಂಹಾಸನ ಬಾಳೇಹಳ್ಳಿ–ಗೋಡೇಕೆರೆ ಸಂಪಾದಕ: ಕೆ.ಆರ್. ಬಸವರಾಜು, ಎಂ.ಎ., ಪ್ರಕಾಶಕರು, ನೊಳಂಬ ವೀರಶೈವ ಸಂಘ ೨೫೬, ಚಿಕ್ಕಪೇಟೆ, ಬೆಂಗಳೂರು–೫೩

೫) ಶ್ರೀ.ನಿ.ಪ್ರ. ಬಾಲಲೀಲಾ ಮಹಾಂತ ಶಿವಯೋಗಿ ವಿರಚಿತ 'ಕೈವಲ್ಯದರ್ಪಣ' ಸಂಪಾದಕರು ಪ್ರೊ॥ ಶಿ.ಶಿ. ಬಸವನಾಳ, ಪ್ರಕಾಶಕರು ಮುರುಘಾಮಠ, ಹಾವೇರಿಪೇಟೆ, ಧಾರವಾಡ ೧೯೫೨

೬) ಶ್ರೀ ಸರ್ಪಭೂಷಣ ಶಿವಯೋಗಿ ವಿರಚಿತ 'ಕೈವಲ್ಯಕಲ್ಪವಲ್ಲರಿ' ಸಂಪಾದಕರು ಶಿ.ಶಿ. ಬಸವನಾಳ, ಎಂ.ಎ., ಪ್ರಕಾಶಕರು ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು ೧೯೪೮

೭) ಅರಮನೆ ಶ್ರೀ ಪಂಚಗವಿ ಮಠದ ಶ್ರೀ ಗೌರೀಶಂಕರ ಸ್ವಾಮಿಗಳವರ ಸಮಗ್ರ ಸಾಹಿತ್ಯ ಪ್ರಧಾನ ಸಂಪಾದಕ ಪ್ರೊ॥ ಮಲೆಯೂರು ಗುರುಸ್ವಾಮಿ, ಸಂಪಾದಕ ಡಾ. ನಂದೀಶ ಹಂಚೆ, ಪ್ರಕಾಶಕರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೨೦೧೪

□

# ಚೇಳಿಂಗೆ ಬಸುರಾಯಿತ್ತೆ ಕಡೆ.....?

ಎಚ್.ಸಿ. ರಜತ್

**ಸ**ಹಸಂಬಂಧ ಎನ್ನುವುದು ಸೃಷ್ಟಿಕ್ರಿಯೆಯ ಸಹಜ ಧಾತು. ಅದು ಭೂಮಿಯ ಮೇಲಿನ ಆಹಾರ ಸರಪಳಿಯಿಂದ ಮೊದಲುಗೊಂಡು ಇತರ ಹಲವಾರು ಕ್ರಿಯೆಗಳಲ್ಲಿ, ವಿಷಯಗಳಲ್ಲಿ ವ್ಯಾಪಿಸಿಕೊಂಡಿದೆ. ವಿಜ್ಞಾನದ ವಿಷಯಗಳಲ್ಲಂತೂ ಈ ಸಹಸಂಬಂಧವು ಸಹಜವಾಗಿಯೇ ಹೆಚ್ಚಿದೆ. ಭೌತ-ರಸಾಯನ, ಜೀವಶಾಸ್ತ್ರ-ರಸಾಯನಶಾಸ್ತ್ರ, ಭೌತಶಾಸ್ತ್ರ-ಜೀವಶಾಸ್ತ್ರ ಇವುಗಳ ನಡುವಿನ ಅಂತರ್‌ಸಂಬಂಧವನ್ನು ಶಾಲಾ ವಿದ್ಯಾರ್ಥಿಗಳೂ ಗುರುತಿಸಬಲ್ಲರು. ಅಂತೆಯೇ ಸಾಹಿತ್ಯ-ಇತಿಹಾಸ, ಭೂಗೋಳಶಾಸ್ತ್ರ-ಅರ್ಥಶಾಸ್ತ್ರ, ರಾಜ್ಯಶಾಸ್ತ್ರ-ಇತಿಹಾಸ ಮುಂತಾದ ಮಾನವಿಕ ವಿಷಯಗಳ ನಡುವಿನ ಸಹಸಂಬಂಧವೂ ಸರ್ವಗ್ರಾಹಿಯಾದುದೇ ಆಗಿದೆ. ವಿಜ್ಞಾನ ಮತ್ತು ಮಾನವಿಕ ವಿಷಯಗಳ ನಡುವೆ ಪರಸ್ಪರ ಸಂಬಂಧ ಇರುವುದಾದರೂ ಆ ಸಹಸಂಬಂಧದ ಗೆರೆ ತುಂಬಾ ತೆಳುವಾದುದು. ಭೌತಶಾಸ್ತ್ರ- ರಾಜ್ಯಶಾಸ್ತ್ರ, ರಸಾಯನಶಾಸ್ತ್ರ-ಸಮಾಜಶಾಸ್ತ್ರಗಳ ನಡುವೆ ಅಂತರ್‌ಸಂಬಂಧವೇ ಇಲ್ಲ ಎನ್ನಬಹುದು. ಇದ್ದಿರಬಹುದಾದರೂ ಅದು ಗುರುತಿಸಲಾರದಷ್ಟು ಅಗಮ್ಯವಾದುದು. ಆದರೆ ಸಾಹಿತ್ಯವು ಮಾನವಿಕ ವಿಷಯಗಳೊಡನೆ ಎಷ್ಟು ಗಟ್ಟಿಯಾದ ಅಂತರ್‌ಸಂಬಂಧ ವನ್ನು ಹೊಂದಿದೆಯೋ ಅದೇ ರೀತಿ ವಿಜ್ಞಾನದೊಂದಿಗೂ ಸಂಬಂಧವನ್ನು ಹೊಂದಿದೆ. ಕುವೆಂಪು-ತೇಜಸ್ವಿರವರ ಕಾದಂಬರಿಗಳಲ್ಲಿ, ನಾಗೇಶ ಹೆಗಡೆ ಯವರ ಕೃತಿಗಳಲ್ಲಿ ಅದನ್ನು ನಾವು ಗುರುತಿಸಬಹುದು. ಅದೇ ರೀತಿಯಾಗಿ ವಚನ ಸಾಹಿತ್ಯದಲ್ಲಿಯೂ ವೈಜ್ಞಾನಿಕ ಅಂಶಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ 'ಚೇಳಿಂಗೆ ಬಸುರಾಯಿತ್ತೆ ಕಡೆ' ಎಂಬ ವಚನವೂ ಒಂದಾಗಿದೆ.

> ಚೇಳಿಂಗೆ ಬಸುರಾಯಿತ್ತೆ ಕಡೆ
> ಬಾಳೆಗೆ ಫಲವಾಯಿತ್ತೆ ಕಡೆ ನೋಡಾ !

---

**ಎಚ್.ಸಿ. ರಜತ್,** ಸಂಶೋಧನಾ ವಿದ್ಯಾರ್ಥಿ, ಲಲಿತಕಲೆಗಳ ಕಾಲೇಜು, ಮಾನಸ ಗಂಗೋತ್ರಿ, ಮೈಸೂರು

ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದಡದೇ ಕಡೆ,
ಕೂಡಲಸಂಗಮದೇವಾ

ಇದು ಬಸವಣ್ಣನವರ ಪ್ರಸಿದ್ಧ ವಚನಗಳಲ್ಲಿ ಒಂದು. ಈ ವಚನದ ಮೊದಲ ಸಾಲು ವೈಜ್ಞಾನಿಕ ಸತ್ಯ(?)ವೊಂದನ್ನು ಹೇಳುತ್ತಿರುವಂತಿದೆ. ಅದನ್ನು ಹೇಳುವುದೇ ಬಸವಣ್ಣನವರ ಉದ್ದೇಶವಲ್ಲದಿದ್ದರೂ ತಾವು ಹೇಳಬೇಕಾಗಿರುವ ತಾತ್ವಿಕ ಸತ್ಯಕ್ಕೆ ದೃಷ್ಟಾಂತವಾಗಿ ಇದನ್ನು ಹೇಳಿದ್ದಾರೆ. ಅದನ್ನು ತಿಳಿಯುವ ಮೊದಲು ನಂತರದ ಸಾಲುಗಳ ಬಗ್ಗೆ ಚರ್ಚಿಸುವುದು ಅಗತ್ಯ 'ಬಾಳೆಗೆ ಫಲವಾಯಿತ್ತೆ ಕಡೆ' – ಇದು ನಿಸರ್ಗ ಸಹಜ ಸತ್ಯ. ಬಾಳೆಗಿಡವು ಬಿಟ್ಟ ಗೊನೆಯು ಸಾಮಾನ್ಯವಾಗಿ $2^1/_2$ ತಿಂಗಳು ಅಥವಾ 3 ತಿಂಗಳಿನೊಳಗೆ ಮಾಗಿ ಹಣ್ಣಾಗುತ್ತದೆ. ಆ ಬಾಳೆಯ ಗೊನೆಯನ್ನು ರೈತನು ಕತ್ತರಿಸಿಕೊಂಡು ಹೋದ ನಂತರ ಆ ಬಾಳೆಗಿಡದ ಆಯಸ್ಸು ಮುಗಿದಂತೆಯೆ. ಏಕೆಂದರೆ ಒಮ್ಮೆ ಅದು ಗೊನೆಯನ್ನು ಬಿಟ್ಟರೆ ಮತ್ತೊಮ್ಮೆ ಬಿಡುವುದಿಲ್ಲ. ಆದ್ದರಿಂದಲೇ ನಮ್ಮ ಜನಪದರು 'ರಾಗಿಗೆ ಒಂದೇ ತೆನೆ, ಬಾಳೆಗೆ ಒಂದೇ ಗೊನೆ' ಎಂದಿದ್ದಾರೆ. ಗೊನೆಯನ್ನು ಕತ್ತರಿಸಿದ ನಂತರವೂ ಆ ಗಿಡವು ಹೆಚ್ಚೆಂದರೆ 15–20 ದಿನಗಳವರೆಗೆ ಬದುಕಿರುತ್ತದೆ. ನಂತರ ಪ್ರಕೃತಿಸಹಜವಾಗಿ ಅದರ ಎಲೆಗಳೆಲ್ಲ ಒಣಗಿಹೋಗಿ ಬಾಳೆಯ ದಿಂಡು ಒಳಗಿನಿಂದಲೇ ಕೊಳೆತು ಹೋಗುತ್ತಾ ಮಣ್ಣಾಗುತ್ತದೆ. ಹೀಗೆ ಬಾಳೆಗೆ ಫಲವಾದರೆ ಅದೇ ಕಡೆಯಾಗುತ್ತದೆ.

'ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ' ಎಂದರೆ ಯುದ್ಧಭೂಮಿಯಲ್ಲಿ ಧೈರ್ಯದಿಂದ ಹೋರಾಡಬೇಕಾದ ಯೋಧನು ಓಸರಿಸಿದರೆ (=ಹಿಂಜರಿದರೆ) ಅವನು ಸತ್ತಂತೆಯೇ. ವೀರನಾದವನು ಶೌರ್ಯದಿಂದ ಹೋರಾಡಿ ಗೆಲ್ಲಬೇಕು. ಇಲ್ಲವೇ ಮಡಿಯಬೇಕು. ಈ ಎರಡೂ ಅವನಿಗೆ ಗೌರವಯುತವಾದವು. ಬದಲಾಗಿ ಅವನು ಹೇಡಿಯಂತೆ ಹಿಂಜರಿದರೆ ತನ್ನ ಸ್ಥಾನದ ಘನತೆಯ ಕುಂದಿನಿಂದಾಗಿ ಅವನು ಸತ್ತಂತೆಯೇ. 'ಓಸರಿಸು' ಎಂಬುದಕ್ಕೆ 'ಬಿಟ್ಟುಬಿಡು' ಎಂಬರ್ಥವೂ ಇದೆ. ರಣರಂಗದಲ್ಲಿ ಕಾದುವಾಗ ಆಕಸ್ಮಿಕವಾಗಿಯೋ, ಇನ್ನಾವುದೇ ಉದ್ದೇಶದಿಂದಲೋ ಆಯುಧವನ್ನು ತ್ಯಜಿಸಿದರೆ ವೈರಿಯು ಅವನನ್ನು ಕೊಲ್ಲುತ್ತಾನೆ. ಆದ್ದರಿಂದ ಅವನಿಗೆ ಅದೇ ಕೊನೆಯಾಗುತ್ತದೆ. ಹಾಗೆಯೇ ಬಸವಣ್ಣನವರ ಪ್ರಕಾರ ಭಕ್ತನಾದವನಿಗೆ ದಾಸೋಹವು ನಿಯತವಾದುದು. ಆ ಕಾರ್ಯವನ್ನು ಆತ

ನಿರ್ಮಲವಾದ ಮನಸ್ಸಿನಿಂದ ಮಾಡಬೇಕು. ಹಾಗೆ ಮಾಡುವಲ್ಲಿ, ತಾನು (ದಾಸೋಹ ಮಾಡುವವನು) 'ದಾಸ', ತಾನು ಮಾಡುವ ದಾಸೋಹವನ್ನು ಸ್ವೀಕರಿಸಲು ಬಂದಿರುವವರು ತನ್ನ ಮೇಲೆ ಕರುಣೆಯಿಟ್ಟು ಬಂದಿರುವವರು ಎಂಬ ವಿನೀತ ಭಾವ ಅವನಲ್ಲಿರಬೇಕು. ತಾನು ಮಾಡುವ ದಾಸೋಹಕ್ಕಿಂತ ಸ್ವೀಕರಿಸುವವರ ತೃಪ್ತಿ, ಕರುಣೆ ದೊಡ್ಡದು. ಆದ್ದರಿಂದ ಅವರು ಒಡೆಯರು; ತನ್ನ ದಾಸೋಹಕ್ಕೆ ಬಂದವರೆಲ್ಲ ಶಿವಸ್ವರೂಪಿಗಳೆಂದೇ ಅವನು ಭಾವಿಸಬೇಕು. ಬದಲಾಗಿ ಆತನಿಗೆ ತಾನು ಕೊಡುವವನು, ಅದನ್ನು ಸ್ವೀಕರಿಸು. ಬಂದವರು ಗತಿಯಿಲ್ಲದೆ ಬಂದವರೆಂಬ ಅಹಂಭಾವವಿರಬಾರದು. ಒಂದು ವೇಳೆ ದಾಸೋಹ ಮಾಡುವ ಭಕ್ತನು ಹಾಗೆ ಹೀನಮನವುಳ್ಳವನಾದಡೆ ಅಂದಿನಿಂದಲೇ ತನ್ನ ಭಕ್ತ ಪಟ್ಟವನ್ನು ಕಳೆದುಕೊಂಡು ಭವಿಯಾಗುತ್ತಾನೆ. ಅಂಗದ ಮೇಲೆ ಲಿಂಗವನ್ನು ಧರಿಸಿ ಅಡ್ಡಾದಿಡ್ಡಿ ಅಡ್ಡಾಡುವವರೆಲ್ಲ ಭಕ್ತರಾಗುವುದಿಲ್ಲವೆಂಬ ತಾತ್ವಿಕ ಸತ್ಯವನ್ನು ಮನಗಾಣಿಸಲು ಬಸವಣ್ಣನವರು ಕೊಡುವ ದೃಷ್ಟಾಂತಗಳು ಸಹಜ ಸತ್ಯಗಳಾಗಿವೆ. ಅಂತೆಯೇ ಇಲ್ಲಿ 'ಚೇಳಿಂಗೆ ಬಸುರಾಯಿತ್ತೆ ಕಡೆ' ಎಂಬುದು ವೈಜ್ಞಾನಿಕ ಸತ್ಯ(?)ವೊಂದನ್ನು ತನ್ನೊಡಲಲ್ಲಿ ಅಡಗಿಸಿಕೊಂಡಿರುವಂತಿದೆ. ಅದನ್ನು ತಿಳಿಯುವ ಮೊದಲು ಚೇಳಿನ ಬಗ್ಗೆ ಕೆಲವೊಂದು ವಿಷಯಗಳನ್ನು ತಿಳಿಯುವುದು ಅಗತ್ಯವಾಗಿದೆ.

'ಆರ್‍ಯಾಕ್ನಿಡ' ವರ್ಗದ 'ಡ್ರೋಮೋಪೋಡ' ಉಪವರ್ಗಕ್ಕೆ ಸೇರಿದ ಚೇಳು ಸ್ಕಾರ್ಪಿಯಾನಿಸ್ ಗಣ ಹಾಗೂ ಸ್ಕಾರ್ಪಿಯಾನಿಡೀ ಕುಟುಂಬಕ್ಕೆ ಸೇರಿದ ಸಂಧಿಪದಿಯಾಗಿದೆ. ಇದರಲ್ಲಿ ಸುಮಾರು 13 ಕುಟುಂಬ ವರ್ಗವಿದ್ದು, 1500ಕ್ಕೂ ಹೆಚ್ಚು ಪ್ರಭೇದಗಳಿವೆ. ಇದರಲ್ಲಿ 111 ಪ್ರಭೇದಗಳು ಅಳಿವಿನಂಚಿನಲ್ಲಿವೆ ಎಂದು ಗುರುತಿಸಲಾಗಿದೆ. ಚೇಳು ಅತ್ಯಂತ ವಿಷಕಾರಿ ಎಂದು ಎಲ್ಲರಲ್ಲಿಯೂ ಭಯವಿದೆ. ಆದರೆ 25 ಜಾತಿಯ ಚೇಳುಗಳಿಗೆ ಮಾತ್ರ ಮಾನವನನ್ನು ಕೊಲ್ಲುವಷ್ಟು ವಿಷದ ಪ್ರಮಾಣವಿದೆ. ಅರಿಜೋನಾದಲ್ಲಿ ಕಂಡುಬರುವ 'ಪಟ್ಟೆ ಚೇಳು' ಅತ್ಯಂತ ವಿಷಕಾರಿ ಎನಿಸಿಕೊಂಡಿದೆ. ಚೇಳುಗಳು ಭೂಮಿಯ ಮೇಲೆ ಭೌಗೋಳಿಕ ಚಿಹ್ನೆ ಕಾಣಿಸಿದ 'ಸಿಲುರಿಯನ್' ಕಾಲದಿಂದಲೂ ಇವೆ. ವಿಭಿನ್ನ ಭೌತಿಕ ಸ್ವರೂಪ, ಜೈವಿಕ ರಾಸಾಯನಿಕ ಮತ್ತು ನೈಸರ್ಗಿಕ ಹೊಂದಾಣಿಕೆಯಿಂದಾಗಿ ಇವು ಅನಾದಿಕಾಲದಿಂದಲೂ ಜೀವಿಸಲು ಸಾಧ್ಯವಾಗಿದೆ. ಸು. 430 ದಶಲಕ್ಷ ವರ್ಷಗಳ ಹಿಂದಿನ ಚೇಳಿನ ಪಳೆಯುಳಿಕೆಗಳು ಲಭ್ಯವಾಗಿವೆ. ಆಶ್ಚರ್ಯವೆಂದರೆ ಅಂದಿನಿಂದ ಇಂದಿನವರೆಗೂ ಅವುಗಳ ಆಕಾರ, ಸ್ವರೂಪದಲ್ಲಿ ಅಂತಹ ಮಹತ್ತರ ಬದಲಾವಣೆಗಳೇನೂ

ಕಂಡುಬಂದಿಲ್ಲ. ಇವು ಪ್ರಪಂಚದ ಎಲ್ಲ ಖಂಡಗಳಲ್ಲಿಯೂ ವ್ಯಾಪಕವಾಗಿ ಹರಡಿಕೊಂಡಿವೆ. ಆದರೆ ಅಂಟಾರ್ಕ್ಟಿಕಾಖಂಡದಲ್ಲಿ ಮಾತ್ರ ಇವು ಪತ್ತೆಯಾಗಿಲ್ಲ. ಚೇಳುಗಳು 4–10 ವರ್ಷಗಳ ಜೀವಿತಾವಧಿಯನ್ನು ಹೊಂದಿವೆ. ಇದೇ ವರ್ಗಕ್ಕೆ ಸೇರಿದ ಕೆಲವು ಸಂಧಿಪದಿಗಳು 25 ವರ್ಷಗಳಷ್ಟು ದೀರ್ಘಾವಧಿ ಆಯುಷ್ಯವನ್ನು ಹೊಂದಿರುವುದರಿಂದ ಚೇಳುಗಳೂ 25 ವರ್ಷಗಳು ಬದುಕಬಲ್ಲವು ಎಂಬ ಅಭಿಪ್ರಾಯವಿದೆ. ಇವು ಗಾತ್ರದಲ್ಲಿ 3–8 ಇಂಚು ದೊಡ್ಡದಾಗಿರುತ್ತದೆ. ಇವುಗಳಿಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ. ಆದರೆ ಕೆಲವು ಜಾತಿಯ ಚೇಳುಗಳಿಗೆ 10 ಕಣ್ಣುಗಳಿರುವುದನ್ನು ತಜ್ಞರು ಗುರುತಿಸಿದ್ದಾರೆ. ಇವು ಎಲ್ಲ ರೀತಿಯ ಪರಿಸರ ವ್ಯವಸ್ಥೆಗೆ ಹೊಂದಿಕೊಳ್ಳುತ್ತವೆ. ಎತ್ತರದ ಪರ್ವತಪ್ರದೇಶಗಳಿಂದ ಹಿಡಿದು ಭೂಮಿಯ ಮೇಲ್ಭಾಗದಲ್ಲಿ ಮರಗಳ ಮೇಲೆ, ಬಂಡೆಗಳ ಅಡಿಯಲ್ಲಿ ಸಾಮಾನ್ಯವಾಗಿ ವಾಸಿಸುವ ಇವುಗಳಿಗೆ ಮರಳಿನಲ್ಲಿ ಇರುವುದೆಂದರೆ ಅಚ್ಚುಮೆಚ್ಚು. $20^0$c ನಿಂದ $37^0$c ವರೆಗಿನ ಉಷ್ಣಾಂಶವಿರುವ ವಾತಾವರಣವು ಇವುಗಳ ವಾಸಕ್ಕೆ ಅತೀ ಯೋಗ್ಯವಾದುದು.

ಚೇಳು ನಿಶಾಚರಿ. ಹಗಲೆಲ್ಲಾ ಕಲ್ಲುಪೊಟರೆಗಳಲ್ಲೋ, ಮರದ ತೊಗಟೆ, ಎಲೆ, ಕಸಕಡ್ಡಿ, ಮನೆಗಳ ಹೆಂಚುಗಳ ಬುಡದಲ್ಲೊ ಅಡಗಿದ್ದು ಕತ್ತಲಾದ ಅನಂತರ ಆಹಾರವನ್ನು ಅರಸಿಕೊಂಡು ಹೋಗುತ್ತವೆ. ಸಣ್ಣಪುಟ್ಟ ಕೀಟಗಳು ಇದರ ಆಹಾರ. ಇವು ಅತ್ಯಂತ ಅವಕಾಶವಾದಿಗಳು. ತಮ್ಮ ಪರಭಕ್ಷಕತನವನ್ನು ಸಣ್ಣಪುಟ್ಟ ಕೀಟಗಳು, ಹುಳುಗಳು ಮಾತ್ರವಲ್ಲದೆ, ಕೆಲವೊಮ್ಮೆ ಹಲ್ಲಿಗಳನ್ನೂ ಬೇಟೆಯಾಡುತ್ತವೆ. ಇದು ಆಹಾರವನ್ನು ಸೇವಿಸುವ ಕ್ರಮ ಬಲು ವಿಚಿತ್ರ. ಯಾವುದಾದರೊಂದು ಕೀಟ ಸಿಕ್ಕರೆ ಅದನ್ನು ತನ್ನ ಪೆಡಿಪಾಲ್ಪಿ (ಮುಂಭಾಗದ ಎರಡು ಕಾಲುಗಳು)ಗಳಿಂದ ಬಿಗಿಯಾಗಿ ಹಿಡಿದು, ಕೊಂಡಿಯಿಂದ ಕುಟುಕಿ, ಕೆಲಿಸರಿಗಳ ಸಹಾಯದಿಂದ ಅರೆದು, ಆ ಜೀವಿಯೊಳಕ್ಕೆ ತನ್ನ ಕಿಣ್ವಗಳನ್ನು ಸೇರಿಸುತ್ತದೆ. ಕಿಣ್ವಗಳ ಚಟುವಟಿಕೆಯಿಂದ ಆಹಾರ ಪ್ರಾಣಿಯ ಒಳ ಅಂಗಾಂಶಗಳೆಲ್ಲ ದ್ರವರೂಪಕ್ಕೆ ತಿರುಗುತ್ತದೆ. ಆಗ ಅದಕ್ಕೆ ತನ್ನ ಬಾಯಿ ಹಾಕಿ ಆಹಾರದ್ರವವನ್ನು ಹೀರಿಕೊಳ್ಳುತ್ತದೆ. ಇವು ಒಂದೇ ಸಾರಿಗೆ ಅತ್ಯಧಿಕ ಆಹಾರ ಸೇವಿಸಬಲ್ಲವು. ವಿಚಿತ್ರವೆಂದರೆ ಅವಕ್ಕೆ ಹೆಚ್ಚು ಆಹಾರ ಸಂಗ್ರಹಣೆಯ ಸಾಮರ್ಥ್ಯವಿದ್ದರೂ, ಅದರ ಚಯಾಪಚಯ ಕ್ರಿಯೆಯು ಅತ್ಯಂತ ಮಂದಗತಿಯದು. ಹೀಗಾಗಿ ಅದರದು ಕ್ರಿಯಾತ್ಮಕವಲ್ಲದ ಬದುಕಿನ ಶೈಲಿಯಾಗಿದೆ. ಇದರಿಂದಾಗಿ ಇವು ದೀರ್ಘಾಯುಗಳಾಗಿದ್ದು, ನೀರು–

ಆಹಾರವಿಲ್ಲದೆ ಆರು ತಿಂಗಳಿನಿಂದ ಒಂದು ವರ್ಷದವರೆಗೆ ಜೀವಿಸಬಲ್ಲವು.

ಚೇಳು ಒಂಟಿ ಜೀವಿ. ಇವು ಸ್ವಜಾತಿಯನ್ನೇ ತಿಂದು ಬದುಕುವುದರಿಂದ ಬಹುತೇಕ ಏಕಾಂಗಿಯಾಗಿ ಜೀವನ ನಡೆಸುತ್ತವೆ. ಯಾವ ತೆರನಾದ ಸಂಘಜೀವನವನ್ನೂ ಇದು ಪ್ರದರ್ಶಿಸುವುದಿಲ್ಲ. ಆದರೆ "ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡುಹೆಣ್ಣುಗಳು ಜೊತೆಗೂಡಿ ಪ್ರಣಯಕೇಳಿಯಲ್ಲಿ ತೊಡಗಿದ್ದು, ನೃತ್ಯ ಮಾಡುತ್ತವೆ. ಮಿಥುನಕ್ರಿಯೆಯ ನಂತರ ಹೆಣ್ಣು ಗಂಡು ಚೇಳನ್ನು ತಿಂದುಹಾಕುತ್ತದೆ" *(ಕನ್ನಡ ವಿಶ್ವಕೋಶ, ಸಂಪುಟ 7, ಪುಟ ಸಂಖ್ಯೆ–590).* ಗರ್ಭಾಂಕುರಗೊಂಡ ಅಂಡಗಳು ತಾಯಿ ದೇಹದಲ್ಲೇ ಬೆಳೆದು ಮರಿಗಳಾಗಿ ತಾಯಿ ಗರ್ಭದಿಂದ ಹೊರಬರುತ್ತವೆ. ಹೊರಬಂದಾಗ ಲೋಳೆಯಂತಹ ದೇಹವನ್ನು ಹೊಂದಿದ್ದು, ಅಸಹಾಯಕ ಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಇವು ಹಲವು ದಿನಗಳವರೆಗೆ ತಾಯಿಯ ಬೆನ್ನ ಮೇಲೆಯೇ ಇದ್ದು, ಕೊಂಚ ದೊಡ್ಡದಾದ ಮೇಲೆ ಕೆಳಗಿಳಿದು ಬಂದು ಸ್ವತಂತ್ರ ಜೀವನ ನಡೆಸುತ್ತವೆ. ತಾಯಿಯ ಬೆನ್ನನ್ನು ಭೇದಿಸಿಕೊಂಡು ಚೇಳಿನ ಮರಿಗಳು ಹೊರಬರುತ್ತವೆ ಎಂಬ ಭಾವನೆ ಹಿಂದಿನಿಂದಲೂ ಇದೆ. ಆದರೆ ಇದು ಸತ್ಯವಲ್ಲ.

ಚೇಳು ಮರಿಹಾಕಿದ ನಂತರ ಅದರ ಆಯುಷ್ಯವು ಕೊನೆಗೊಳ್ಳುವುದೇ? ಎಂಬುದನ್ನು ತಿಳಿಯುವ ಮೊದಲು ಮರಿಹಾಕಿದ ನಂತರ ಸಾಯುವ ಜೀವಿಗಳ ಬಗ್ಗೆ ತಿಳಿಯುವುದು ಉಚಿತವಾದುದು. ಪ್ರಾಣಿಪ್ರಪಂಚದಲ್ಲಿ ಪ್ರಸವದ ನಂತರ ಕೆಲವೇ ಕ್ಷಣಗಳಲ್ಲಿ ಮರಣಹೊಂದುವ ಜೀವಿಗಳು ಕೆಲವು ಇವೆ. ಅವುಗಳೆಂದರೆ 'Octopus' (ಮೃದ್ವಂಗಿ/ಅಷ್ಟಪದಿ), 'The Squid' (ಒಂದು ಬಗೆಯ ಮೀನು), 'Salmon' (ಒಂದು ಬಗೆಯ ಮೀನು), 'May fly' ಈ ನಾಲ್ಕೂ ಜೀವಿಗಳು ತಮ್ಮ ಪ್ರಸವದ ನಂತರ ಸಾವನ್ನಪ್ಪುತ್ತವೆ. ಇದಕ್ಕೆ ಭೌಗೋಳಿಕ ಕಾರಣಗಳಿಗಿಂತ ಹೆಚ್ಚಾಗಿ ಅವುಗಳ ದೈಹಿಕ ರಚನೆಯು ಕಾರಣವಾಗಿದೆ. ಅಂತೆಯೇ ಚೇಳಿನ ದೈಹಿಕ ರಚನೆಯನ್ನು ನೋಡುವುದಾದರೆ ಇದು ಮೇಲೆ ತಿಳಿಸಿದ ನಾಲ್ಕು ಜೀವಿಗಳಂತೆ ಸೂಕ್ಷ್ಮ ದೇಹಪ್ರಕೃತಿಯನ್ನಾಗಲಿ, ರಚನೆಯನ್ನಾಗಲಿ ಹೊಂದಿಲ್ಲ. ಅವುಗಳಂತೆ ಪ್ರಸವದ ಸಂದರ್ಭದಲ್ಲಿ ಬೇರೊಂದು ರೀತಿಯ ಭೌಗೋಳಿಕ ವಾತಾವರಣದಲ್ಲಿಟ್ಟರೆ ಅದಕ್ಕೆ ಹೊಂದಿಕೊಳ್ಳದ ಜೀವಿಯೂ ಅಲ್ಲ. ಹಿಂದೆಯೇ ಹೇಳಿದಂತೆ ಅದು ಎಲ್ಲ ರೀತಿಯ ಪರಿಸರ ವ್ಯವಸ್ಥೆಗೂ ಹೊಂದಿಕೊಳ್ಳಬಲ್ಲದು. ಹಾಗಾಗಿ ಚೇಳು

ಪ್ರಸವ ಸಂದರ್ಭದಲ್ಲಿ ಬೇರೆ ರೀತಿಯ ಪರಿಸ್ಥಿತಿಯಲ್ಲಿಯೂ ಆರೋಗ್ಯಕರ ವಾಗಿರಬಲ್ಲದು. ಹಾಗಿದ್ದರೂ 'ಚೇಳಿಂಗೆ ಬಸುರಾಯಿತ್ತೆ ಕಡೆ' ಎಂಬ ಮಾತು ಜನಜನಿತವಾಗಲು ಕಾರಣವೇನು? ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಹಾಗೆಂದು ಅದು ಸತ್ಯವಲ್ಲವೆಂದೂ ಹೇಳಲಾಗುವುದಿಲ್ಲ. ಏಕೆಂದರೆ ಇದು ಕೇವಲ ಬಸವಣ್ಣನವರ ಉಕ್ತಿಯಲ್ಲ. ಇದು ವಚನದಲ್ಲಿ ಮಾತ್ರವಲ್ಲದೆ ನಾಗವರ್ಮನ 'ಕರ್ಣಾಟಕ ಕಾದಂಬರಿ'ಯಲ್ಲಿಯೂ ಬಂದಿದೆ. ತನ್ನ ಗೆಳೆಯ ವೈಶಂಪಾಯನನು ಕಾಣೆಯಾದ ಸಂದರ್ಭದಲ್ಲಿ ಅವನನ್ನು ತಾನೇ ಹುಡುಕಿಕೊಂಡು ಬರುತ್ತೇನೆಂದು ಚಂದ್ರಾಪೀಡನು ಹೊರಟಾಗ, ಅವನ ತಂದೆ ತಾರಾಪೀಡನು, ಮಗನೇ ನಿನ್ನಿಂದೇನಾದರೂ ತಪ್ಪಾಯಿತೇ? ಎಂದು ಕೇಳುತ್ತಾನೆ. ಆಗ ವೈಶಂಪಾಯನನ ತಂದೆಯೂ, ತಾರಾಪೀಡನ ಮಂತ್ರಿಯೂ ಆದ ಶುಕನಾಸನು, ದೇವ "ಚಂದ್ರನಲ್ಲಿ ಹೇಗೆ ಉಷ್ಣವು ಹುಟ್ಟುವುದಿಲ್ಲವೋ ಹಾಗೆ ರಾಜರೂಪನಾದ ಈ ಚಂದ್ರನಲ್ಲಿ ತಪ್ಪು ಉಂಟಾಗು ವುದಿಲ್ಲ. ಇದೆಲ್ಲವೂ ತಿಳಿಗೇಡಿಯೂ, ಕೃತಘ್ನನೂ, ದುರ್ಬುದ್ಧಿಯುಳ್ಳವನೂ ಆದ ತನ್ನ ಮಗನಿಂದಲೇ ಆಗಿದ್ದು" ಎಂದು ಹೇಳುತ್ತಾ

> ಪುಟ್ಟಿದ ತಾಣಕ್ಕಟಿವಂ
> ಪುಟ್ಟಿಸಲೊಡರಿಸುವ ಕಿಚ್ಚು ತೇಟಿಲ್ ಕ್ರಿಮಿಕುತ್ತಂ
> ಪುಟ್ಟುವವೋಲ್ ದುಷ್ಕೃತದಿಂ
> ಪುಟ್ಟಿದನೀ ಪಾಪಕರ್ಮನೆನ್ನಯ ಬಸುಟಿಂ
>
> (ಕರ್ಣಾಟಕ ಕಾದಂಬರಿ, ಪು. 421)

ಎನ್ನುತ್ತಾನೆ. ಅಂದರೆ ಬೆಂಕಿ, ಚೇಳು, ಕ್ರಿಮಿಗಳು ಹುಟ್ಟಿದಾಗ ತನ್ನ ಹುಟ್ಟಿನ ಮೂಲ (ತಾಯಿ)ವನ್ನು ನಾಶ ಮಾಡುವ ಹಾಗೆ ಪಾಪಿಯಾದ ಈ ನನ್ನ ಮಗ ವೈಶಂಪಾಯನನು ತನಗೆ ಮಗನಾಗಿ ಹುಟ್ಟಿದ್ದಾನೆ ಎನ್ನುತ್ತಾನೆ. ಅಂದರೆ ಬಸವಣ್ಣನವರಿಗಿಂತ 120 ವರ್ಷಗಳ ಹಿಂದೆಯೇ ಇದ್ದ ನಾಗವರ್ಮನು ಈ ಮಾತನ್ನು ಹೇಳಿರಬೇಕಾದರೆ ಕ್ರಿ.ಶ 10ನೆಯ ಶತಮಾನದಲ್ಲಿಯೂ ಚೇಳು ಮರಿಹಾಕಿದ ನಂತರ ಸತ್ತುಹೋಗುವುದೆಂಬ ಭಾವನೆ ಇತ್ತು. ಅದನ್ನು ಅವರು ಸತ್ಯವೆಂದೇ ನಂಬಿದ್ದರು (ಅಂದಿಗೆ ಅದು ಸತ್ಯವಾಗಿರಲೂ ಸಾಧ್ಯ). ನಾಗವರ್ಮನಲ್ಲದೆ ಹೆಚ್ಚು ಕಡಿಮೆ ಬಸವಣ್ಣನವರ ಕಾಲಘಟ್ಟದಲ್ಲಿಯೇ ಇದ್ದ 'ಬ್ರಹ್ಮಶಿವ' ಕವಿಯೂ ತನ್ನ ಕೃತಿ 'ಸಮಯಪರೀಕ್ಷೆ'ಯಲ್ಲಿ "ಚೇಳಿನ ರೂಪದಲ್ಲಿ ಜನನಿಯ ಗರ್ಭವನ್ನು ಸೀಳಿ ಹೊರಗೆ ಬಂದ ಬುದ್ಧನು ಸಕಲವನ್ನು ತ್ಯಜಿಸಿದರೂ ಕಾಷಾಯವಸ್ತ್ರದ ಮೋಹವನ್ನು ಮಾತ್ರ ಬಿಡಲಿಲ್ಲ"

ಎಂದಿದ್ದಾನೆ. ಅಂದರೆ ಅವನೂ ತನ್ನ ಕಾಲದಲ್ಲಿ ಜನಜನಿತವಾಗಿದ್ದ ಸತ್ಯ (?)ವನ್ನು ಬುದ್ಧನಿಗೆ ಅನ್ವಯಿಸಿ ಹೇಳಿದ್ದಾನೆ. ಅದೇ ಕಾಲಘಟ್ಟದಲ್ಲಿದ್ದ ಬಸವಣ್ಣನವರೂ ಈ ಮಾತನ್ನು ತಮ್ಮ ವಚನದಲ್ಲಿ ಬಳಸಿಕೊಂಡಿದ್ದಾರೆಂದರೆ ಅದು ಸತ್ಯವಾಗಿರಬೇಕೆಂದೇ ತೋರುತ್ತದೆ.

ಚೇಳು ಮರಿಹಾಕಿದ ನಂತರ ಸಾಯುವುದಿಲ್ಲವೆಂದು ಇಂದು ವೈಜ್ಞಾನಿಕ ವಾಗಿ ಸಾಬೀತಾಗಿದೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಚೇಳಿನ ಪ್ರಸವದ ಮರಣ ಸತ್ಯವೆಂದೇ ಭಾವಿಸಿದ್ದಾರೆ. ಇದಕ್ಕೆ ಕಾರಣ ಅದು ಕೇವಲ ಕವಿಯ ಉಕ್ತಿಯಲ್ಲ. ಅದು ಜನಪದರ ಅನುಭವಕ್ಕೆ ಬಂದಂತಹ ಸತ್ಯ. ಜನಪದರ ಬಹುಪಾಲು ಹೇಳಿಕೆಗಳು ಸ್ವಾನುಭವದಿಂದ ಕೂಡಿರು ವಂತಹವು. ಆದ್ದರಿಂದ ಈ ಹೇಳಿಕೆಯೂ ಅಂದಿಗೆ ಸತ್ಯವಾಗಿದ್ದಂತೆಯೇ ತೋರುತ್ತದೆ. ಹಾಗೆ ಸತ್ಯವೆಂದು ಕಾಣಲು ಪ್ರಮುಖವಾಗಿ ಎರಡು ಕಾರಣ ಗಳಿವೆ. ಮೊದಲನೆಯದೆಂದರೆ ಚೇಳಿನ ದೇಹದಲ್ಲಾಗುವ ಬದಲಾವಣೆಗಳು. ಮನುಷ್ಯನಿಗೆ ಪ್ರಸವದ ಸಂದರ್ಭದಲ್ಲಿ ರಕ್ತದೊತ್ತಡ, ನಿರ್ಜಲೀಕರಣ, ಮಗುವಿನ ಅಸಹಜ ಬೆಳವಣಿಗೆ ಮುಂತಾದ ಕಾರಣಗಳಿಂದ ತಾಯಿಯು ಸಾವನ್ನಪ್ಪುವ ಘಟನೆಗಳು ಸಹಜ. ಅಂತೆಯೇ ಚೇಳುಗಳೂ ಪ್ರಸವದ ಸಂದರ್ಭದಲ್ಲಿ ನಿರ್ಜಲೀಕರಣಕ್ಕೆ ಒಳಗಾಗಿ ಸಾಯುತ್ತವೆ. ಹಾಗೆ ಚೇಳು ಪ್ರಸವದ ಸಂದರ್ಭದಲ್ಲಿ ನಿರ್ಜಲೀಕರಣದಿಂದ ಸತ್ತದ್ದನ್ನು ಗಮನಿಸಿದವನೊಬ್ಬ ಅದನ್ನು ಇತರರಿಗೆ ತಿಳಿಸಿ, ಅದು ಜನರ ಬಾಯಿಂದ ಬಾಯಿಗೆ ಹಬ್ಬಿ ಮುಂದೆ ಅದು ಜನಜನಿತಗೊಂಡು 'ಚೇಳಿಂಗೆ ಬಸುರಾಯಿತ್ತೆ ಕಡೆ' ಎಂಬ ಮಾತು ನಿಂತಿರಲೂ ಸಾಧ್ಯ. ಏಕೆಂದರೆ ಜನಪದ ಸಾಹಿತ್ಯವೆಲ್ಲವೂ ಮೊದಲಿಗೆ ವ್ಯಕ್ತಿನಿರ್ಮಿತವೇ ಆಗಿದ್ದು, ನಂತರದಲ್ಲಿ ಸಮಷ್ಟಿನಿರ್ಮಿತವೆಂದಾಗಿದೆ. ನಿರ್ಜಲೀಕರಣಕ್ಕೆ ಒಳಗಾಗಿ ಚೇಳು ಸಾಯುವ ಸಾಧ್ಯತೆ ಕೇವಲ ನನ್ನ ಊಹೆಯಲ್ಲ. ಇದನ್ನು ಕುರಿತಂತೆ 'ಲೂಕಾಸ್' ಎಂಬ ಸಂಧಿಪದಿ ತಜ್ಞ ಹೀಗೆ ಹೇಳುತ್ತಾನೆ: "I had a p.pauliani female die just before birth. she had a belly full of babies and they looked like they were ready to go. I haven't cut her open yet but I bet she died form impaction of babies, from what i understand, it is hard for flat rock species to give birth due to dehydration" ಅಂದರೆ ಚೇಳಿನ ಮರಿಗಳು ಭ್ರೂಣದ ರೂಪದಲ್ಲಿದ್ದಾಗ ತಾಯಿಚೇಳಿನ ದೇಹದೊಳಗೆ ನಡೆದ ರಾಸಾಯನಿಕಕ್ರಿಯೆಯಿಂದಾಗಿ ಭ್ರೂಣವು

'ಗಟ್ಟಿಸಿ' ತಾಯಿಚೇಳು ನಿರ್ಜಲೀಕರಣಕ್ಕೆ ಒಳಗಾಗಿ ಮರಣ ಹೊಂದಿತು. ಇದರಿಂದ ಚೇಳುಗಳು ಪ್ರಸವ ಸಂದರ್ಭದಲ್ಲಿ ನಿರ್ಜಲೀಕರಣಕ್ಕೆ ಒಳಗಾಗಿ ಸಾಯುವುದು ಸಹಜವೆಂದಾಯಿತು. ಇದಲ್ಲದೆ ಇನ್ನೂ ಒಂದು ಕಾರಣವಿದೆ. ಅದು ಚೇಳಿನ ವಯಸ್ಸು. ಸಾಮಾನ್ಯವಾಗಿ ಮುದಿ ವಯಸ್ಸಿನ ಚೇಳುಗಳು ಪ್ರಸವ ಸಂದರ್ಭದಲ್ಲಿ ಸಾವನ್ನಪ್ಪುತ್ತವೆ. ಇದನ್ನು ಪುಷ್ಟೀಕರಿಸು ವಂತೆ 'Az.John' ಎಂಬ ಸಂಧಿಪದಿ ತಜ್ಞ (Archnologist) ಹೀಗೆ ಹೇಳುತ್ತಾನೆ "its very common for old female scorpions to die just after birth. after going months wihtout eating and spending a ton of energy on producing and caring for the babies can take a lot out of a female. older ones tend to be more at risk. plus some species just seem to have a certain number of broods in them. once they all had the female dies". ಇಂತಹ ಮುದಿ ವಯಸ್ಸಿನ ಚೇಳಿನ ಪ್ರಸವ ಸಂದರ್ಭದ ಸಾವನ್ನು ಗಮನಿಸಿದ್ದ ಪರಿಣಾಮವಾಗಿಯೂ ಈ ಹೇಳಿಕೆ ನೆಲೆ ನಿಲ್ಲಲು ಸಾಧ್ಯವಾಗಿರಬಹುದು.

ಹೀಗೆ ಚೇಳಿನ ಮರಣದ ಮಾತು ಸತ್ಯವೆಂದು ತೋರಲು ಇರುವ ಎರಡನೆಯ ಕಾರಣ ಅಂದಿನ ಕಾಲಘಟ್ಟದಲ್ಲಿದ್ದ ಚೇಳಿನ ಪ್ರಭೇದ. ಮೊದಲೇ ತಿಳಿಸಿದಂತೆ ಚೇಳಿನಲ್ಲಿ ಸು. 1500ಕ್ಕೂ ಹೆಚ್ಚು ಪ್ರಭೇದಗಳಿದ್ದು, ಸು. 430 ವರ್ಷಗಳಷ್ಟು ಹಿಂದಿನ ಪಳೆಯುಳಿಕೆಗಳು ದೊರೆತಿವೆ. ಆದ್ದರಿಂದ ಕರ್ನಾಟಕ ದಲ್ಲಿ ಕ್ರಿ.ಶ 10–12ನೇ ಶತಮಾನದಲ್ಲಿದ್ದ ಚೇಳಿನ ಪ್ರಭೇದವು ಬೇರೆ ಬೇರೆ ಕಾರಣಗಳಿಂದಾಗಿ ಪ್ರಸವದ ಸಂದರ್ಭದಲ್ಲಿ ಸಾವನ್ನಪ್ಪುತ್ತಿದ್ದಿರಬಹುದು. ಇಂದು ಭಾರತದಲ್ಲಿ ಪ್ರಮುಖವಾಗಿ Indian Red scorpion, Indian Block scorpion, Gaint Forest scorpion, Fattail scorpion, Euscorpions Asthenurus ಎಂಬ ಐದು ವಿಧವಾದ ಚೇಳುಗಳು ಕಾಣಸಿಗುತ್ತವೆ. ಈ ಪ್ರಭೇದಗಳು ಎಷ್ಟು ವರ್ಷಗಳಿಂದ ಭಾರತದಲ್ಲಿ ಕಂಡುಬರುತ್ತವೆ? ಅಂದು ಕರ್ನಾಟಕದಲ್ಲಿದ್ದ ಚೇಳಿನ ಪ್ರಭೇದ ಯಾವುದು? ಅವುಗಳ ದೇಹ ರಚನೆ, ಜೀವನ ಕ್ರಮ ಹೇಗಿತ್ತು? ಮುಂತಾದ ವಿಷಯಗಳ ಬಗ್ಗೆ ಹೆಚ್ಚಿನ ಸಂಶೋಧನೆಗಳಾದರೆ ಮಾತ್ರ 'ಚೇಳಿಂಗೆ ಬಸುರಾಯಿತ್ತೆ ಕಡೆ' ಎಂಬ ಉಕ್ತಿಯ ಸತ್ಯಾಸತ್ಯತೆಯನ್ನು ನಿರ್ಧರಿಸಬಹುದು.

□

# 'ಮಹಿಷಾಸುರನ ದಸರಾ'–ಒಂದು ವಿವೇಚನೆ

ಹೊರೆಯಾಲ ದೊರೆಸ್ವಾಮಿ

**ಕ**ಳೆದ 2017ರ ಸೆಪ್ಟೆಂಬರ್ 18ರಂದು ಮೈಸೂರಿನ ಕೆಲವರು 'ಮಹಿಷಾಸುರನ ದಸರಾ'ವನ್ನು ಚಾಮುಂಡಿ ಬೆಟ್ಟದಲ್ಲಿ ಆಚರಿಸಿದರು. ಕಳೆದ ಒಂದೆರಡು ವರ್ಷಗಳಿಂದ ಈ ಆಚರಣೆ ಪ್ರತಿ ದಸರಾ ಮುನ್ನ ನಡೆಯುತ್ತಾ ಬಂದಿದೆ. ಈ ಬಾರಿ 'ದಸರಾ'ದಲ್ಲಿ ಭಾಗವಹಿಸಿದ್ದ ರಾಜಕಾರಣಿ ಹಿರಿಯ ಎ.ಕೆ. ಸುಬ್ಬಯ್ಯ ಅವರು ಇದನ್ನು ನಾಡಹಬ್ಬವಾಗಿ ರಾಜ್ಯಾದ್ಯಂತ ಮುಂದಿನ ವರ್ಷಗಳಲ್ಲಿ ಆಚರಿಸಬೇಕೆಂದು ಫರ್ಮಾನು ಹೊರಡಿಸಿದ್ದಾರೆ. ಹಾಗೆಯೇ 2018ರ ಅಕ್ಟೋಬರ್ 7 ರಂದು ಮೈಸೂರಿನಲ್ಲಿ ಕೆಲವರು 'ಮಹಿಷ ದಸರ'ವನ್ನು ಆಚರಿಸಿದ್ದಾರೆ. ಈ ಸಂದರ್ಭದಲ್ಲಿ 'ದಸರಾ' ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಓದುಗರ ಮುಂದಿಡಲು ಬಯಸಿದ ಈ ಕಿರು ಬರಹ.

ಮೈಸೂರು ದಸರಾದಲ್ಲಿ ಮಹಿಷಾಸುರಮರ್ದಿನಿಯಾದ ಚಾಮುಂಡೇಶ್ವರಿ (ಮೂಲ ಚಾಮುಂಡಾ) ಹಾಗೂ ಮಹಿಷಾಸುರರ ಬಗ್ಗೆ ವಿಶೇಷವಾಗಿ ಕೇಳಿಬರುತ್ತದೆ. ಚಾಮುಂಡೇಶ್ವರಿಯು ಮಹಿಷಾಸುರನನ್ನು ಕೊಂದು ಈ ಪ್ರದೇಶದಲ್ಲಿ ಶಾಂತಿ ಸ್ಥಾಪಿಸಿ ಬೆಟ್ಟದಲ್ಲಿ ನೆಲೆನಿಂತಳೆಂದು ದಂತಕಥೆಗಳಿವೆ. ಅದಕ್ಕೆ ಸಂಬಂಧಿಸಿದ ಅನೇಕ ಐತಿಹ್ಯಗಳು (Legends) ಬೆಟ್ಟ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ದಂತಕಥೆ ಮತ್ತು ಐತಿಹ್ಯಗಳನ್ನೇ ಆಧರಿಸಿಕೊಂಡು ಅವೇ ವಾಸ್ತವಿಕವೆಂಬಂತೆ ಜನಮನದಲ್ಲಿ ಗ್ರಹಿಕೆಯಾಗಿದೆ.

ಸಂಸ್ಕೃತದ ಪ್ರಾಚೀನ ಗ್ರಂಥಗಳನ್ನು ಅವಲೋಕಿಸಿದಾಗ ಚಾಮುಂಡಾ ಎಂಬ ದೇವಿಯು ಸಪ್ತಮಾತೃಕೆಗಳಲ್ಲಿ ಒಬ್ಬಳಾಗಿದ್ದಾಳೆ. ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಾ ಇವೆ ಆ ಸಪ್ತಮಾತೃಕೆಗಳು(ಸುಮಾರು ಕ್ರಿ.ಶ. 450ರ ಅಮರಸಿಂಹನ ಅಮರಕೋಶದಲ್ಲಿ

---

**ಹೊರೆಯಾಲ ದೊರೆಸ್ವಾಮಿ,** ನಂ. 7, 7ನೇ ಮೇನ್ (ಉತ್ತರ), 9ನೇ ಕ್ರಾಸ್, ವಿವೇಕಾನಂದ ನಗರ, ಮೈಸೂರು 570023

ಮತ್ತಿತರ ಗ್ರಂಥಗಳಲ್ಲಿ ಈ ಸಂಗತಿ ಲಭ್ಯವಿದೆ). ಈ ಮಾತೃಕೆಗಳು ಅಖಿಲ ಭಾರತದಲ್ಲಿ ಕಂಡುಬರುತ್ತವೆ.

ಮಹಿಷಾಸುರನ ಬಗ್ಗೆ ಪುರಾಣಗಳು ಹೇಳುವುದಿಷ್ಟು (ಸಂಕ್ಷಿಪ್ತವಾಗಿ)–

1. ಮಹಿಷಾಸುರ (ಮಹಿಷ ಎಂಬ ರಾಕ್ಷಸ) ಪುರಾಣಗಳಲ್ಲಿ ಕಂಡು ಬರುವಂತೆ ದಿತಿ ಎಂಬುವವಳ ಮಗ. ಎಮ್ಮೆ ಮುಖದವನು. ತ್ರಿಪುರ ಸುಂದರಿ ಎಂಬ ದೇವತೆಯಿಂದ ಹತನಾದವನು. (ಮಾರ್ಕಂಡೇಯ ಪುರಾಣ)

2. ಮಹಿಷಾಸುರ ರಂಭಾಸುರನ ಮಗ ದೇವಿಯನ್ನು ಮೋಹಿಸಿ ಹತನಾದವನು (ದೇವೀ ಭಾಗವತ).

ಚಂಡ–ಮುಂಡ ಎಂಬ ರಾಕ್ಷಸರನ್ನು ಕೊಂದಿದ್ದರಿಂದ ಕಾಳಿಕಾದೇವಿಗೆ ಚಾಮುಂಡಾ ಎಂದು ಹೆಸರಾಯಿತು ಎಂದು ಪುರಾಣಗಳಿಂದ ತಿಳಿದು ಬರುತ್ತದೆ. ಈ ಚಂಡ ಮತ್ತು ಮುಂಡ ಅಣ್ಣ ತಮ್ಮಂದಿರೆಂದು ಪ್ರತೀತಿ ಇದೆ. ಆದರೆ, ಚಂಡ–ಮುಂಡ ಎಂಬವು ದ್ರಾವಿಡ ಜನಾಂಗಕ್ಕೆ ಸೇರಿದ ಎರಡು ಸಮುದಾಯಗಳು ಇಂದು ಉತ್ತರ ಭಾರತದಲ್ಲಿವೆ. ಇನ್ನೊಂದು ನಂಬಿಕೆಯ ಪ್ರಕಾರ ಮಹಿಷನು ಕೋಲ ಬುಡಕಟ್ಟು ಸಮುದಾಯಕ್ಕೆ ಸೇರಿದವನು. ಮತ್ತೊಂದು ದಂತಕಥೆ ಮತ್ತು ನಂಬಿಕೆಯ ಪ್ರಕಾರ ಆತ ಸಂತಾಲ ಬುಡಕಟ್ಟಿಗೆ ಸೇರಿದವನು ಮತ್ತು ಅದರ ನಾಯಕನಾಗಿದ್ದವನು. ಈ ಸಮುದಾಯ ದ್ರಾವಿಡೇತರವಾಗಿದ್ದು ಇಂದಿನ ಪಶ್ಚಿಮ ಬಂಗಾಳ ಮತ್ತು ಸುತ್ತಲ ಪ್ರದೇಶಗಳಲ್ಲಿ ವಾಸವಾಗಿದೆ. ಈ ಸಮುದಾಯದವರು 19ನೆಯ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ದಂಗೆ ಎದ್ದಿದ್ದರು ಎಂಬುದು ತಿಳಿದು ಬರುತ್ತದೆ. ವಾಸ್ತವದ ನೆಲೆಗಟ್ಟಿನಲ್ಲಿ ನೋಡಿದರೆ ಚಾಮುಂಡೇಶ್ವರಿಯು ಆರ್ಯ ದೈವಸಂಕುಲಕ್ಕೆ ಸೇರಿದವಳು ಮತ್ತು ಆರ್ಯೇತರ ಸಮುದಾಯಕ್ಕೆ ಸೇರಿದವನು ಮಹಿಷ. ಸಂತಾಲರಲ್ಲಿರುವ ಒಂದು ಐತಿಹ್ಯದ ಪ್ರಕಾರ ಆತ ಅಸಂಖ್ಯ ಎಮ್ಮೆಗಳ ಒಡೆಯನಾಗಿದ್ದನು. ಹೀಗೆ ಆರ್ಯ ಮತ್ತು ದ್ರಾವಿಡ ಸಂಘರ್ಷದಿಂದ ಉದ್ಭವಿಸಿರುವ ಈ ಮಹಿಷಾಸುರಮರ್ದಿನಿ ಕಥೆ ಪರೋಕ್ಷವಾಗಿ ನಮ್ಮ ದೇಶದ ಪ್ರಾಚೀನ ಇತಿಹಾಸವನ್ನು ಹೇಳುತ್ತದೆ. ಅದು ಕೇವಲ ಮೈಸೂರು ಪ್ರದೇಶಕ್ಕೆ ಸೀಮಿತವಾದುದ್ದೇನು ಅಲ್ಲ. ರಾಜ್ಯ ಹಾಗು ದೇಶವ್ಯಾಪಿಯಲ್ಲೂ ಕಂಡುಬರುತ್ತದೆ.

ನಮ್ಮ ಕನ್ನಡನಾಡಿಗೆ ಮೂಲದಲ್ಲಿ ಕರುನಾಡು=ಎತ್ತರವಾದ ಪ್ರದೇಶ (ತಮಿಳಿನಲ್ಲಿ ಮೇಲ್ ನಾಟ್ಟು ಎಂದು ಕನ್ನಡನಾಡಿಗೆ ಹೆಸರಿಸುತ್ತಾರೆ. ಕೀಳ್

ನಾಟ್ಟು ಎಂದರೆ ಕೆಳಗಿನ ಪ್ರದೇಶ ಅಂದರೆ ತಮಿಳುನಾಡು), ಕಪ್ಪು ಮಣ್ಣಿನ ನಾಡು, ಎರೆನಾಡು ಈ ಮುಂತಾದ ಹೆಸರುಗಳಿದ್ದವು. ತಮಿಳಿನ ಎರಡನೆಯ ಶತಮಾನದ ಮಾಮೂಲನಾರ್ ಎಂಬ ಕವಿ ಕನ್ನಡನಾಡನ್ನು 'ಎರುಮಿನಾಡು' ಎಂದು ಹೆಸರಿಸಿದ್ದಾನೆ. ಅದೇ 'ಎರುಮೈನಾಡು' ಅಂದರೆ 'ಎಮ್ಮೆಗಳ ನಾಡು'. ಕನ್ನಡನಾಡಿನಲ್ಲಿ ಎಮ್ಮೆ ಹೆಸರಿನ ಅನೇಕ ಗ್ರಾಮಗಳು ಕಂಡುಬರುತ್ತವೆ. ಉದಾಹರಣೆಗೆ ಎಮ್ಮೆದೊಡ್ಡಿ, ಎಮ್ಮೆಕೊಪ್ಪಲು, ಎಮ್ಮೆಮ್ಮಾಡು, ಎಮ್ಮಿಗನೂರು, ಮಹಿಷಿ ಇತ್ಯಾದಿ. (Eruminatu is almost certainly the same as Lexicon term Erumainatu, the Mysore region-Mahisha-Mandala of Karnataka. The word Erumi-Ta. Erumai, K,Tu. Emme -buffalo appears to preserve an ancient dialectal form. 'Early Tamil Epigraphy - From the Earliest Times to the Sixth Century A.D.'-Chennai, India and the Department of Sanskrit and Indian Studies Harward University, U.S.A 2003). ಸಂಸ್ಕೃತದಲ್ಲಿ ಕಾಡುಕೋಣ ಎಂಬುದಕ್ಕೆ ಮಹಿಷ ಎಂದು ಹೆಸರು. ಮಹಿಷೀಶಿಶುಃ ಎಂದರೆ ಎಮ್ಮೆ ಕರು. ಎಮ್ಮೆಗಳ ನಾಡನ್ನು ಮಹಿಷಮಂಡಲ, ಮಹೀಷಿಕಾ ಎಂದು ಸಂಸ್ಕೃತೀಕರಣಗೊಳಿಸಲಾಗಿದೆ. ನಮ್ಮ ತಳಮೂಲ ಸಂಶೋಧಕರಾದ ದಿ. ಶಂ.ಬಾ. ಜೋಷಿಯವರು ಹೇಳುವಂತೆ '...ಎಮ್ಮೆ ನಾಡು ಎಂದರೆ ಕಗ್ಗ; ಮಹಿಷ ದೇಶವೆಂದರೆ ಕುಸುರಿ... ಅಂತು ಕ್ರಿ.ಶ.ಕ್ಕೆ ಮೊದಲು ಐದು–ಆರನೆಯ ಶತಮಾನದಲ್ಲಿ ಆರಂಭವಾಗಿ. ಕ್ರಿ.ಶ. ಐದು–ಆರನೆಯ ಶತಮಾನದ ಸುಮಾರಿಗೆ ಕನ್ನಡಕ್ಕೆ ಅಡಿಯಿಂದ ಮುಡಿಯವರೆಗೆ (ಸು)ಸಂಸ್ಕೃತ ಸ್ವ–ರೂಪವನ್ನು ಕೊಡುವ ಮಹಾಕಾರ್ಯವು ಕೊನೆಗೊಂಡಿತು...' (ಕಣ್ಮರೆಯಾದ ಕನ್ನಡ–ಲೇ: ಶಂ.ಬಾ.ಜೋಷಿ, ಪ್ರ.ಮು.1933). ಈ ಬಗ್ಗೆ ಇನ್ನು ಕೆಲವಾರು ವಿದ್ವಾಂಸರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಹಿನ್ನಲೆಯಲ್ಲಿ ನೋಡಿದಾಗ ಮಹಿಷಿಗಳು(ಎಮ್ಮೆಗಳು) ಅಧಿಕವಾಗಿರುವ ನಾಡು ಮಹಿಷ ಮಂಡಲ. ಅದೇ ಕ್ರಮೇಣ ಮಹಿಷನ ಊರು, ಮೈಶೂರು, ಮಹಿಶೂರು, ಮಯಿಸೂರು, ಮೈಸೂರು ಎಂದಾಗಿದೆ. ಈ ಕಾರಣದಿಂದಲು ಮಹಿಷಾಸುರನ ಮರ್ದಿನಿ ಎಂದು ಹೆಸರಿಸಲಾದ ಚಾಮುಂಡೇಶ್ವರಿಗೂ ಮೈಸೂರಿಗೂ ನಿಕಟವಾದ ಸಂಬಂಧವೇನೂ ಇಲ್ಲ.

ಮತ್ತೆ ಶಂ.ಬಾ. ಜೋಷಿಯವರ ಮಾತುಗಳನ್ನು ನೋಡೋಣ: 'ಮೈಸೂರು ರಾಜಮನೆತನದ ಕುಲದೇವತೆ ಮಹಿಷಾಸುರಮರ್ದಿನಿ. ಮೈಸೂರಿನ ಅರಸರು

ತಮ್ಮ ಸಂಬಂಧವನ್ನು ಯದುವಂಶಕ್ಕೆ ಒಯ್ದು ಹಚ್ಚುತ್ತಾರೆ. ಶಿವಾಜಿಯ ಕುಲದೇವತೆ ಕೂಡ ಮಹಿಷಾಸುರಮರ್ದಿನಿ' (ಮರ್‍ಹಾಟೀ ಸಂಸ್ಕೃತಿ ಕಾಯೇ ಸಮಸ್ಯಾ-ಶಂ.ಬಾ. ಜೋಷಿ-ಅನು: ಕೀರ್ತಿನಾಥ ಕುರ್ತಕೋಟಿ, 1957). ಈ ಮಾತುಗಳ ಹಿನ್ನೆಲೆಯಲ್ಲಿ ನಾವು ಮೈಸೂರು ಅರಸರ ಹಿನ್ನೆಲೆಯನ್ನು ಕ್ವಚಿತ್ತಾಗಿ ನೋಡೋಣ.

ಮೈಸೂರು ಸಂಸ್ಥಾನದ ಸ್ಥಾಪಕರಾದ ಯದುರಾಯ ಅಥವಾ ವಿಜಯ ಮತ್ತು ಕೃಷ್ಣ ಎಂಬುವವರು ಉತ್ತರ ದೇಶದಿಂದ (ಗುಜರಾತಿನ ದ್ವಾರಕೆಯಿಂದ?) ಬಂದವರು ಎಂಬುದು ಸಾಮಾನ್ಯ ಐತಿಹಾಸಿಕ ತಿಳಿವಳಿಕೆಯೇ ಆಗಿದೆ. ಆ ಸಹೋದರರಿಬ್ಬರು ಅಂದಿನ ಮಹಿಷೂರಿನ ಸಮೀಪದಲ್ಲಿದ್ದ ಕಾರುಗಳ್ಳಿಯ ಮಾರನಾಯಕ ಎಂಬುವವನನ್ನು ನಿಗ್ರಹಿಸಿ, ಮೈಸೂರು ರಾಜ್ಯದ ಸ್ಥಾಪನೆಗೆ ಮೂಲ ಕಾರಣರಾದರು. ಮತ್ತು ಯದುರಾಯನು ಈ ವಂಶದ ಮೊದಲ ದೊರೆಯಾಗಿ ಪ್ರತಿಷ್ಠಾಪನೆಗೊಂಡನು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. ಸಹೋದರರಿಬ್ಬರು ತಮ್ಮ ಕುಲದೇವರಾದ ಚಾಮುಂಡೇಶ್ವರಿಯನ್ನು ಸ್ಥಾಪಿಸಿದರು ಎಂಬುದು ತಿಳಿದುಬರುತ್ತದೆ. ಚಾಮುಂಡೇಶ್ವರಿಯ ಮತ್ತೊಂದು ಹೆಸರೇ ಮಹಿಷಾಸುರಮರ್ದಿನಿ ಎಂದಾಗಿರುವುದರಿಂದ, ಆ ಪರಿಣಾಮ ಮೈಸೂರು ದಸರಾ ಮಹೋತ್ಸವಕ್ಕೂ ಈ ಹೆಸರಿಗೆ ತಳಕು ಹಾಕಲಾಗಿದೆ. ಆದರೆ, ವಾಸ್ತವವಾಗಿ ನೋಡಿದರೆ ಚಾಮುಂಡಿ ಬೆಟ್ಟದ ಮೂಲ ಹೆಸರು ಮಹಾಬಲಾದ್ರಿ ಮತ್ತು ಅಲ್ಲಿಯ ಮೂಲ ದೇವರು ಮಹಾಬಲೇಶ್ವರ. ಆ ದೇವಸ್ಥಾನವು ಇಂದಿಗು ಚಾಮುಂಡೇಶ್ವರಿ ದೇವಾಲಯದ ಪಕ್ಕದಲ್ಲಿದೆ. 'ಪ್ರಮುಖವಾದ ಮಹಾಬಲೇಶ್ವರ ದೇವಾಲಯಕ್ಕೆ ಹೊಯ್ಸಳ ರಾಜನಾದ ವಿಷ್ಣುವರ್ಧನನು ಕ್ರಿ.ಶ. 1128ರಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದ ವಂಶಸ್ಥರು ಕ್ರಿ.ಶ. 1626ರಲ್ಲಿ ದತ್ತಿ ಕೊಟ್ಟರು' (ಮೈಸೂರು ಚಾಮುಂಡೇಶ್ವರಿ ದೇವಸ್ಥಾನ-ಲೇ. ಬಿ.ವಿ. ಗೋಸ್ವಾಮಿ, ಎಸ್.ಜಿ. ಮೊರಬ, ಪ್ರ.ಮು. 2001). ಆ ಹೊತ್ತಿನಲ್ಲಿ (ಕ್ರಿ.ಶ. 1128ರಲ್ಲಿ) ಚಾಮುಂಡಿ ಬೆಟ್ಟ ಎಂಬ ಹೆಸರೇನು ಇರಲಿಲ್ಲ. ಮಹಾಬಲೇಶ್ವರ ಎಂಬ ಹೆಸರಿನ ಕಾರಣದಿಂದ ಬಹುಶಃ ಮೈಸೂರು ತಾಲ್ಲೂಕಿನ ಮಾರ್ಬಳ್ಳಿ, ಮಾರ್ಬಳ್ಳಿಹುಂಡಿ ಗ್ರಾಮಗಳು ಹೆಸರಾಗಿವೆ ಎಂದು ಕನ್ನಡದ ಮೇರು ಸೊಂಶೋಧಕ ಡಾ. ಎಂ. ಚಿದಾನಂದ ಮೂರ್ತಿಯವರು ಹೇಳುವ ಅಭಿಪ್ರಾಯವನ್ನು ನಾವು ಸುಲಭದಲ್ಲಿ ತೆಗೆದುಹಾಕುವ ಹಾಗಿಲ್ಲ. ಮತ್ತು ಕಾರುಗಳ್ಳಿಯ ಮಾರನಾಯಕನು ಈ ದೇವತೆಯ ಉಪಾಸಕನಾಗಿದ್ದನು. ಅಂದರೆ, ಮೈಸೂರು ಅರಸರ ಕಾರಣದಿಂದಾಗಿ ಮಹಾಬಲಾದ್ರಿಯು ಚಾಮುಂಡಿಬೆಟ್ಟವಾಯಿತು ಎಂದಾಗುತ್ತದೆ.

ಇನ್ನೂ ಕೊಂಚ ಮುಂದುವರಿದು ಹೇಳುವುದಾದರೆ ಯದುರಾಯ ಮತ್ತು ಕೃಷ್ಣ ದೂರದಿಂದ ಮೈಸೂರಿಗೆ ಬಂದು, ಇಲ್ಲಿನ ಪಾಳೆಗಾರನನ್ನು ನಿಗ್ರಹಿಸಿ, ಮೈಸೂರು ಸಂಸ್ಥಾನವನ್ನು ಸ್ಥಾಪಿಸಿದರೆಂಬುದು ಎಷ್ಟು ಸಂಭಾವ್ಯ? ಪರದೇಶದಿಂದ ಬಂದವರು, ಪ್ರದೇಶದ ಅರಿವಿಲ್ಲದವರು, ಪ್ರದೇಶದ ಭಾಷೆ ಗೊತ್ತಿಲ್ಲದವರು ಎಷ್ಟರಮಟ್ಟಿಗೆ ಒಂದು ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾದೀತು? ಇತ್ಯಾದಿ ಅನುಮಾನಗಳು ಸಹಜವಾಗಿ ಬರುತ್ತವೆ. ನಮ್ಮ ದೇಶದ ರಾಜವಂಶೀಯರು ಸಾಮಾನ್ಯವಾಗಿ ತಾವು ಸ್ಥಳೀಕರು ಎಂದು ಹೇಳಿಕೊಂಡರೆ ಎಲ್ಲಿ ಜನಮನ್ನಣೆ, ರಾಷ್ಟ್ರಮನ್ನಣೆ ದೊರಕುವುದಿಲ್ಲವೊ ಎಂಬ ಕಾರಣದಿಂದ ತಮ್ಮ ವಂಶಾವಳಿಯನ್ನು, ಬಿರುದುಬಾವಲಿಯನ್ನು, ಗೋತ್ರಸೂತ್ರಗಳನ್ನು ಶ್ರೇಷ್ಠತೆಗೆ ಅರ್ಪಿಸಿಕೊಳ್ಳುವುದು ಸಹಜವೇ ಆಗಿದೆ (ಆರ್ರ್ಯೀಕರಣ). ಈ ದೃಷ್ಟಿಯಿಂದ ನೋಡಿದಾಗ ಮೈಸೂರು ಅರಸರ ಕುಲದೇವತೆಯಾದ ಚಾಮುಂಡೇಶ್ವರಿಗೂ, ಮಹಿಷಾಸುರನ ಸಂಹಾರಕ್ಕೂ ಮತ್ತು ಮೈಸೂರಿಗೂ ನೇರಸಂಬಂಧ ಬರುವುದು ಅಸಂಭಾವ್ಯ. ಏನಿದ್ದರೂ ಎಮ್ಮೆಗಳ ನಾಡು=ಮಹಿಷಮಂಡಲ=ಮೈಸೂರು ಎಂಬುದು ಸಹಜವಾಗುತ್ತದೆ.

ಹಿಂದೂ ಪಂಚಾಂಗದ ಪ್ರಕಾರ ವರ್ಷದಲ್ಲಿ ಎರಡು ನವಮಿಗಳು ಪ್ರಮುಖವಾಗಿ ಬರುತ್ತವೆ. ಮೊದಲನೆಯದು ಚೈತ್ರ ಮಾಸದಲ್ಲಿ ಬರುವ ನವಮಿ (ರಾಮನವಮಿ ಸಂದರ್ಭ). ಎರಡನೆಯದು ಆಶ್ವಯುಜ ಮಾಸದಲ್ಲಿ ಬರುವ ನವಮಿ. ಈ ನವಮಿಗೆ ನವರಾತ್ರಿ ಎಂಬ ಹೆಸರು ಜನಜನಿತವಾಗಿದೆ (ಶರನ್ನವರಾತ್ರಿ). ಈ ನವರಾತ್ರಿ ಆಚರಣೆಯನ್ನು ಸಾಮಾನ್ಯವಾಗಿ ಹಿಂದೂ ಸಮುದಾಯದವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಆಚರಿಸುತ್ತಾರೆ. ಅದರಂತೆ ಹಿಂದೂ ಸಾಮ್ರಾಜ್ಯಗಳು, ರಾಜರು ಇದನ್ನು ಹಿಂದಿನಿಂದಲೂ ಆಚರಿಸುತ್ತ ಬಂದಿದ್ದಾರೆ. ವಿಜಯನಗರದರಸುಗಳ ಕಾಲದಲ್ಲಿ ಈ ಹಬ್ಬಕ್ಕೆ ಮಹಾನವಮಿ ಎಂಬ ಹೆಸರೂ ಹೆಚ್ಚಾಗಿ ಬಂದಿತು ಮತ್ತು ಅತ್ಯಂತ ವಿಜೃಂಭಣೆಯಿಂದ ಆ ಕಾಲದಲ್ಲಿ ಆಚರಿಸಲ್ಪಡುತ್ತಿತ್ತು. ವಾಸ್ತವವಾಗಿ, ಇದು ಒಂಬತ್ತು ದಿನಗಳ ಹಬ್ಬ. ಹತ್ತನೆಯ ದಿನದ ದಶಮಿ ಅಥವಾ ವಿಜಯದಶಮಿ ಆಚರಣೆ ವಿಜಯನಗರದರಸುಗಳು ಶತ್ರುಗಳ ಮೇಲೆ ದಗ್ವಿಜಯಕ್ಕೆ ಹೊರಡುತ್ತಿದ್ದ ಕಾಲದಿಂದ ಪ್ರಚಾರಕ್ಕೆ ಬಂದಿತು. ಹತ್ತೊಂಬತ್ತನೆಯ ಶತಮಾದ ಕೊನೆಯಲ್ಲಿ ಮೈಸೂರು ಅರಸರು ವಿಜಯದಶಮಿಯನ್ನು ತಮ್ಮ ರಾಜವೈಭವದ ಮೆರವಣಿಗೆಯನ್ನಾಗಿ ಪರಿವರ್ತಿಸಿಕೊಂಡರು (ಅದೇ ಇಂದಿನ ದಸರಾ). ನವಮಿಯ ದಿನ ಅವರು ತಮ್ಮ ಸಾಮಂತರು, ಮಾಂಡಳೀಕರು, ಪಾಳೆಗಾರರು ಈ

ಮುಂತಾದವರಿಂದ ಕೊಡುಗೆಗಳನ್ನು ಸ್ವೀಕರಿಸಿ (ಸೈನಿಕರು ಮತ್ತು ನಗನಾಣ್ಯ) ಆನಂತರ ಶತ್ರು ರಾಜರುಗಳ ಮೇಲೆ ಯುದ್ಧಕ್ಕೆ ಹೋಗುತ್ತಿದ್ದರು. ಈ ದಿಗ್ವಿಜಯದ ಸೂಚಕವಾಗಿ ಹತ್ತನೆಯ ದಿನದ ಆಚರಣೆ ಜಾರಿಗೆ ಬಂದಿತು. ಇದು ಶ್ರೀರಂಗಪಟ್ಟಣದಲ್ಲಿ ರಾಜಒಡೆಯರು, ಕಂಠೀರವ ನರಸಿಂಹರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ಮುಂತಾದವರ ಕಾಲದಲ್ಲಿ ಯಶಸ್ಸಿನಿಂದಲೇ ಮುಂದುವರಿಯಿತು. ಶ್ರೀರಂಗಪಟ್ಟಣದಿಂದ ಮೈಸೂರು ಸಂಸ್ಥಾನದ ರಾಜಧಾನಿಯು ಮೈಸೂರಿಗೆ ಸ್ಥಳಾಂತರಿಸಿದ ಮೇಲೆ ರೂಪಾಂತರ ಗೊಂಡ ನವರಾತ್ರಿ ಹಬ್ಬ (1805ರಿಂದ) ಮುಂದುವರೆಯಿತು. ಹತ್ತನೆಯ ದಿವಸದ ವಿಜಯದಶಮಿ ಆಚರಣೆ ನೆಪಮಾತ್ರಕ್ಕೆ ನಡೆದು ಬನ್ನಿಪೂಜೆಗೆ ಸೀಮಿತವಾಯಿತು (ಹೀಗೆ ಹತ್ತು ದಿನಗಳ ಹಬ್ಬಕ್ಕೆ 19ನೆಯ ಶತಮಾನದ ಕೊನೆಯಲ್ಲಿ ದಶ+ಹರ=ಹತ್ತು+ದಿವಸ=ದುಶೇರ=ದಶರ=ದಸರ ಎಂದು ಹೆಸರಾಗಿದೆ).

ಇದೆಲ್ಲದರ ತಥ್ಯವೆಂದರೆ :

1. ಮೈಸೂರು ದಸರಾ ಹಬ್ಬಕ್ಕೂ ಮಹಿಷಾಸುರಮರ್ದಿನಿಯಾದ ಚಾಮುಂಡೇಶ್ವರಿಗೂ ತಳುಕುಹಾಕುವುದು ಸರಿಯಾದ ಕ್ರಮವಲ್ಲ.
2. ಮಹಿಷಾಸುರಮರ್ದಿನಿಯಾದ ಚಾಮುಂಡೇಶ್ವರಿಯು ಮೈಸೂರು ರಾಜಮನೆತನಕ್ಕೆ ಪ್ರಧಾನವಾಗಿ ದೇವತೆಯೇ ಹೊರತು ಈಗ ಚಾಲ್ತಿಯಲ್ಲಿರುವಂತೆ ನಾಡದೇವತೆ ಆಗಲಾರಳು. ಮತ್ತು ಗ್ರಾಮದೇವತೆಯೂ ಅಲ್ಲ.
3. ಮಹಿಷಾಸುರನ ಕಥೆಗೂ ಚಾಮುಂಡಿ ಬೆಟ್ಟಕ್ಕೂ ಯಾವುದೇ ಸಂಬಂಧವಿಲ್ಲ ಮತ್ತು ಮಹಿಷನು ಮೂಲಭೂತವಾಗಿ ಒಬ್ಬ ಬುಡಕಟ್ಟಿನ ನಾಯಕ.
4. ಮೈಸೂರು ಎಂಬ ಪದ ಮಹಿಷನಾಡು ಅಂದರೆ ಎಮ್ಮೆಗಳ ನಾಡು ಎಂದೇ ವ್ಯುತ್ಪತ್ತಿ ಆಗುತ್ತದೆ. ಹಾಗೆಂದು ಕೀಳರಿಮೆಯೇನು ಬೇಕಿಲ್ಲ. ಎಮ್ಮೆ, ಕೋಣ ಕೂಡ ಮನುಷ್ಯನ ದಿನನಿತ್ಯದ ಬದುಕಿಗೆ ಆಕಳಿನಷ್ಟೇ ಉಪಕಾರಿಯಾದುದು.
5. ಮಾಹಿಷ್ಮತಿ ಎಂಬ ಹೆಸರಿನ ಒಂದು ತೀರ್ಥಕ್ಷೇತ್ರ ಯಾ ಪಟ್ಟಣ ಮಧ್ಯಪ್ರದೇಶದ ಇಂದೂರಿನ ಬಳಿಯಲ್ಲಿದೆ. ಇಂದೂರಿನಿಂದ ಅಂದಾಜು 7 ಕಿ.ಮೀ ಅಂತರದಲ್ಲಿರುವ ಇದು ನರ್ಮದಾ

ನದಿಯ ಬಳಿ ಇದೆ. ಪೌರಾಣಿಕ ಹಿನ್ನೆಲೆಯ ಪ್ರಕಾರ ಸಹಸ್ರಬಾಹು ಎಂಬ ಅರಸನ ರಾಜಧಾನಿಯಾಗಿತ್ತು. ಇನ್ನೊಂದು ಮೂಲದ ಪ್ರಕಾರ ಮಹಿಷ್ಮಾನನೆಂಬ ಅರಸನು ಇದನ್ನು ಸ್ಥಾಪಿಸಿದನು (ಇದಕ್ಕೆ ಪಾಠಾಂತರವಿದೆ). ಈ ಸ್ಥಳದ ಉಲ್ಲೇಖವನ್ನು ವಾಲ್ಮೀಕಿಯ ರಾಮಾಯಣದಲ್ಲೂ ಕಾಣಬಹುದು.

6. ಮಹಿಷಾಸುರನ ಹೆಸರಿನಲ್ಲಿ ದಸರೆ ಆಚರಿಸುವುದು ಸಮಂಜಸವಾಗಲಾರದು. ಯಾಕೆಂದರೆ ಮಹಿಷಾಸುರನಿಗೂ ಮೈಸೂರಿಗೂ ಯಾವುದೇ ಸಂಬಂಧವಿಲ್ಲ. ಈಗಿರುವ ಕಥೆಗಳು, ದಂತಕಥೆಗಳು, ಐತಿಹ್ಯಗಳು ಕೇವಲ ಕಪೋಲಕಲ್ಪಿತ. ಆದರೆ, ಒಬ್ಬ ಬುಡಕಟ್ಟಿನ ನಾಯಕನೆಂದು ಹೇಳಲಾದ ಆರ್ಯೇತರ ಮಹಿಷನನ್ನು ಗುರುತಿಸಿ, ಗೌರವಿಸುವ ಕೆಲಸವನ್ನು ಮಾಡಬಹುದು. ಅದಕ್ಕೆ ಯಾವುದೇ ಕಾಲಮಿತಿಯಿಲ್ಲ.

7. 1967 ಮತ್ತು 68ನೆಯ ಇಸವಿಗಳಲ್ಲಿ ಮೈಸೂರಿನ ಸಮಾಜವಾದಿ ಯುವಜನ ಸಭಾ ಸದಸ್ಯರು ಹಾಗೂ ಮತ್ತಿತರರು ರಾಜವೈಭೋಗದ ಅಂದಿನ ದಸರಾ ಮೆರವಣಿಗೆಯನ್ನು ವಿರೋಧಿಸಿ ಕೆಲವರು ಬಂಧನಕ್ಕೆ ಒಳಗಾದದ್ದು ನೆನಪಿಡಬೇಕಾದ ಸಂಗತಿ. ಪ್ರಜಾಸತ್ತೆಯ ಕಾಲದಲ್ಲಿ ರಾಜಸತ್ತೆಯ ಪ್ರತೀಕವಾದ ರಾಜರ ಮೆರವಣಿಗೆ ಇರಬಾರದು ಎಂಬುದು ಆ ಸದಸ್ಯರ ಒತ್ತಾಯವಾಗಿತ್ತು. ಆ ಹೊತ್ತಿನಲ್ಲಿ ಮೈಸೂರಿನ ಪಳೆಯುಳಿಕೆಯ ರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರ ಮೆರವಣಿಗೆಗೆ ಕಪ್ಪುಬಾವುಟ ಹಿಡಿದಿದ್ದು ಒಂದು ಐತಿಹಾಸಿಕ ಘಟನೆ. ಅವರೆಲ್ಲರ ಆಶಯ ಊಳಿಗಮಾನ್ಯ ವ್ಯವಸ್ಥೆಯ ಹಾಗೂ ರಾಜಸತ್ತೆಯ ದಸರೆಯನ್ನು ವಿರೋಧಿಸುವುದೇ ಆಗಿತ್ತು.

8. ಮೈಸೂರು ದಸರಾವನ್ನು 'ನಾಡಹಬ್ಬ ದಸರಾ' ಎಂಬ ಹೆಸರಿನಿಂದ ರಾಜ್ಯ ಸರ್ಕಾರ ಆಚರಿಸುತ್ತ ಬಂದಿರುವುದು 1971ರಿಂದ. ಕರ್ನಾಟಕದ ಏಕೀಕರಣದ ಮುಂಚೆ ಹೊರಪ್ರದೇಶಗಳಲ್ಲಿದ್ದ ಕನ್ನಡಿಗರು ನವರಾತ್ರಿ ಹಬ್ಬವನ್ನು ಈ ಹೆಸರಿನಿಂದ ಆಚರಿಸುತ್ತಿದ್ದರು. ಉದಾ: ಧಾರವಾಡ, ಬೊಂಬಾಯಿ, ಪುಣೆ, ಹೈದ್ರಾಬಾದ್, ಸೊಲ್ಲಾಪುರ ಇತ್ಯಾದಿ ಪ್ರದೇಶಗಳಲ್ಲಿ. ಈ ಪದದ ಲಿಖಿತರೂಪ ನಮಗೆ ಪ್ರಥಮವಾಗಿ ಕಂಡುಬರುವುದು ಹಿರಿಯ ಲೇಖಕರಾದ

ದಿ. ಬೆಟಗೇರಿ ಕೃಷ್ಣಶರ್ಮರ–1925ರ ಒಂದು ಲೇಖನದಲ್ಲಿ.

ಕೊನೆಯದಾಗಿ ಭಾವನಾತ್ಮಕವಾದ ಆಚರಣೆಯ ಈ ಗದ್ದಲಗೋಜಲುಗಳ ನಡುವೆ ಜನರ ನೈಜವಾದ ಸಮಸ್ಯೆಗಳನ್ನು, ಆರ್ಥಿಕ ಸಮಸ್ಯೆಗಳನ್ನು ಮರೆಮಾಚಲಾಗುತ್ತಿರುವುದು ವಾಸ್ತವಿಕದ ವಿರೋಧಾಭಾಸ. ಇಂಥ ಭಿನ್ನಾಭಿಪ್ರಾಯಗಳು ಇದ್ದಷ್ಟೂ ಬಂಡವಾಳಶಾಹೀ ವ್ಯವಸ್ಥೆಗೆ ಪೂರಕ, ಬಡವರಾದವರಿಗೆ ಮತ್ತು ನಿರುದ್ಯೋಗಿಗಳಿಗೆ ಮಾರಕ.

□

ಹಾಲ ಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ ?
ಲಿಂಗದ ಪಾದತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇತಕ್ಕೆ ?
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ
ತಡೆಯದೆ ಹುಟ್ಟಿಸುವನು ಶ್ವಾನನ ಗರ್ಭದಲ್ಲಿ
ಅದೆಂತೆಂದಡೆ; ಶಿವಧರ್ಮಪುರಾಣದಲ್ಲಿ–
"ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗಸ್ಯ ಪೂಜಕಃ |
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್ |" ಎಂದುದಾಗಿ,
ಇದನರಿದು ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲಾ ತೀರ್ಥಂಗಳೂ
ಎಲ್ಲ ಕ್ಷೇತ್ರಂಗಳೂ ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯಾ.
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದು ಮಾಡಿ,
ತೀರ್ಥಲಿಂಗವ ಹಿರಿದು ಮಾಡಿ ಹೋಹಾತಂಗೆ
ಅಘೋರ ನರಕ ತಪ್ಪದು ಕಾಣಾ, ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

## ವಾರ್ತಾವಿಹಾರ

### ಪದ್ಮಶ್ರೀ ಡಾ. ಮಂಜುನಾಥ್‌ರವರಿಗೆ ಪೌರ ಸನ್ಮಾನ

ದಿನಾಂಕ 23.9.2018 ರಂದು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ರಾದ ಪದ್ಮಶ್ರೀ ಡಾ. ಮಂಜುನಾಥ್‌ರವರ ಪೌರ ಸನ್ಮಾನ ಸಮಾರಂಭವು ನೆರವೇರಿತು.

ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಜಯದೇವ ಹೃದ್ರೋಗ ಸಂಸ್ಥೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದುಕೊಂಡಿದೆ. ಈ ಯಶಸ್ಸಿನ ಹಿಂದೆ ಸಂಸ್ಥೆಯ ನಿರ್ದೇಶಕರಾದ ಪದ್ಮಶ್ರೀ ಡಾ. ಮಂಜುನಾಥ್‌ರವರ ಅಪಾರ ಪರಿಶ್ರಮ, ನಿಃಸ್ವಾರ್ಥ ಸೇವಾಮನೋಭಾವ ಹಾಗೂ ಜನಪರ ಕಾಳಜಿಗಳು ಇವೆ ಎಂದು ಪರಮಪೂಜ್ಯ ಜಗದ್ಗುರುಗಳು ಅವರನ್ನು ಸನ್ಮಾನಿಸಿ ಶ್ಲಾಘಿಸಿದರು.

ಮಾಜಿ ಪ್ರಧಾನಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಡಾ. ಸದಾನಂದ್‌ರವರ 'ಮ್ಯಾನ್ ವಿತ್ ಎ ಗೋಲ್ಡನ್ ಹಾರ್ಟ್' ಕೃತಿ ಬಿಡುಗಡೆ ಮಾಡಿ, ಜಯದೇವ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಮಂಜುನಾಥ್‌ರವರ ಕಾರ್ಯತತ್ಪರತೆ ದೊಡ್ಡದು. ಇವರು ದಾನಿಗಳಿಂದ ಹಣವನ್ನು ಸಂಗ್ರಹಿಸಿ ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಡ್ಡಿಯ ಮೂಲಕ ಬಡವರಿಗೆ ಉಚಿತವಾಗಿ ಚಿಕಿತ್ಸೆ ನೀಡಲು ತೊಡಗಿರುವುದು ಹೆಮ್ಮೆಯ ಸಂಗತಿ ಎಂದು ಅಭಿನಂದಿಸಿದರು.

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ.ಎಸ್. ರವೀಂದ್ರನಾಥ್ ಜಯದೇವ ಹೃದ್ರೋಗ ಘಟಕದಲ್ಲಿ ಪಾರದರ್ಶಕ ಆಡಳಿತ, ಅಧಿಕಾರ ಕೇಂದ್ರೀಕರಣ ವ್ಯವಸ್ಥೆ, ಕೆಲಸ ನಿರ್ವಹಿಸಲು ಪೂರಕ ವಾತಾವರಣ ಕಲ್ಪಿಸಿರುವುದರಿಂದ ಅಲ್ಲಿನ ಸಿಬ್ಬಂದಿ ಕೆಲಸ ಬಿಟ್ಟು ಹೋಗುವುದಿಲ್ಲ. ಡಾ. ಮಂಜುನಾಥ್‌ರವರ ಈ ಬಗೆಯ ಪ್ರಯತ್ನಶೀಲತೆಯೇ ಆಸ್ಪತ್ರೆಯ ಯಶಸ್ಸಿಗೆ ಕಾರಣವಾಗಿದೆ ಎಂದು ತಮ್ಮ ಅಭಿನಂದನಾ ಭಾಷಣದಲ್ಲಿ ತಿಳಿಸಿದರು.

ರಾಜಮಾತೆ ಡಾ. ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅಭಿನಂದನಾ ಗ್ರಂಥ 'ದವನ' ಕೃತಿಯನ್ನು ಬಿಡುಗಡೆಗೊಳಿಸಿದರು. ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ. ಎಸ್.ಪಿ. ಯೋಗಣ್ಣ, ಸಾಹಿತಿಗಳಾದ ಡಾ. ಸಿಪಿಕೆ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ.ಎಸ್. ರಂಗಪ್ಪ ಮುಂತಾದವರು ಉಪಸ್ಥಿತರಿದ್ದರು.

**ಮೈಸೂರು ಮಹಾನಗರಪಾಲಿಕೆಯ ನೂತನ ಸದಸ್ಯರಿಗೆ ಸನ್ಮಾನ**

ದಿನಾಂಕ 26.9.2018 ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮೈಸೂರು ನಗರ ಪಾಲಿಕೆಗೆ ನೂತನವಾಗಿ ಆಯ್ಕೆಯಾದ ಸದಸ್ಯರನ್ನು ಸನ್ಮಾನಿಸಲಾಯಿತು.

ಪರಮಪೂಜ್ಯ ಜಗದ್ಗುರುಗಳು ಮೈಸೂರು ಮಹಾನಗರ ಪಾಲಿಕೆಗೆ ಆಯ್ಕೆಯಾದ 65 ಜನ ಸದಸ್ಯರನ್ನು ಸನ್ಮಾನಿಸಿ, ನಗರದ ಅಭಿವೃದ್ಧಿಯಲ್ಲಿ ರಾಜಕೀಯ ಹಸ್ತಕ್ಷೇಪ ವನ್ನು ಮಾಡದೆ ಸೇವಾ ಮನೋಭಾವನೆಯಿಂದ ಕೆಲಸ ಮಾಡಬೇಕಾದ ಹೊಣೆಗಾರಿಕೆ ತಮ್ಮ ಮೇಲಿದೆ. ವಿಶ್ವಪರಂಪರೆಯ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮೈಸೂರಿನ ಘನತೆಯನ್ನು ಕಾಪಾಡಬೇಕಾದ ಜವಾಬ್ದಾರಿಯು ಅದಕ್ಕಿಂತ ಹೆಚ್ಚಿನದಾಗಿದೆ ಎಂದು ಹೇಳಿ ಎಲ್ಲರಿಗೂ ಶುಭ ಕೋರಿದರು.

ಮಾಜಿ ಶಾಸಕರಾದ ಶ್ರೀ ವಾಸುರವರು ಮೈಸೂರು ಮಹಾನಗರ ಪಾಲಿಕೆ ದೇಶದ ಗೌರವಾನ್ವಿತ ಪಾಲಿಕೆಗಳಲ್ಲಿ ಸ್ಥಾನ ಪಡೆದಿದೆ. ಈ ಹಿಂದಿನ ಸದಸ್ಯರು ರೂಢಿಸಿಕೊಂಡಿದ್ದ ಉತ್ತಮ ಸೇವಾಮನೋಭಾವನೆಗಳನ್ನು ನೀವೂ ರೂಢಿಸಿಕೊಂಡು ಅನುಸರಿಸಬೇಕಾದ ಅಗತ್ಯವಿದೆ. ಪಾಲಿಕೆ ಸದಸ್ಯರಾದವರು ನಗರದ ಸಮಸ್ಯೆಯನ್ನು ತೀರ ಹತ್ತಿರದಿಂದ ಬಲ್ಲವರಾಗಿರುತ್ತಾರೆ. ಹಾಗಾಗಿ ನಗರದ ಸ್ವಚ್ಛತೆ, ಕುಡಿಯುವ ನೀರಿನ ಪೂರೈಕೆ ಮೊದಲಾದ ಮೂಲಭೂತ ಸೌಕರ್ಯಗಳ ಬಗ್ಗೆ ಹೆಚ್ಚು ಗಮನ ಕೊಡಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್‌ಗಳಾದ ಶ್ರೀ ಪಿ. ವಿಶ್ವನಾಥ್, ಶ್ರೀ ಬಿ.ಕೆ. ಪ್ರಕಾಶ್, ಶ್ರೀ ಎಚ್.ಎಲ್. ಶ್ರೀಕಂಠಯ್ಯ, ಶ್ರೀ ಆರ್. ಲಿಂಗಪ್ಪ ಮೊದಲಾದವರು ಉಪಸ್ಥಿತರಿದ್ದರು.

**ವೀರಶೈವ ಸಜ್ಜನ ಸಂಘದ ಅಮೃತ ಮಹೋತ್ಸವ ಸಮಾರಂಭ**

ದಿನಾಂಕ 30.9.2018 ರಂದು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮೈಸೂರಿನ ವೀರಶೈವ ಸಜ್ಜನ ಸಂಘದ ಅಮೃತ ಮಹೋತ್ಸವ ಸಮಾರಂಭವು ನೆರವೇರಿತು.

ಸಂಘಸಂಸ್ಥೆಗಳು ಯಾವುದೇ ರೀತಿಯ ಆಂತರಿಕ ಸಂಘರ್ಷಗಳಿಗೆ ಅವಕಾಶ ಕೊಡದೆ ಸುದೀರ್ಘಕಾಲ ಸಮಾಜಸೇವೆಯ ಮೂಲಕ ಅಸ್ತಿತ್ವದಲ್ಲಿರುವುದು ಅಪರೂಪದ ಸಂಗತಿ. ಇದಕ್ಕೆ ನಿದರ್ಶನ ಎಂಬಂತೆ ನಮ್ಮ ವೀರಶೈವ ಸಜ್ಜನ ಸಂಘವು 75 ವರ್ಷಗಳನ್ನು ಪೂರೈಸಿರುವುದು ಸಂತೋಷದಾಯಕವಾಗಿದೆ. ಸಮಾಜಬಾಂಧವರ ಶ್ರೇಯೋಭಿವೃದ್ಧಿಗೆ ಕಾರಣವಾಗಿರುವ ಈ ಸಂಘದ ಸುವರ್ಣ ಮಹೋತ್ಸವ ಸಮಾರಂಭದಲ್ಲಿಯೂ ತಾವು

ಭಾಗವಹಿಸಿದ್ದು, ಶತಮಾನೋತ್ಸವ ಸಂಭ್ರಮವನ್ನು ಸಂಘ ಆಚರಿಸುವಂತಾಗಲಿ ಎಂದು ಪರಮಪೂಜ್ಯ ಜಗದ್ಗುರುಗಳು ಶುಭ ಹಾರೈಸಿದರು.

ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಎ.ಎಸ್. ಕಿರಣ್ ಕುಮಾರ್‌ರವರು ಸಮಾರಂಭವನ್ನು ಉದ್ಘಾಟಿಸಿ ಸಂಘಸಂಸ್ಥೆಗಳು ಒಟ್ಟಾಗಿ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಿದರೆ, ತಮ್ಮ ತಮ್ಮ ಸಮಾಜಬಾಂಧವರನ್ನು ಮತ್ತಷ್ಟು ಪ್ರಗತಿಯತ್ತ ಕೊಂಡೊಯ್ಯಬಹುದು ಎಂದು ತಿಳಿಸಿದರು.

ಮಾಜಿ ಸಚಿವರಾದ ಡಾ. ಎಂ.ಸಿ. ಮೋಹನ್ ಕುಮಾರಿ, ಸಂಘದ ಅಧ್ಯಕ್ಷರಾದ ಶ್ರೀ ಎಂ.ಎನ್. ಜಯಪ್ರಕಾಶ್ ಮುಂತಾದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ಡಾ. ಸಿ. ಸೋಮಶೇಖರ್ ಮತ್ತು ಎನ್. ಸರ್ವಮಂಗಳ ಸಾಹಿತ್ಯ ಪ್ರತಿಷ್ಠಾನದ 'ಸಂಸ್ಕೃತಿ ಸಂಗಮ' ಪ್ರಶಸ್ತಿ ಪ್ರದಾನ ಸಮಾರಂಭ**

ದಿನಾಂಕ 13.10.2018 ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಡಾ. ಸಿ. ಸೋಮಶೇಖರ್ ಮತ್ತು ಎನ್. ಸರ್ವಮಂಗಳ ಸಾಹಿತ್ಯ ಪ್ರತಿಷ್ಠಾನದ 'ಸಂಸ್ಕೃತಿ ಸಂಗಮ' ಪ್ರಶಸ್ತಿ ಪ್ರದಾನ ಸಮಾರಂಭವು ನೆರವೇರಿತು.

ಶಾಂತಿ ಸೌಹಾರ್ದತೆಯ ನೆಲೆವೀಡಾಗಿರುವ ಕರ್ನಾಟಕವು ಸಂಪದ್ಭರಿತ ಪ್ರಕೃತಿ ಸಂಪನ್ಮೂಲವನ್ನು ಹೊಂದಿದೆ. ಹಾಗೆಯೇ ಸ್ನೇಹ, ಸೌಹಾರ್ದತೆ, ಸಾಮರಸ್ಯ ಮೊದಲಾದ ಭಾವಗಳಿಂದ ವಿಶ್ವಕ್ಕೆ ಮಾದರಿಯಾಗಿದೆ. ಸಾತ್ವಿಕ ಕಲೆ, ಸಾಹಿತ್ಯ, ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧಕರು ಇರುವುದನ್ನು ನಾಡಿನ ಸಹೃದಯರು ಗುರುತಿಸಿ ಗೌರವಿಸುವುದರ ಮೂಲಕ ನಮ್ಮ ಶ್ರೀಮಂತ ಪರಂಪರೆಯನ್ನು ಪ್ರೋತ್ಸಾಹಿಸ ಬೇಕಿದೆ. ನಿಜವಾದ ಮನಃಶಾಂತಿಯನ್ನು ಕೊಡುವ ಗುಣ ಭಾರತೀಯ ಸಂಗೀತ ಮತ್ತು ಕಲಾ ಸಂಸ್ಕೃತಿ ಪರಂಪರೆಗಳಿಗಿವೆ. ಹಾಗಾಗಿ ನಾವು ನಮ್ಮ ದೇಶದ ಕಲೆ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಸಂರಕ್ಷಿಸುವುದರ ಮೂಲಕ ಅವುಗಳನ್ನು ಸಮೃದ್ಧಗೊಳಿಸುವ ಕೆಲಸವನ್ನು ಮಾಡಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಪ್ರಶಸ್ತಿ ಪ್ರದಾನ ಮಾಡಿದ ಕೇಂದ್ರದ ಮಾಜಿ ಸಚಿವರಾದ ಶ್ರೀ ಎಂ.ವಿ. ರಾಜಶೇಖರನ್‌ರವರು ಇಂದು ದೇಶದಲ್ಲಿ ನಡೆಯುತ್ತಿರುವ ಕೆಲವು ಘಟನೆಗಳು ಭಯಾನಕವೆನಿಸುತ್ತವೆ. ಇವುಗಳ ನಡುವೆ ನಮ್ಮದೇ ಆದ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸೌಹಾರ್ದತೆ ಕಾಪಾಡಿಕೊಳ್ಳುವ ಸಂದರ್ಭಗಳನ್ನು ನೋಡಿದಾಗ ನಿಜಕ್ಕೂ ಸಂತಸವೆನಿಸುತ್ತದೆ. ಜೀವನದಲ್ಲಿ ಸಾಮಾಜಿಕ ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ಸೇವೆ ಮಾಡಬೇಕಾಗಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಗಳನ್ನು ಅರಿತು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಸಮಸ್ಯೆಗಳು ಉದ್ಭವಿಸುವುದಿಲ್ಲ. ಪೋಷಕರು, ತಮ್ಮ ಮಕ್ಕಳು ಉನ್ನತ ಅಧಿಕಾರಿಗಳಾಗಲಿ ಮತ್ತು ಶ್ರೀಮಂತರಾಗಲಿ ಎಂದು ಬಯಸುತ್ತಾರೆ. ಆದರೆ ನೈತಿಕ ಮೌಲ್ಯಗಳನ್ನು ಬೆಳೆಸುವುದಿಲ್ಲ. ಹೀಗಾಗಿ ಇಂದು ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳು ಹೆಚ್ಚುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ವಚನಸಾಹಿತ್ಯಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ. ವೀರಣ್ಣ ರಾಜೂರ, ಜಾನಪದ ಕ್ಷೇತ್ರದ ವಿದ್ವಾಂಸರಾದ ಡಾ. ಪಿ.ಕೆ. ರಾಜಶೇಖರ್, ಹರಿದಾಸ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದ ಸಾಧಕರಾದ ಡಾ. ವಿದ್ಯಾಭೂಷಣ್ ಮತ್ತು ಹಿಂದೂಸ್ತಾನಿ ಗಾಯಕರಾದ ಪದ್ಮಶ್ರೀ ಡಾ. ಎಂ. ವೆಂಕಟೇಶ್‌ಕುಮಾರ್ ಇವರಿಗೆ ಸಂಸ್ಕೃತಿ ಸಂಗಮ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಾಡೋಜ ಡಾ. ಚಂದ್ರಶೇಖರ ಕಂಬಾರ್, ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಶ್ರೀಮತಿ ಶೈಲಜಾ ವಿ. ಸೋಮಣ್ಣ ಮೊದಲಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ 9ನೇ ಘಟಿಕೋತ್ಸವ ಸಮಾರಂಭ**

ದಿನಾಂಕ 17.10.2018 ರಂದು ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ 9ನೇ ಘಟಿಕೋತ್ಸವ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಕುಲಾಧಿಪತಿಗಳಾದ ಪರಮಪೂಜ್ಯ ಜಗದ್ಗುರುಗಳು 1779 ವೈದ್ಯಕೀಯ ಪದವೀಧರ ವಿದ್ಯಾರ್ಥಿಗಳಿಗೆ ನಮ್ಮ ದೇಶದ ಸಂವಿಧಾನ ಮತ್ತು ಸಾಮಾಜಿಕ ಹೊಣೆಗಾರಿಕೆಗೆ ಬದ್ಧರಾಗಿರಬೇಕಾದ ಅಗತ್ಯತೆಗಳನ್ನು ಕುರಿತಂತೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಪದವಿ ಪ್ರಮಾಣಪತ್ರಗಳನ್ನು ಪ್ರದಾನ ಮಾಡಿದ ಇನ್‌ಫೋಸಿಸ್ ಫೌಂಡೇಷನ್ನಿನ ಅಧ್ಯಕ್ಷರಾದ ಡಾ. ಸುಧಾಮೂರ್ತಿಯವರು ಇಂದು ವೈದ್ಯವೃತ್ತಿಯಲ್ಲಿ ತೊಡಗಿಕೊಳ್ಳುವವರು ನಿರಂತರ ಕಲಿಕೆಯ ಜೊತೆಗೆ ಮಾನವೀಯ ಮೌಲ್ಯದ ಹೃದಯಸ್ಪರ್ಶಿ ಅಂತಃಕರಣವನ್ನು ಮೈಗೂಡಿಸಿಕೊಂಡು ರೋಗಿಗಳ ಸೇವೆ ಮಾಡಲು ಮುಂದಾಗಬೇಕಿದೆ, ಈ ವೃತ್ತಿ ಅತ್ಯಂತ ಮುಖ್ಯ ಹಾಗೂ ಕಠಿಣವಾದ ಸವಾಲುಗಳಿಂದ ಕೂಡಿದೆ. ವೈದ್ಯರಿಗೆ ಜೀವ ಉಳಿಸುವ ಹಕ್ಕಿದೆಯೇ ಹೊರತು ತೆಗೆಯುವ ಹಕ್ಕಿಲ್ಲ.

ಹಾಗೆಯೇ ವೈದ್ಯರಾದವರು ಜಾತಿ ಧರ್ಮಕ್ಕೆ ಆದ್ಯತೆ ನೀಡದೆ ವೃತ್ತಿಯಲ್ಲಿ ಪಾರದರ್ಶಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಕಾರ್ಯ ನಿರ್ವಹಿಸಬೇಕಿದೆ ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ 35 ವಿದ್ಯಾರ್ಥಿಗಳು ಪಿಎಚ್‌ಡಿ ಪದವಿ ಸ್ವೀಕರಿಸಿದರು. ವಿಶೇಷ ಸಾಧನೆ ಮಾಡಿದ 41 ವಿದ್ಯಾರ್ಥಿಗಳಿಗೆ ಒಟ್ಟು 65 ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಕು. ಅತಿರಾ ಜಿ. ದಾಸ್ 7 ಚಿನ್ನದ ಪದಕಗಳನ್ನು ಪಡೆದು ಅತಿ ಹೆಚ್ಚು ಪದಕ ವಿಜೇತರು ಎಂಬ ಗೌರವಕ್ಕೆ ಪಾತ್ರರಾದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ಕುಲಪತಿ ಡಾ. ಸುರೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರುಮಠ, ಕುಲಸಚಿವರಾದ ಡಾ. ಮಂಜುನಾಥ್, ಪರೀಕ್ಷಾ ಮಂಡಳಿ ನಿಯಂತ್ರಣಾಧಿಕಾರಿಗಳಾದ ಡಾ. ಆರ್. ಸುಧೀಂದ್ರ ಭಟ್, ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಬಸವನಗೌಡಪ್ಪ, ಡಾ. ಎಸ್. ಬಾಲಸುಬ್ರಮಣಿಯನ್, ಡಾ. ಎಸ್. ರವೀಂದ್ರ, ಡಾ. ಎಸ್.ಪಿ. ಧನಬಾಲ್, ಡಾ. ಎಂ.ಎನ್. ಸುಮಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

### ದ್ವಾದಶ ಜ್ಯೋತಿರ್ಲಿಂಗ ದೇವಾಲಯ ಉದ್ಘಾಟನಾ ಸಮಾರಂಭ

ದಿನಾಂಕ 29.10.2018ರಂದು ಮೈಸೂರಿನ ಶ್ರೀರಾಂಪುರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ದ್ವಾದಶ ಜ್ಯೋತಿರ್ಲಿಂಗ ದೇವಾಲಯ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಇಂದು ಇಡೀ ಜಗತ್ತು ಭಾರತದತ್ತ ನೋಡುತ್ತಿದೆ. ಇದಕ್ಕೆ ಮುಖ್ಯ ಕಾರಣ ಭಾರತದಲ್ಲಿರುವ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಂಪತ್ತು. ನಮ್ಮಲ್ಲಿ ಭಗವಂತನ ಧ್ಯಾನದ ಮೂಲಕ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಪ್ರಯತ್ನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹೀಗಾಗಿ ಈ ಸಂಸ್ಕಾರದ ಅಪೇಕ್ಷೆಯಿಂದ ಇತರ ದೇಶಿಗರು ಆಕರ್ಷಿತರಾಗುತ್ತಿದ್ದಾರೆ. ಈ ದ್ವಾದಶ ಜ್ಯೋತಿರ್ಲಿಂಗ ದೇಗುಲವನ್ನು ಜೈನಧರ್ಮೀಯರಾದ ಶ್ರೀ ವಿಶಾಲೇಂದ್ರವರು ನಿರ್ಮಿಸಿದ್ದಾರೆ. ನಂಜನಗೂಡಿನ ಶ್ರೀಕಂಠೇಶ್ವರನ ಪರಮ ಭಕ್ತರಾಗಿರುವ ಇವರ ಶಿವಭಕ್ತಿ ಮೆಚ್ಚುವಂತಹುದಾಗಿದೆ. ಜೊತೆಗೆ ಈ ದೇವಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ವೈಷ್ಣವರಾದ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಇವರ ಮಾರ್ಗದರ್ಶನವಿದೆ. ಹಾಗಾಗಿ ಇಲ್ಲಿ ವೀರಶೈವ, ಜೈನ ಮತ್ತು ಶ್ರೀವೈಷ್ಣವ ಧರ್ಮಗಳ ಸಂಗಮವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಪ್ರಸ್ತಾಪಿಸಿದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್‌ರವರು ಇಂದು ಧರ್ಮದ ವಿರುದ್ಧ ಮಾತನಾಡುವವರನ್ನು ದೊಡ್ಡ ವ್ಯಕ್ತಿಗಳೆಂದು ಬಿಂಬಿಸಲಾಗುತ್ತಿದೆ. ಆದರೆ ಮುಕ್ತ ಮನಸ್ಸು ನಿಷ್ಕಲ್ಮಶವಾದ ಭಕ್ತಿಯಿಂದ ಈ ಬಗೆಯ ಧರ್ಮಸಮನ್ವಯದ ದೇಗುಲ ಗಳನ್ನು ನಿರ್ಮಿಸುವವರು ಸದಾ ಧರ್ಮಕಾರ್ಯಗಳನ್ನು ಮಾಡುತ್ತಲೇ ಇರುತ್ತಾರೆಂದರು.

ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್‌ರವರು ಆಧ್ಯಾತ್ಮಿಕತೆಯಿಂದ ನಮ್ಮ ಬದುಕನ್ನು ಬದಲಾವಣೆ ಮಾಡಿಕೊಂಡು ನಾವು ಶಾಂತಿಯಿಂದ ಬದುಕಬಹುದು. ಇಂತಹ ಅರಿವನ್ನು ಮೂಡಿಸುವಲ್ಲಿ ದೇವಸ್ಥಾನಗಳು ಸಹಕಾರಿಯಾಗಿವೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಚಂಪಕ, ಶ್ರೀ ಬಿ.ವಿ. ಮಂಜುನಾಥ್, ಶ್ರೀ ಎಂ.ಸಿ. ರಮೇಶ್, ಮಾಜಿ ಸದಸ್ಯರಾದ ಪ್ರದೀಪ್, ಜಗದೀಶ್ ಮೊದಲಾದವರು ಹಾಜರಿದ್ದರು.

**'ಬದುಕೊಂದು ಯಾತ್ರೆ' ಕೃತಿ ಬಿಡುಗಡೆ**

ದಿನಾಂಕ 30.10.2018ರಂದು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಅನನ್ಯ ಪುಸ್ತಕ ಪ್ರಕಾಶನದ ವತಿಯಿಂದ ಅಂಕಣ ಬರಹಗಾರ ಶ್ರೀ ಜಿ.ಎಲ್. ತ್ರಿಪುರಾಂತಕರವರ 'ಬದುಕೊಂದು ಯಾತ್ರೆ' ಕೃತಿ ಬಿಡುಗಡೆ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಅಂಕಣ ಸಾಹಿತ್ಯವು ವಿಶೇಷ ಗಮನ ಸೆಳೆಯುತ್ತದೆ. ಅಂದಂದಿನ ಆದ್ಯತೆಗಳಿಗೆ ತಕ್ಕಂತೆ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಸೀಮಿತ ಚೌಕಟ್ಟಿನಲ್ಲಿ ಬರೆಯಬೇಕಾದ ಸವಾಲು ಅಂಕಣಕಾರರಿಗೆ ಒಂದು ರೀತಿಯ ತೊಡಕೆಂಬಂತೆ ಇರುತ್ತದೆ. ಆದರೆ ಅದನ್ನು ಸಂತೋಷದಿಂದ ಸ್ವೀಕರಿಸಿ ಹಲವು ಬಗೆಯ ಅಧ್ಯಯನಗಳ ಮೂಲಕ ತಮ್ಮ ಲೇಖನಗಳಿಗೆ ಮೌಲಿಕತೆಯನ್ನು ತಂದುಕೊಡುವುದು ಅಂಕಣಕಾರರ ಉದ್ದೇಶವೂ ಆಗಿರಬೇಕಾಗಿರುತ್ತದೆ. ಲೇಖಕ ಶ್ರೀ ಜಿ.ಎಲ್. ತ್ರಿಪುರಾಂತಕ ರವರು 'ಮೈಸೂರು ಮಿತ್ರ' ದಿನಪತ್ರಿಕೆಗೆ ಬರೆದ ಅಂಕಣ ಬರಹಗಳಲ್ಲಿ ಪ್ರಮುಖವಾದವುಗಳನ್ನು ಆಯ್ದು ಸಮಕಾಲೀನ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗುವಂತೆ 'ಬದುಕೊಂದು ಯಾತ್ರೆ' ಎಂಬ ಕೃತಿಯನ್ನು ಹೊರ ತಂದಿರುವುದು ಅಭಿನಂದನೀಯ. ಆಧುನಿಕ ಬದುಕಿನ ಧಾವಂತದ ದಿನಮಾನಗಳಲ್ಲಿ ಮೌಲ್ಯವನ್ನು ಅರಿಯದೆ ಹತಾಶರಾಗುವ ಜನತೆಗೆ ಈ ಬಗೆಯ ಸಾಹಿತ್ಯದ ಓದು ಹೊಸ ಉತ್ಸಾಹವನ್ನು ಮೂಡಿಸಬಲ್ಲದು ಎಂದು ಪರಮಪೂಜ್ಯ ಜಗದ್ಗುರುಗಳು ಹಾರೈಸಿದರು.

ಕೃತಿ ಕುರಿತು ಮಾತನಾಡಿದ ಪ್ರೊ. ಮಲೆಯೂರು ಗುರುಸ್ವಾಮಿಯವರು ಇಂದು ಸಾಹಿತ್ಯವಲಯದಲ್ಲಿ ಎಡ ಮತ್ತು ಬಲ ಪಂಥದ ತಿಕ್ಕಾಟಗಳು ಅನೇಕ ರೀತಿಯ ಸಮಸ್ಯೆಗಳನ್ನು ಹುಟ್ಟುಹಾಕುತ್ತಿವೆ. ಇವುಗಳ ಬದಲಾಗಿ ಇಂದು ಮಾನವೀಯ ಚಿಂತನೆಗಳು ನಮಗೆ ಅತ್ಯಗತ್ಯವಾಗಿವೆ. ಇಂತಹ ಅಗತ್ಯತೆಗಳನ್ನು ಪೂರೈಸಬಲ್ಲ ಅಂಕಣ ಬರಹಗಳಿಂದ ಕೂಡಿದ, ಬದುಕೊಂದು ಯಾತ್ರೆ, ಓದುಗ ಸ್ನೇಹಿಯಾಗಿ ರೂಪುಗೊಂಡಿದೆ ಎಂದು ತಿಳಿಸಿದರು.

ಕೃತಿ ಬಿಡುಗಡೆ ಮಾಡಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಸಿ.ಕೆ. ಮಹೇಂದ್ರ ಇಂದಿನ ಆಧುನಿಕ ತಂತ್ರಜ್ಞಾನದ ದಿನಮಾನಗಳಲ್ಲಿ ಪುಸ್ತಕವು ಡಿಜಿಟಲ್ ಲೋಕಕ್ಕೆ ಪ್ರವೇಶ ಪಡೆದಿದೆ. ಆದರೂ ಮುದ್ರಿತ ಪುಸ್ತಕಗಳನ್ನು ಓದುವವರ ಸಂಖ್ಯೆಗೆ ಕೊರತೆಯೇನಿಲ್ಲ. ಆದರೆ ಓದಿಸಿಕೊಂಡು ಹೋಗುವ ಗುಣಗಳು ಕೃತಿಗಳಿಗೆ ಇರಬೇಕು. ಅಂತಹ ಗುಣವಂತಿಕೆಯ ಲೇಖನಗಳನ್ನು ಈ ಕೃತಿ ಒಳಗೊಂಡಿದೆ ಎಂದು ಮೆಚ್ಚುಗೆ ಸೂಚಿಸಿದರು.

ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಗ್ರಾಮೀಣ ಅಭಿವೃದ್ಧಿ ವಿಭಾಗದ ನಿರ್ದೇಶಕರಾದ ಡಾ. ಎಂ. ಮಹದೇವಪ್ಪ, ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪ ಮೊದಲಾದವರು ಭಾಗವಹಿಸಿದ್ದರು.

**ಜೆಎಸ್‌ಎಸ್ ಮಹಿಳಾ ಕಾಲೇಜಿನ 11ನೆಯ ಪದವೀಧರರ ದಿನಾಚರಣೆ ಸಮಾರಂಭ**

ದಿನಾಂಕ 13.11.2018 ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 11ನೆಯ ಪದವೀಧರರ ದಿನಾಚರಣೆ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಪದವಿ ಪ್ರದಾನ ಮಾಡಿದ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಡಾ. ಎನ್. ಮಂಜುಳಾರವರು ಇಂದು ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಪಡೆದುಕೊಂಡು ಮಹಿಳಾ ಸಬಲೀಕರಣಕ್ಕೆ ಕೈ ಜೋಡಿಸಬೇಕಿದೆ. ಸುಂದರ ಭವಿಷ್ಯ ಹಾಗೂ ಜೀವನ ನಿಮ್ಮ ಕಣ್ಮುಂದೆಯೇ ಇದೆ. ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಿ. ಪರಿಶ್ರಮ ಮತ್ತು ಬದ್ಧತೆಯಿದ್ದರೆ ಏನನ್ನಾದರೂ ಸಾಧಿಸಬಹುದು. ನೈತಿಕತೆ ಹಾಗೂ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ಇದೆ ಎಂದು ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಪ್ರತಿಜ್ಞಾವಿಧಿ ಬೋಧಿಸಿದರು. ಪದವಿ ವಿಭಾಗದಿಂದ 505, ಸ್ನಾತಕೋತ್ತರ ಪದವಿಯಲ್ಲಿ 136 ಜನ ವಿದ್ಯಾರ್ಥಿನಿಯರಿಗೆ ಪದವಿಪತ್ರ ಪ್ರದಾನ ಮಾಡಿ ರ್‍ಯಾಂಕ್ ವಿಜೇತ ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಕೆ.ಜೆ. ಸುರೇಶ್, ಡಾ. ಜಿ.ಆರ್. ಶಿವಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

**ಕನಕಪುರ ದೇಗುಲ ಮಠದಲ್ಲಿ ನಿರಂಜನ ಪಟ್ಟಾಧಿಕಾರ ಮಹೋತ್ಸವ**

ದಿನಾಂಕ 18.11.2018 ರಂದು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಕನಕಪುರ ದೇಗುಲ ಮಠದಲ್ಲಿ ನಿರಂಜನ ಪಟ್ಟಾಧಿಕಾರ ಮಹೋತ್ಸವವು ನೆರವೇರಿತು.

ಕನಕಪುರ ದೇಗುಲ ಮಠ ಹಾಗೂ ಮರಳೆ ಗವಿಮಠಗಳು ತಾಲ್ಲೂಕಿನ ಎರಡು ಕಣ್ಣುಗಳಿದ್ದಂತೆ. ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮೀಜಿಯವರು ಮಠದ ಅಭಿವೃದ್ಧಿಯ ಕನಸು ಕಂಡಿದ್ದರು. ಅವರು ಅಕಾಲಿಕವಾಗಿ ಲಿಂಗೈಕ್ಯರಾದುದರಿಂದ ಹಿರಿಯ ಶ್ರೀಗಳು ಬಳಲಬೇಕಾಯಿತು. ಈಗ ಪಟ್ಟಾಧಿಕಾರ ಹೊಂದಿರುವ ಶ್ರೀ ಚನ್ನಬಸವಸ್ವಾಮಿಗಳು ಮಠವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಬೇಕಿದೆ ಎಂದು ಶುಭ ಹಾರೈಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾದ ಪಿ.ಜಿ.ಆರ್. ಸಿಂಧ್ಯಾರವರು ವೀರಶೈವ-ಲಿಂಗಾಯಿತ ಎನ್ನುವುದು ಕೇವಲ ಒಂದು ಧರ್ಮವಲ್ಲ. ಬದುಕಲು ಕಲಿಸುವ ಒಂದು ಪರಂಪರೆಯಾಗಿದೆ. ಈ ಸಮುದಾಯದ ಮಠಗಳು ವಿಶ್ವವಿದ್ಯಾನಿಲಯಗಳಂತೆ ಕೆಲಸ ಮಾಡುತ್ತಿವೆ ಎಂದು ಶ್ಲಾಘಿಸಿದರು.

ಇದೇ ಸಮಾರಂಭದಲ್ಲಿ ದೊಡ್ಡಮರಳವಾಡಿ ಶಿವಮಠ, ಅತ್ತಿಹಳ್ಳಿ ಪಟ್ಟದ ಮಠ, ಮಳವಳ್ಳಿ ತಾಲ್ಲೂಕಿನ ನೆಲ್ಲಿಗೆರೆ ಪಟ್ಟದ ಮಠದ ಶ್ರೀಗಳವರ ಪಟ್ಟಾಧಿಕಾರ ಕಾರ್ಯಕ್ರಮಗಳೂ ನಡೆದವು.

ಕಾರ್ಯಕ್ರಮದಲ್ಲಿ ಡಾ. ಸಿ. ಶಿವಕುಮಾರಸ್ವಾಮಿಯವರಿಂದ ಸಂಪಾದಿತವಾದ 'ದೇಗುಲ ದರ್ಶನ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಶ್ರೀಗಳು, ಕೇಂದ್ರದ ಮಾಜಿ ಸಚಿವರಾದ ಶ್ರೀ ಎಂ.ವಿ. ರಾಜಶೇಖರನ್, ಸಂಸದರಾದ ಶ್ರೀ ಡಿ.ಕೆ. ಸುರೇಶ್, ಬಿಬಿಎಂಪಿ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ ಮುಂತಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ**

ದಿನಾಂಕ 19.11.2018 ರಂದು ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಪ್ರಸಾರಭಾರತಿಯ ಅಧ್ಯಕ್ಷರಾದ ಶ್ರೀ ಎ. ಸೂರ್ಯಪ್ರಕಾಶ್‌ರವರು ಮಾಧ್ಯಮದಲ್ಲಿ ಕಾರ್ಯ ನಿರ್ವಹಿಸಲು ಬರವಣಿಗೆ ಹಾಗೂ ಮಾತುಗಾರಿಕೆ ಹೇಗೆ ಮುಖ್ಯವೋ ಹಾಗೆಯೇ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ತಂತ್ರಜ್ಞಾನ ಮತ್ತು

ಕೌಶಲಗಳು ಮುಖ್ಯ. ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಭಾರತದ ಸಾಧನೆ ನಮಗೆ ಅಚ್ಚರಿ ಹುಟ್ಟಿಸುವಂತಿದೆ. ಸ್ವಾತಂತ್ರ್ಯೋತ್ತರದ ರಾಷ್ಟ್ರೀಯ ಬೆಳವಣಿಗೆಯಲ್ಲಿ ಈ ಕ್ಷೇತ್ರ ಮಹತ್ವದ ಕೊಡುಗೆಗಳನ್ನು ನೀಡುತ್ತಿದೆ. ಇದಕ್ಕೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ನಮ್ಮ ಭಾರತ ಸರ್ಕಾರ ಜುಲೈ 2015ರಲ್ಲಿ 'ಸ್ಕಿಲ್ ಇಂಡಿಯಾ' ಯೋಜನೆಯನ್ನು ರೂಪಿಸಿರುವುದು ಈ ವಲಯದ ಬೆಳವಣಿಗೆಗೆ ಮತ್ತಷ್ಟು ಪೂರಕವಾಗಿದೆ ಎಂದು ತಿಳಿಸಿದರು.

149 ಎಂ.ಟೆಕ್ ಪದವೀಧರರು, 96 ಜನ ಎಂ.ಬಿ.ಎ. ಪದವೀಧರರು ಹಾಗೂ 24 ಜನ ಕಾರ್ಪೋರೇಟ್ ಫೈನಾನ್ಸ್ ಪದವೀಧರರಿಗೆ ಘಟಿಕೋತ್ಸವ ಸಮಾರಂಭದಲ್ಲಿ ಪ್ರಮಾಣಪತ್ರಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀ ಕೆ.ಎಸ್. ಲೋಕೇಶ್, ಕುಲಪತಿಗಳಾದ ಶ್ರೀ ಬಿ.ಜಿ. ಸಂಗಮೇಶ್ವರ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಮೊದಲಾದವರು ಉಪಸ್ಥಿತರಿದ್ದರು.

**ಧಾರ್ಮಿಕ ಸಭೆ ಮತ್ತು ದೇವಸ್ಥಾನಗಳ ಉದ್ಘಾಟನಾ ಸಮಾರಂಭ**

ದಿನಾಂಕ 21.11.2018 ರಂದು ಚಾಮರಾಜನಗರ ಜಿಲ್ಲೆಯ ಗೂಳಿಪುರ ಗ್ರಾಮದಲ್ಲಿ ಧಾರ್ಮಿಕ ಸಭೆ ಹಾಗೂ ಶ್ರೀ ಪಾರ್ವತಿ ಅಮ್ಮನವರ ಮತ್ತು ಶ್ರೀ ಮಂಟೇಸ್ವಾಮಿ ದೇವಸ್ಥಾನಗಳ ಉದ್ಘಾಟನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿತ್ತು.

ಸಮಾರಂಭವನ್ನು ಉದ್ಘಾಟಿಸಿದ ಪರಮಪೂಜ್ಯ ಜಗದ್ಗುರುಗಳು ದೇವಸ್ಥಾನಗಳು ಶ್ರದ್ಧಾಕೇಂದ್ರಗಳಾಗಿ ಮನಃಪರಿವರ್ತನೆಯ ತಾಣಗಳಾಗಬೇಕು. ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ನಾವು ಮಾಡುವ ಕಾಯಕವೇ ನಮ್ಮ ಇರುವಿಕೆಯ ಗುರುತನ್ನು ನೀಡುತ್ತದೆ. ಹೀಗಾಗಿ ಎಲ್ಲರೂ ಸನ್ಮಾರ್ಗದಲ್ಲಿ ನಡೆಯುವ ಮೂಲಕ ಸಮಾಜಸೇವಾ ಕಾರ್ಯದಲ್ಲಿ ತೊಡಗಬೇಕಿದೆ ಎಂದು ತಿಳಿಸಿದರು.

ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿ ಭಾರತೀಯ ಪರಂಪರೆಯಲ್ಲಿ ದೇವಸ್ಥಾನಗಳಿಗೆ ವಿಶಿಷ್ಟ ಸ್ಥಾನವಿದೆ. ದೇವಸ್ಥಾನಗಳಿಲ್ಲದ ಊರುಗಳೇ ಇಲ್ಲ. ಇವು ಭಕ್ತಿ, ಜ್ಞಾನ ಮತ್ತು ಕಾಯಕದ ಮಹತ್ವವನ್ನು ಅರಿವಿಗೆ ತರುವ ತಾಣಗಳೂ ಆಗಿವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ದೇಗುಲ ಮಠ, ದೇವನೂರು, ವಾಟಾಳು, ಮಲ್ಲನಮೂಲೆ, ಹರವೆ, ಚಾಮರಾಜನಗರ, ಮುಡುಕುತೊರೆ, ಮೂಡುಗೂರು, ಗೌಡಹಳ್ಳಿ, ಮರಿಯಾಲ ಮುಂತಾದ ಮಠಗಳ ಶ್ರೀಗಳು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪದವಿ ಪ್ರದಾನ ಸಮಾರಂಭ**

ದಿನಾಂಕ 27.11.2018 ರಂದು ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ 11ನೆಯ ಪದವಿ ಪ್ರದಾನ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಉನ್ನತ ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್‌ರವರು ಇಂದು ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯ ಅಗತ್ಯವಿದೆ. ವಿಶ್ವವಿದ್ಯಾನಿಲಯಗಳಲ್ಲಿನ ಎಲ್ಲ ವಿಷಯಗಳ ಅಧ್ಯಯನಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಕ್ಷೇತ್ರಕಾರ್ಯ ಮಾಡಿಸಿ ಹೊಸ ಅನುಭವ ನೀಡುವುದರ ಮೂಲಕ ಅವರಲ್ಲಿನ ಚಿಂತನಾಕ್ರಮಗಳನ್ನು ಬೆಳೆಸಬೇಕಿದೆ ಎಂದರು.

ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಪದವಿ ವಿಭಾಗದಲ್ಲಿ 395, ಸ್ನಾತಕೋತ್ತರ ವಿಭಾಗದಲ್ಲಿ 435 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿವಿಧ ದತ್ತಿ ಪುರಸ್ಕಾರಗಳನ್ನು ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ. ಮಹದೇವಪ್ಪ, ಪರೀಕ್ಷಾ ಮಂಡಳಿ ನಿಯಂತ್ರಕರಾದ ಡಾ. ಪ್ರಭುಸ್ವಾಮಿ ಕಟ್ನವಾಡಿ ಉಪಸ್ಥಿತರಿದ್ದರು.

**ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಸಮಾರಂಭ**

ದಿನಾಂಕ 28.11.2018 ರಂದು ಮೈಸೂರಿನ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಮಾಜಿ ಶಾಸಕರಾದ ಶ್ರೀ ವಾಸು ಅವರ ಶೈಕ್ಷಣಿಕ ಸೇವೆಯನ್ನು ಅಭಿನಂದಿಸಿದ ಪರಮಪೂಜ್ಯ ಜಗದ್ಗುರುಗಳು ಗುಣಮಟ್ಟದ ಶಿಕ್ಷಣದಲ್ಲಿ ಯಾವುದೇ ರಾಜಿ ಆಗಬಾರದು. ಇದನ್ನು ಕಡ್ಡಾಯವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳು ಪಾಲನೆ ಮಾಡಬೇಕು. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಅವಕಾಶ ಕಲ್ಪಿಸುವುದೇ ನಿಜವಾದ ಶಿಕ್ಷಣ. ನಮ್ಮೊಳಗೆ ಇರುವಂತಹ ಸುಪ್ತ ಪ್ರತಿಭೆಯನ್ನು ಹೊರ ಬರುವಂತೆ ಮಾಡುವುದು ಶಿಕ್ಷಣದ ಗುರಿಯಾಗಿರುತ್ತದೆ. ಈ ಗುರಿಯನ್ನು ಹೊಂದಿರುವ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯು ಪ್ರಗತಿಹೊಂದಲಿ ಎಂದು ಶುಭ ಹಾರೈಸಿದರು.

ಸಮಾರಂಭವನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮಾಜಿ ಶಾಸಕರಾದ ಶ್ರೀ ವಾಸುರವರ ನಿಸ್ವಾರ್ಥ ಸೇವೆಯನ್ನು

ಶ್ಲಾಘಿಸಿ ಬಹುತೇಕ ಶಿಕ್ಷಣ ಸಂಸ್ಥೆಗಳು ಇಂದು ಹಣ ಗಳಿಕೆ ಮತ್ತು ವ್ಯಾಪಾರ ದೃಷ್ಟಿಯಿಂದ ಸ್ಥಾಪನೆಯಾಗುತ್ತವೆ. ಆದರೆ ಗುಣಮಟ್ಟದ ಶಿಕ್ಷಣ ನೀಡುವತ್ತ ಗಮನ ಹರಿಸಿ ಬೆಳವಣಿಗೆ ಹೊಂದುವುದರ ಬಗ್ಗೆ ಆಸಕ್ತಿ ತೋರುವುದಿಲ್ಲ. ಆದರೆ ವಾಸುರವರು ಲಾಭದ ದೃಷ್ಟಿಗಿಂತ ಸಾಮಾಜಿಕ ಪ್ರಯೋಜನದ ದೃಷ್ಟಿಯಲ್ಲಿ ಸೇವಾನಿರತರಾಗಿದ್ದಾರೆ ಎಂದು ತಿಳಿಸಿದರು.

ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ ಲಲಿತಾ ವಾಸು ಸ್ಮಾರಕ ಭವನ ಉದ್ಘಾಟಿಸಿದ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಎಂ. ವೀರಪ್ಪ ಮೊಯ್ಲಿಯವರು ಭಾರತದ ವಿದ್ಯಾರ್ಥಿಗಳು ಎಲ್ಲೇ ಹೋದರು ತಮ್ಮ ಕೌಶಲ್ಯಗಳಿಂದ ಗಮನ ಸೆಳೆಯುತ್ತಾರೆ. ಹಾಗಾಗಿ ಉತ್ತಮ ಗುಣಮಟ್ಟದ ಶಿಕ್ಷಣ ಇಲ್ಲಿನ ವಿದ್ಯಾರ್ಥಿಗಳಿಗೆ ದೊರೆಯಬೇಕಿದೆ. ಜೊತೆಗೆ ಆಗಾಗ ಪಠ್ಯಕ್ರಮಗಳನ್ನು ಬದಲಾಯಿಸಿ ಸಂಶೋಧನೆಗೆ ಆದ್ಯತೆ ನೀಡಬೇಕಿದೆ ಎಂದು ತಿಳಿಸಿ ಶ್ರೀ ವಾಸು ಅವರನ್ನು ಅಭಿನಂದಿಸಿದರು.

ಸಮಾರಂಭದಲ್ಲಿ ನಾಡಿನ ವಿವಿಧ ವಿಶ್ವವಿದ್ಯಾಲಯಗಳ ಹಾಲಿ ಹಾಗೂ ಮಾಜಿ ಕುಲಪತಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಚಿವರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಾ.ರಾ. ಮಹೇಶ್, ಸಂಸದರಾದ ಶ್ರೀ ಪ್ರತಾಪಸಿಂಹ, ಶಾಸಕರಾದ ಶ್ರೀ ತನ್ವೀರ್ ಸೇಠ್, ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಹೆಚ್.ಡಿ. ಚೌಡಯ್ಯ ಉಪಸ್ಥಿತರಿದ್ದರು.

**ಮಲೆ ಮಹದೇಶ್ವರ ಬೆಟ್ಟದಲ್ಲಿ ವಸತಿಗೃಹ ಉದ್ಘಾಟನಾ ಸಮಾರಂಭ**

30.11.2018 ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಸುತ್ತೂರು ಮಠದಿಂದ ನಿರ್ಮಿಸಲಾಗಿರುವ 63 ವಸತಿಗೃಹಗಳು ಹಾಗೂ ಸುತ್ತೂರು ಮಠದ ಅತಿಥಿಗೃಹದ ಉದ್ಘಾಟನಾ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಸುತ್ತೂರು ಮಠಕ್ಕೂ ಶ್ರೀ ಮಹದೇಶ್ವರ ಬೆಟ್ಟಕ್ಕೂ ಮೊದಲಿನಿಂದಲೂ ನಿಕಟವಾದ ಸಂಬಂಧವಿದೆ. ಹೀಗಾಗಿ ಈ ಬೆಟ್ಟದಲ್ಲಿ ಸುತ್ತೂರು ಮಠದ ಶಾಖೆಯನ್ನು ಸಹ ಆರಂಭಿಸಲಾಗಿದ್ದು ಭಕ್ತರ ಅನುಕೂಲಕ್ಕಾಗಿ ಅತಿಥಿಗೃಹವನ್ನು ಸಹ ನಿರ್ಮಿಸಲಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ವಸತಿಗೃಹಗಳ ಉದ್ಘಾಟನೆಯನ್ನು ನೆರವೇರಿಸಿದ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸುತ್ತೂರು ಶ್ರೀಗಳವರ ಸೂಚನೆಯ ಮೇರೆಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಬರುವ ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಲು ತಿರುಪತಿ ಮಾದರಿಯಲ್ಲಿ ಮೆಟ್ಟಿಲುಗಳನ್ನು ನಿರ್ಮಾಣ ಮಾಡಲಾಗುವುದು. ಹಲವು ಜನಪರ ಕೆಲಸಗಳಲ್ಲಿ ತೊಡಗಿರುವ ಸುತ್ತೂರು ಶ್ರೀಮಠದ ಜಾತ್ರೆಯೆಂದರೆ

ಅದು ದೇಶಕ್ಕೆ ಮಾದರಿಯಾಗುವ ಮೂಲಕ ಇತಿಹಾಸ ಸೃಷ್ಟಿಸಿದೆ ಎಂದು ಶ್ರೀಮಠದ ಸೇವೆಯನ್ನು ಸ್ಮರಿಸಿದರು.

ಡಾ. ಶಾಮನೂರು ಶಿವಶಂಕರಪ್ಪನವರು ಸುತ್ತೂರು ಮಠವು ಒಳ್ಳೆಯ ಕೆಲಸಗಳನ್ನು ಮಾಡಲು ಯಾವಾಗಲೂ ಮುಂದಾಗಿರುತ್ತದೆ. ಇದಕ್ಕೆ ಭಕ್ತರ ಅನುಕೂಲಕ್ಕಾಗಿ ಶ್ರೀಮಠವು ಕಟ್ಟಿಸಿರುವ ಅತಿಥಿಗೃಹವೇ ಸಾಕ್ಷಿಯಾಗಿದೆ ಎಂದು ಶ್ರೀಮಠದ ಸೇವೆಯ ಬಗ್ಗೆ ಅಭಿಮಾನದ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ವಾಟಾಳು ಮಠದ ಶ್ರೀಗಳು, ಸಚಿವರುಗಳಾದ ಶ್ರೀ ಪುಟ್ಟರಂಗಶೆಟ್ಟಿ, ಶ್ರೀ ಡಿ.ಸಿ. ತಮ್ಮಣ್ಣ, ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಾ.ರಾ. ಮಹೇಶ್, ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ವಿಧಾನ ಪರಿಷತ್ ಉಪ ಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡ, ಸದಸ್ಯರಾದ ಶ್ರೀ ಶ್ರೀಕಂಠೇಗೌಡ, ಶಾಸಕರಾದ ಶ್ರೀ ನರೇಂದ್ರ, ಶ್ರೀ ನಿರಂಜನಕುಮಾರ್ ಮುಂತಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಸಂಗೀತ ಮಹಾಸಭೆಯ 25ನೇ ಸಂಗೀತ ಸಮ್ಮೇಳನ**

ದಿನಾಂಕ 2.12.2018 ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿರುವ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭೆಯ 25ನೇ ಸಂಗೀತ ಸಮ್ಮೇಳನವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಮೂರು ದಿನಗಳವರೆಗೆ ನಡೆದ ಈ ಸಮ್ಮೇಳನವನ್ನು ಉದ್ಘಾಟಿಸಿದ ಇನ್‌ಫೋಸಿಸ್ ಫೌಂಡೇಷನ್ನಿನ ಮುಖ್ಯಸ್ಥರಾದ ಡಾ. ಸುಧಾ ಮೂರ್ತಿಯವರು ಮೈಸೂರು ಸಂಗೀತದ ಸಾಂಸ್ಕೃತಿಕ ತವರೂರಾಗಿದೆ. ಹಿಂದಿನಿಂದಲೂ ಇಲ್ಲಿನ ಒಡೆಯರು ಸಂಗೀತ ಹಾಗೂ ಕಲೆಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಹೀಗೆ ಬೆಳೆದಿರುವ ಕಲೆಗಳನ್ನು ಜೆಎಸ್‌ಎಸ್ ಸಂಸ್ಥೆಯು ನಿರಂತರವಾಗಿ ಪ್ರೋತ್ಸಾಹಿಸುತ್ತಿದೆ. ಜೊತೆಗೆ ಶಿಕ್ಷಣ, ಆರೋಗ್ಯ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ದೇಶ ವಿದೇಶಗಳಲ್ಲಿಯೂ ಸೇವೆ ಸಲ್ಲಿಸುತ್ತಿದೆ ಎಂದು ನುಡಿದರು.

ಸಮ್ಮೇಳನದ ಅಧ್ಯಕ್ಷರಾದ ಡಾ. ವಾಗೀಶ್‌ರವರು ಆಧುನಿಕ ಯುಗದಲ್ಲಿ ಸಂಗೀತ ಕ್ಷೇತ್ರ ಸಾಕಷ್ಟು ಬೆಳೆದಿದೆ. ಯಾವುದೇ ಕಲೆಗಳ ಬೆಳವಣಿಗೆಗೆ ಹೊಸ ಪ್ರಯೋಗ, ಹೊಸ ಚಿಂತನೆಗಳು ಅತ್ಯವಶ್ಯಕ. ಸಂಗೀತವು ಅಧ್ಯಾತ್ಮ ಮತ್ತು ಉತ್ತಮ ಜೀವನ ಕಟ್ಟಿಕೊಳ್ಳಲು, ಮನಸ್ಸಿನ ಕಲ್ಮಶಗಳನ್ನು ನಿಯಂತ್ರಿಸಲು ಸಹಾಯಕವಾಗುತ್ತದೆ ಎಂದು ನುಡಿದರು.

ಸಮ್ಮೇಳನದಲ್ಲಿ ಹಿರಿಯ ಕಲಾಪೋಷಕರಾದ ಶ್ರೀಮತಿ ಮಾಧುರಿ ತಾತಾಚಾರಿ ರವರಿಗೆ ಸಂಗೀತ ಸೇವಾನಿಧಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗಾಯನ ವಿಭಾಗದಲ್ಲಿ

ವಿದ್ವಾನ್ ನಾರಾಯಣ ಅಯ್ಯಂಗಾರ್, ಕೊಳಲು ವಾದನದಲ್ಲಿ ವಿದ್ವಾನ್ ಕೆ.ಯು. ರಾಘವೇಂದ್ರ, ನಾದಸ್ವರ ವಿಭಾಗದಲ್ಲಿ ವಿದ್ವಾನ್ ಎಂ. ಲಕ್ಷ್ಮಣ್ ಇವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಶ್ರೀ ಕೆ.ವಿ. ಮೂರ್ತಿ ಮುಂತಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮತ್ತು ಕೃತಿ ಬಿಡುಗಡೆ ಸಮಾರಂಭ**

ದಿನಾಂಕ 6.12.2018 ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಹಾಗೂ ಕೃತಿ ಬಿಡುಗಡೆ ಸಮಾರಂಭವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಭಾರತದ ಜಾಗತಿಕ ಆಶೋತ್ತರಗಳು ಮತ್ತು ಸ್ಥಳೀಯ ಪಂಥಾಹ್ವಾನಗಳು ಕುರಿತಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಅರೆಕಾಲಿಕ ನಿರ್ದೇಶಕರಾದ ಶ್ರೀ ಎಸ್. ಗುರುಮೂರ್ತಿಯವರು ಉಪನ್ಯಾಸ ನೀಡಿದರು. ಉದ್ಯಮಶೀಲತೆಯೆಂಬುದು ವ್ಯಕ್ತಿಯ ಶ್ರಮ ಹಾಗೂ ಅನುಭವದಿಂದ ಹೊರತು ಆತನ ವಿದ್ಯಾರ್ಹತೆಯಿಂದಲ್ಲ. ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ಮೊದಲಿಗೆ ಕೌಶಲ್ಯಗಳನ್ನು ರೂಢಿಸಿಕೊಳ್ಳುವುದರತ್ತ ಗಮನಹರಿಸಬೇಕಿದೆ, ಹಾಗಾದಾಗ ದೇಶದ ಅಭಿವೃದ್ಧಿ ಸಾಧ್ಯ ಎಂದು ತಮ್ಮ ಉಪನ್ಯಾಸದಲ್ಲಿ ವಿವರಿಸಿದರು.

ಇಸ್ರೋ ಮಾಜಿ ಅಧ್ಯಕ್ಷರು ಹಾಗೂ ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ವಿಭಾಗದ ಪ್ರಾಧ್ಯಾಪಕರಾದ ವಿಜ್ಞಾನಿ ಡಾ. ಎ.ಎಸ್. ಕಿರಣ್‌ಕುಮಾರ್‌ರವರ "ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಸಾಮಾಜಿಕ ಅನ್ವಯ" ಕೃತಿಯನ್ನು ಚೆನ್ನೈನ ಐಎಂಸಿಟಿಎಫ್ ಟ್ರಸ್ಟ್‌ನ ಕಾರ್ಪೊರೇಟ್ ಡೈರೆಕ್ಟರ್ ಆದ ಶ್ರೀಮತಿ ಆರ್. ರಾಜಲಕ್ಷ್ಮಿಯವರು ಬಿಡುಗಡೆ ಮಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರಿನ ಎನ್.ಆರ್. ಗ್ರೂಪ್ಸ್‌ನ ಅಧ್ಯಕ್ಷರಾದ ಶ್ರೀ ಆರ್. ಗುರುರವರು ವಹಿಸಿದ್ದರು.

# ಪ್ರಸಾದ



## ಕೃತಿ-ಸ್ವೀಕೃತಿ

**ಹೀಗಿರಲಿ ನಮ್ಮ ಬದುಕು**
ಸಂ.: ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು
ಪ್ರಕಾಶನ: ಚನ್ನಬಸವೇಶ್ವರ ಪ್ರಕಾಶನ
ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ
ರಬಕವಿ. ಪು. 64, ಬೆಲೆ : 60/-

**ಯದ್ಭಾವಂ ತದ್ಭವತಿ**
**(ಭಾವನೆ ಬದಲಾಗದೆ ಬದುಕು ಬದಲಾಗದು)**
ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು
ಪ್ರಕಾಶನ: ಶ್ರೀ ಚನ್ನಬಸವೇಶ್ವರ ಪ್ರಕಾಶನ
ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ
ರಬಕವಿ. ಪು. 100, ಬೆಲೆ : 70/-

**ಅನುಭಾವದಂಗಳ**
ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು
ಪ್ರಕಾಶನ: ಶ್ರೀ ಚನ್ನಬಸವೇಶ್ವರ ಪ್ರಕಾಶನ
ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮ
ರಬಕವಿ. ಪು. 100, ಬೆಲೆ : 70/-

**ರೇವಣಸಿದ್ಧ : ಹಿನ್ನೆಲೆ - ಮುನ್ನೆಲೆ**
ನಾಡೋಜ ಡಾ. ಎಂ. ಚಿದಾನಂದಮೂರ್ತಿ
ಪ್ರಕಾಶನ: ಹೆಚ್‌ಕೆಎಲ್ ಅಡಿಗ ಐಬಿಎಚ್
ಪ್ರಕಾಶನ, ರಾಮರಾವ್ ಲೇಔಟ್
ಬೆಂಗಳೂರು
ರಬಕವಿ. ಪು. 124, ಬೆಲೆ : 90/-

**ಕೊಡಗಿನ ಕೆಂಬಟ್ಟಿಗಳ ಸಂಸ್ಕೃತಿ**
ಡಾ. ಎಂ.ಜಿ. ನಾಗರಾಜ್
ಪ್ರಕಾಶನ: ಪ್ರೊ. ಬಿ. ಇಸ್ಮಾಯಿಲ್
ನಿರ್ದೇಶಕರು, ಪ್ರಸಾರಾಂಗ, ಮಂಗಳೂರು
ವಿಶ್ವವಿದ್ಯಾನಿಲಯ, ಮಂಗಳೂರು
ಗಂಗೋತ್ರಿ.
ಪು. 504, ಬೆಲೆ : 500/-

**ಜಗದ ಬೆಳಕು ಗುರು**
ಡಾ. ಪಳನಿಸ್ವಾಮಿ ಮೂಡುಗೂರು
ಪ್ರಕಾಶನ: ಸ್ಕಂದಶ್ರೀ ಪ್ರಕಾಶನ,
ಮೂಡುಗೂರು, ಗುಂಡ್ಲುಪೇಟೆ ತಾಲ್ಲೂಕು
ಪು. 84, ಬೆಲೆ : 50/-

**Kalachakra Ephemeris**
Dr. S.K. Jain's
ಪ್ರಕಾಶನ: Express Press, Queens
Road, Bangalore
Price : 90/-

**ನರೇಗಾ-ಹೆಜ್ಜೆ ಗುರುತು**
**(2013-17 ವಿಶಿಷ್ಟ ಸಾಧನೆಯ ಕಿರುಹೊತ್ತಿಗೆ)**
ಜಿಲ್ಲಾ ನರೇಗಾ ತಂಡ, ಮಂಗಳೂರು
ಪ್ರಕಾಶನ: ನರೇಗಾ ಕೋಶ, ದಕ್ಷಿಣ ಕನ್ನಡ
ಜಿಲ್ಲಾ ಪಂಚಾಯತ್, ಮಂಗಳೂರು.

**ಜಲಧಾರ**
**(2017-18 ವಿಶಿಷ್ಟ ಸಾಧನೆಯ ಕಿರುಹೊತ್ತಿಗೆ)**
ಜಿಲ್ಲಾ ನರೇಗಾ ತಂಡ, ಮಂಗಳೂರು
ಪ್ರಕಾಶನ: ನರೇಗಾ ಕೋಶ, ದಕ್ಷಿಣ ಕನ್ನಡ
ಜಿಲ್ಲಾ ಪಂಚಾಯತ್, ಮಂಗಳೂರು.

**ಸ್ವಚ್ಛತಾ ನೀತಿ - 2017**
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್,
ಸ್ವಚ್ಛಭಾರತ್ ಮಿಷನ್, ಮಂಗಳೂರು.
ಪ್ರಕಾಶನ: ಸ್ವಚ್ಛಭಾರತ್ ಮಿಷನ್,
ಜಿಲ್ಲಾ ನೆರವು ಘಟಕ, ದಕ್ಷಿಣ ಕನ್ನಡ
ಜಿಲ್ಲಾ ಪಂಚಾಯತ್, ಮಂಗಳೂರು.

**ಗವಿ ಶ್ರೀ ಶಾಂತಾವಧೂತರ ದಿವ್ಯಚರಿತಾಮೃತ**
ನಾ.ರ. ಸುತ, ಪುಟ್ಟಪ್ಪ, ಬೆಳಗೆರೆ
ಪ್ರಕಾಶನ: R. Kamalamma, Maapitha
Publication, Chitradurga, Sri Shantha
Ramatirtha Chudramatha Krupa
Iyyanna pete, Chitradurga.